
01-15 ಮೇ, 2011
KARKAN/2007/20389
12-00
ಸತ್ಯಸುದ್ದಿಯ
ಪ್ರಸ್ತುತ
ಪಾಕ್ಷಿಕ
ಅಭದ್ರತೆಯಲ್ಲಿ
ಕಾರ್ಮಿಕರು

# إيمان الدولية للسفريات

# Iman INTERNATIONAL TRAVELS

معتمدة لدي : الحكومة الهندية ترخيص ركم : ٠٠٢٤١/بوم/بارت/+١٠٠٠/٣/٥٣٠/٨٤

**RECG. BY GOVT. OF INDIA, NO. : 00241/BOM/PART/1000+/3/530/84**

## Umrah Package 2011

## Mangalore-Makkah-Mangalore

**3Star + Accomodation**

**₹43,000**

## Umrah Stamping - ₹4,900

International Recruitment, Saudi Wakala Service, Visa Processing, Emigration, Attestation, Haj Umrah Packages, Tour Packages, Air, Railway & Bus Tickets

Shop No. 1, First Floor, Oberle Towers, Balmatta, Mangalore - 575 001.
Tel. : 0824-2428010 / 4268664 Fax : 2441080 • Mobile : 09845162277

OUR BRANCHES

JEEDAH : +966-502371131 • MUMBAI : +91-9167880689 • CALICUT : +91-9846255411
KASARAGOD : +91-9743685264 • HYDERABAD : +91-9920411463 • DELHI : +91-9892699532

heraa_hits@hotmail.com • www.heraa.in



*Imported furniture with stylish*

**Metal MAGIC**
THE FURNITURE MALL

Cell : 9008616456
9448388633
Tel : + 91 8244261233
+ 91 8244271233
+ 91 8244281233
metalmagicmlr@gmail.com

**APS Complex, Near Highland Hospital, Falnir Road, Mangalore**

ಸತ್ಯಸುದ್ದಿಯ

# ಪ್ರಸ್ತುತ

ಪಾಕ್ಷಿಕ

PRASTHUTHA KANNADA FORTNIGHTLY

ಮೇ 1-15, 2011 ಸಂಪುಟ : 5 ಸಂಚಿಕೆ : 8 ಬೆಲೆ : 12.00 ಪುಟ : 60 ಮಂಗಳೂರು




## ಅಂತರಾಳದಲ್ಲಿ...


**ಅಂಕಣಗಳು**

| | |
|---|---|
| ಮೀಟುಗೋಲು | 05 |
| ಪ್ರತಿಕ್ರಿಯೆ | 04 |
| ರಾಷ್ಟ್ರೀಯ ವಾರ್ತೆ | 55 |
| ಅಂತಾರಾಷ್ಟ್ರೀಯ | 57 |
| ಮಿನಿಕಥೆ: | 20 |
| ಸುದ್ದಿಸಮುಚ್ಚಯ | 50 |
| ಇಂಚರ | 34 |
| ಇನಿದನಿ | 43 |

**ಲೇಖನಗಳು**

| | |
|---|---|
| ಅರಬ್ ಜಗತ್ತಿನಲ್ಲಾದ... | 15 |
| ದಿಕ್ಕೆಟ್ಟ ಅಣ್ಣಾ | 26 |
| ಖೊಟ್ಟಿ ವಾದದ ಬಿಟ್ಟಿ ಪ್ರದರ್ಶನ | 36 |
| ಮುಸ್ಲಿಂ ಪ್ರಾಬಲ್ಯದ ಸೀಟುಗಳು | 38 |
| ನೌಶಾದ್ ಖಾಸಿಂಜಿ | 44 |

**ವಿಶೇಷ ಲೇಖನ**

| | |
|---|---|
| ಅಭದ್ರತೆಯಲ್ಲಿ ಕಾರ್ಮಿಕರು | 08 |




ಅಭದ್ರತೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಇನ್ನಾದರೂ ಎಚ್ಚೆತ್ತುಕೊಳ್ಳವರೇ? -8



ಜನಾಂದೋಲನದಿಂದ ಅರಬ್ ಜಗತ್ತಿನಲ್ಲಿಯಾದ ಬದಲಾವಣೆಯಾದರೂ ಏನು? -



ಭ್ರಷ್ಟಾಚಾರ ವಿರೋಧಿ ಆಂದೋಲನ ಅಣ್ಣಾಹಝಾರೆ ಯಶಸ್ವಿಯಾದರೇ? - 26



ಸ್ವಾಮೀ ರಾಮ್‌ದೇವ್‌ರವರ ಬಿಟ್ಟಿ ಪ್ರದರ್ಶನದಿಂದ ಜನರು ಮೂರ್ಖರಾಗುತ್ತಿದ್ದಾರೆಯೇ? -36


**ಪ್ರಧಾನ ಸಂಪಾದಕರು**
ಕೆ.ಎಂ. ಶರೀಫ್

**ಸಂಪಾದಕರು**
ಫಯಾಝ್ ಎನ್.

**ಸಹ ಸಂಪಾದಕರು**
ಶಬೀರ್ ಕೆ.

ಸಂಪಾದಕ ಮಂಡಳಿ:

ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.

ಗ್ರಾಫಿಕ್ ಡಿಸೈನರ್
ಎಂ. ಶಬೀರ್

ವ್ಯವಸ್ಥಾಪಕರು
ಅಬ್ದುಲ್ ಖಾದರ್ ಪಿ.



PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com


Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

**ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನ, ಬರಹಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.**
**ಹೊಸ ಕಚೇರಿ ವಿಳಾಸ ಇಂತಿದೆ.**

**ಪ್ರಸ್ತುತ ಪಾಕ್ಷಿಕ**
**ಡಿ.ನಂ.10-23-1009(1)**
**ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ**
**ಯತೀಮ್‌ಖಾನಾ ಹಾಲ್ ಬಳಿ, ಬಂದರ್**
**ಮಂಗಳೂರು-1**

## ಮಾನವ ಸಂಪನ್ಮೂಲದ ಸದುಪಯೋಗಕ್ಕೆ ಯೋಜನೆ ರೂಪಿಸಲಿ

ಇದೀಗ ಭಾರತದ ಜನಸಂಖ್ಯೆ 121 ಕೋಟಿಗೇರಿದೆ. ಜನಸಂಖ್ಯೆ ಏರಿದಂತೆಲ್ಲಾ ಆಹಾರದ ಕೊರತೆಯು ಕಂಡು ಬರುವುದೆಂದು ಅನೇಕ ತಜ್ಞರು ಹೇಳಿಕೊಂಡಿದ್ದಾರೆ. ಸರಕಾರ ಕೂಡ ಇದನ್ನು ಸಮರ್ಥಿಸಿಕೊಂಡು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ.

ಮಾಲ್ಥಸ್‌ನ ಜನಸಂಖ್ಯಾ ಸಿದ್ಧಾಂತದ ಪ್ರಕಾರ ಜನಸಂಖ್ಯೆಯು 1,2,4,8,16... ಹೀಗೆ ಬೆಳವಣಿಗೆಯಾದರೆ ಆಹಾರೋತ್ಪಾದನೆಯು 1,2,3,4,5... ಹೀಗೆ ಬೆಳವಣಿಯಾಗುತ್ತದೆ. ಮಾಲ್ಥಸ್‌ನ ಪ್ರಕಾರ ತನ್ನ ಸಿದ್ಧಾಂತದ ಪ್ರತಿಪಾದನೆಯ ಇಷ್ಟು ವರ್ಷಗಳ ಬಳಿಕ ಇದೀಗ ಆಹಾರದ ತೀವ್ರ ಕೊರತೆ ಕಂಡು ಬರಬೇಕಾಗಿತ್ತು. ಆದರೆ ಹಾಗಾಗಲಿಲ್ಲ.

ಅಲ್ಲಾಹನು ಸ್ವತಃ ಕುರ್‌ಆನ್‌ನಲ್ಲಿ ತಿಳಿಸಿದ್ದಾನೆ, ''ನೀವು ಹಸಿವಿನ ಭಯದಿಂದ ನಿಮ್ಮ ಮಕ್ಕಳನ್ನು ಕೊಲ್ಲಬೇಡಿರಿ. ಅವರಿಗೂ, ನಿಮಗೂ ಆಹಾರ ನೀಡುವವನು ನಾನಾಗಿದ್ದೇನೆ.

ಆದುದರಿಂದ ಭಾರತವು ಮಾನವ ಸಂಪನ್ಮೂಲವನ್ನು ಸದುಪಯೋಗಪಡಿಸಿಕೊಳ್ಳುವ ಯೋಜನೆ ರೂಪಿಸಬೇಕಾಗಿದೆ. ಅಲ್ಲದೆ ಭಾರತವು ಒಂದು ಯುವ ಜನಾಂಗ ಹೊಂದಿರುವ ದೇಶವಾಗಿದೆ. ಅನೇಕ ದೇಶಗಳು ಇಂದು ಯುವ ಜನಾಂಗದ ಕೊರತೆಯನ್ನು ಎದುರಿಸುತ್ತಿದೆ ಎಂಬುದನ್ನು ನಾವು ಗಮನಿಸಬೇಕಾಗಿದೆ.

ಮೊನ್ನೆ ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಜಯಗಳಿಸಿದಾಗ ಕೆಲವೆಡೆ ವಿಜಯೋತ್ಸವದ ಸಲುವಾಗಿ ರಾಷ್ಟ್ರಧ್ವಜ ಹಾರಿಸುವ ಬದಲು ಭಗವಾಧ್ವಜ ಹಾರಿಸಿದ್ದಾರೆ. ಆದರೆ ಈ ವಿಜಯೋತ್ಸವವು ಭಾರತದ ಪರ ಅಥವಾ ಪಾಕ್ ಆಟಗಾರರ ವಿರುದ್ಧವಾಗಿರದೆ ಪಾಕ್ ಮುಸಲ್ಮಾನರ ವಿರುದ್ಧವಾಗಿತ್ತು ಎಂಬುದು ಕ್ರಿಕೆಟ್ ಅಭಿಮಾನಿಗಳ ಅಂಬೋಣ.

ಅಬ್ದುಲ್ ಜಲೀಲ್, ನಂದಾವರ



## ಮುಸ್ಲಿಮರಿಗೆ ನ್ಯಾಯದ ನಿರಾಕರಣೆ

ಭಾರತದ ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನತೆಗೆ ನಂಬಿಕೆಯೇ ಇಲ್ಲವಾಗಿದೆ. ಮುಸ್ಲಿಮರ ಮೇಲೆ ಕೋಮುವಾದಿ ಶಕ್ತಿಗಳು ದಾಳಿ ನಡೆಸಿ ಹಲವು ವರ್ಷಗಳಾದರೂ ಸಂತ್ರಸ್ತ ಮುಸ್ಲಿಮರಿಗೆ ಇಂದಿಗೂ ನ್ಯಾಯ ದಕ್ಕಿಲ್ಲ.

1983ರಲ್ಲಿ ಅಸ್ಸಾಂನ ನೆಲ್ಲಿಯಲ್ಲಿ ಭೀಕರವಾಗಿ ಮುಸ್ಲಿಮರ ಹತ್ಯಾಕಾಂಡ ನಡೆದಿತ್ತು. ಆದರೆ ದಾಳಿಗೊಳಗಾದ ಮುಸ್ಲಿಮರಿಗೆ ಈವರೆಗೆ ಯಾವುದೇ ಪರಿಹಾರ ದೊರೆತಿಲ್ಲ. ಅಂದರೆ ನೆಲ್ಲಿಯಲ್ಲಿ ಭೀಕರ ಹತ್ಯಾಕಾಂಡ ನಡೆದು 28 ವರ್ಷಗಳು ಕಳೆದಿವೆ. ನ್ಯಾಯಾಂಗದ ಕುರುಡು ನರ್ತನದಿಂದಾಗಿ ಅಲ್ಲಿನ ಮುಸ್ಲಿಮರಿಗೆ ನ್ಯಾಯವು ಮರೀಚಿಕೆಯಾದಂತಾಗಿದೆ. ನೆಲ್ಲಿ ಹತ್ಯಾಕಾಂಡ ಬಳಿಕ ಭಾರತದಲ್ಲಿ ಸಿಖ್ಖರ ನರಮೇಧ ನಡೆದಿತ್ತು. ಆದರೆ ಸರಕಾರವು ಸಿಖ್ಖರ ಬಳಿ ಕ್ಷಮೆ ಯಾಚಿಸಿದ್ದು ಮಾತ್ರವಲ್ಲದೇ ಸಂತ್ರಸ್ತರಿಗೆ ಪರಿಹಾರವನ್ನೂ ನೀಡಿದೆ.

ಸಮಾನತೆಯನ್ನು ಹೊಂದಿರುವ ಈ ದೇಶದಲ್ಲಿ ನಿಜವಾಗಿಯೂ ಮುಸ್ಲಿಮರಿಗೆ ನ್ಯಾಯದ ನಿರಾಕರಣೆ ನಡೆಯುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಶಬ್ಬೀರ್ ಅಲಿ, ಬೆಂಗಳೂರು

## ಪ್ರತಿ ನಾಲ್ಕರಲ್ಲೋರ್ವ ಭ್ರಷ್ಟ

ಈ ದೇಶದಲ್ಲಿ ಭ್ರಷ್ಟಾಚಾರವು ಎಷ್ಟೊಂದು ವ್ಯಾಪಕವಾಗಿದೆ ಎಂದರೆ ದೇಶದ ಪ್ರತಿ 4 ಜನರಲ್ಲಿ ಒಬ್ಬ ಭ್ರಷ್ಟಾಚಾರ ನಡೆಸಿದ ಧೂರ್ತ ಕಾಣ ಸಿಗುತ್ತಾನೆ.

ಇದೀಗ ಜನಲೋಕಪಾಲ ಮಸೂದೆ ಕರಡು ರಚನ ಸಮಿತಿಯ ಸಹಾಧ್ಯಕ್ಷ, ಹಿರಿಯ ನ್ಯಾಯವಾದಿ ಶಾಂತಿ ಭೂಷಣ್ ಸ್ವತಃ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವುದು ಮೇಲಿನ ಮಾತನ್ನು ಸಾಬೀತುಪಡಿಸುತ್ತದೆ. ಈ ದೇಶದ ಪರಿಸ್ಥಿತಿ ''ಸರ್ವಂ ಭ್ರಷ್ಟಮಯಂ'' ಎಂಬಂತಾಗಿದೆ.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

# ಉರಿಯುತ್ತಿರುವ ಭಾರತವನ್ನೇ ಪ್ರಕಾಶಿಸುತ್ತಿದೆ ಎಂದು ನಂಬಿಸಲು ಹೊರಟವರು...

ಅಂದೊಮ್ಮೆ ಭಾರತೀಯರನ್ನೆಲ್ಲ ಮೋಸಗೊಳಿಸಲು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ವಿಫಲ ಯತ್ನ ನಡೆಸಿತ್ತು. 'ಇಂಡಿಯಾ ಈಸ್ ಶೈನಿಂಗ್' (ಭಾರತ ಪ್ರಕಾಶಿಸುತ್ತಿದೆ) ಎಂದು ಅಬ್ಬರದ ಪ್ರಚಾರ ನಡೆಸಿದ ಎನ್‌ಡಿಎ ಸರಕಾರವು ಭಾರತೀಯರ ವಾಸ್ತವಸ್ಥಿತಿಯನ್ನು ಮರೆಮಾಚಲು ಪ್ರಯತ್ನಿಸಿ ಸೋತು ಹೋಗಿತ್ತು. ಅನಂತರ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೇರುವಲ್ಲಿ ಸೋಲುತ್ತಲೇ ಇದೆ. ಅದೇ ಹಾದಿಯಲ್ಲಿ ಸಾಗುತ್ತಿರುವ ಯುಪಿಎ ಸರಕಾರ ಕೂಡ ಭಾರತೀಯರ ವಾಸ್ತವ ಸಂಗತಿಯನ್ನು ಮರೆಮಾಚಲು ಯತ್ನಿಸಿ ಇದೀಗ ಪೇಚಿಗೆ ಸಿಲುಕಿದೆ. ಬಡತನ, ಹಸಿವಿನಿಂದ ಉರಿಯುತ್ತಿರುವ ಭಾರತವನ್ನು ಪ್ರಕಾಶಿಸುತ್ತಿದೆ ಎಂದು ನಂಬಿಸಲು ಯತ್ನಿಸಿ ಸೋತಿದೆ. ಮೊನ್ನೆಯಷ್ಟೇ ಸುಪ್ರೀಮ್ ಕೋರ್ಟ್ ಯೋಜನಾ ಆಯೋಗಕ್ಕೆ ಸೂಚನೆಯೊಂದನ್ನು ನೀಡಿದ್ದು, ಇಲ್ಲಿ ಬಡವರು ಮತ್ತು ಶ್ರೀಮಂತರು ಎಂಬ ನೆಲೆಯಲ್ಲಿ ಎರಡು ಭಾರತವಿರಲು ಸಾಧ್ಯವಿಲ್ಲ. ಬಿಪಿಎಲ್ ಜನಸಂಖ್ಯೆಯನ್ನು ಒಟ್ಟು ಜನಸಂಖ್ಯೆಯ ಶೇ.36ಕ್ಕೆ ಮೊಟಕುಗೊಳಿಸಿರುವ ಉದ್ದೇಶವನ್ನು ಸ್ಪಷ್ಟಪಡಿಸುವಂತೆ ತಾಕೀತು ಮಾಡಿದೆ.

ಆಡಳಿತ ಪಕ್ಷಗಳು ಹೀಗೆ ಭಾರತದ ವಸ್ತುಸ್ಥಿತಿಯನ್ನು ಮರೆಮಾಚಿ ತಮ್ಮ ಅನುಕೂಲಕ್ಕೆ ತಕ್ಕಂತೆ ಭಾರತದ ಕುರಿತು ಹೇಳಿಕೆ, ವರದಿ ನೀಡುತ್ತಿರುವುದು ಇದೇ ಮೊದಲೇನಲ್ಲ. ತಮಗೆ ಬೇಕಾದಂತೆ ಆಯೋಗಗಳ ಮೂಲಕ ವರದಿ ಸಿದ್ಧಪಡಿಸುವ ಕಲೆಯು ರಾಜಕೀಯ ಪಕ್ಷಗಳಿಗೆ ಕರಗತವಾಗಿದೆ. ಭಾರತದಲ್ಲಿ ಅಪಾರ ಸಂಖ್ಯೆಯ ಜನರು ಹಸಿವು ಮತ್ತು ಬಡತನದಿಂದ ಕಂಗಾಲಾಗಿ, ಸಾವನ್ನಪ್ಪುತ್ತಿದ್ದಾರೆ. ಇದೇ ಹೊತ್ತಿಗೆ ನಮ್ಮ ಆಡಳಿತ ವ್ಯವಸ್ಥೆಯು ಅಭಿವೃದ್ಧಿಯ ಹೆಸರಿನಲ್ಲಿ ಬಡವರನ್ನೇ ಇಲ್ಲವಾಗಿಸುವ ಅಥವಾ ಬಡವರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಿಸುವ ಮೂಲಕ ದೇಶದ ಬಡವರ ಸಂಖ್ಯೆಯನ್ನು ಇಳಿಸುತ್ತಿದೆ !

ಈ ಹಿಂದೆ ಸರಕಾರವು ನೀಡಿದ್ದ ಸುಳ್ಳು ಅಂಕಿಅಂಶಗಳನ್ನು ಗಮನಿಸಿದರೆ ಸರಕಾರಗಳು ಕೇವಲ ವರದಿಗಳ ಮೂಲಕ ದೇಶದ ಬಡತನವನ್ನು ನಿರ್ಮೂಲನೆ ಮಾಡುತ್ತಿದೆಯೇ ಹೊರತು ಪ್ರಾಯೋಗಿಕವಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಜಾಗತೀಕರಣ, ಉದಾರೀಕರಣ ದೇಶದ ಅಭಿವೃದ್ಧಿಗೆ ಪೂರಕ ಎಂದು ನಂಬಿಸಲೋಸುಗ ಸರಕಾರಗಳು ಬಡವರ ಸಂಖ್ಯೆ ಇಳಿಮುಖವಾದ ಅಂಕಿಅಂಶ ವರದಿಯನ್ನೇ ಸಾಕ್ಷಿಯಾಗಿ ಜನರ ಮುಂದಿರಿಸುತ್ತಿದೆ. ಆದರೆ ಇದರ ಹಿಂದಿರುವ ಷಡ್ಯಂತ್ರವೇ ಬೇರೆ.

ಸರಕಾರಿ ಪಂಡಿತರ ಪ್ರಕಾರ 1991ರಲ್ಲಿ ಭಾರತವನ್ನು ಜಾಗತೀಕರಣಕ್ಕೆ ತೆರೆದಿಡುವ ಮುನ್ನ ಭಾರತದಲ್ಲಿದ್ದ ಬಡವರ ಸಂಖ್ಯೆ ಶೇ.36. ಆದರೆ 10 ವರ್ಷಗಳ ನಂತರ ಇದು ಶೇ.28ಕ್ಕೆ ಇಳಿದಿದೆ ಎಂದು ಪ್ರಚಾರ ಪಡಿಸಿದ್ದರು. ಆದರೆ ಉತ್ಸಾ ಪಟ್ನಾಯಕ್ ಎಂಬ ಖ್ಯಾತ ಅರ್ಥಶಾಸ್ತ್ರಜ್ಞರು ಇದರ ಹಿಂದಿರುವ ಮೋಸವನ್ನು ಬಹಿರಂಗಪಡಿಸಿದ್ದಾರೆ. ಅಂದರೆ, 1991ರಲ್ಲಿ ಬಡವರನ್ನು ಅಳೆಯುವ ಮಾನದಂಡ ಹೇಗಿತ್ತೆಂದರೆ, ದಿನಕ್ಕೆ 2000 ಕ್ಯಾಲೊರಿಗಳಷ್ಟು ಆಹಾರವನ್ನು ಪಡೆಯಲಾಗದವರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಪರಿಗಣಿಸಲಾಗುತ್ತಿತ್ತು. ಅಂಥವರ ಸಂಖ್ಯೆ 1991ರಲ್ಲಿ ಶೇ.36ರಷ್ಟಿತ್ತು. ಸರಕಾರಿ ಅಂಕಿಅಂಶವು ಈಗ ಬಿಪಿಎಲ್‌ದಾರರ ಸಂಖ್ಯೆ ಶೇ.28ಕ್ಕಿಂತ ಕೆಳಗಿದೆ ಎಂದು ಹೇಳುತ್ತಿದೆ. ವಾಸ್ತವದಲ್ಲಿ ಅನಂತರದ ದಿನಗಳಲ್ಲಿ ಬಡತನ ರೇಖೆಯ ಮಾನದಂಡವನ್ನು ಮಾತ್ರ ಕೆಳಗಿಳಿಸಲಾಯಿತೇ ವಿನಹ ಬಡವರ ಸಂಖ್ಯೆಯನ್ನಲ್ಲ. ಇದರರ್ಥ ಇಷ್ಟೇ, ಅಂದು ಮಾನದಂಡವಾಗಿದ್ದ 2000 ಕ್ಯಾಲೊರಿ ಆಹಾರವನ್ನು 1700 ಕ್ಯಾಲೊರಿಗೆ ಇಳಿಸಲಾಯಿತು. ದಿನವೊಂದಕ್ಕೆ 1700 ಕ್ಯಾಲೊರಿ ಆಹಾರ ಪೌಷ್ಠಿಕಾಂಶ ಪಡೆಯಲು ಅಸಮರ್ಥರಾದವರನ್ನು ಮಾತ್ರ ಬಡತನ ರೇಖೆಗಿಂತ ಕೆಳಗೆ ಎಂದು ಪರಿಗಣಿಸಲಾಯಿತು. ಹೀಗಿರುತ್ತದೆ ಸರಕಾರದ ಮೋಸದ ಅಂಕಿಅಂಶಗಳು.

ಒಟ್ಟಿನಲ್ಲಿ ಸರಕಾರಕ್ಕೆ ಬೇಕಾಗಿರುವುದು ಬಡತನ ನಿರ್ಮೂಲನೆಯಲ್ಲ. ದೇಶದ ಆರ್ಥಿಕ ನೀತಿಗಳು ಇಲ್ಲಿನ ಉದ್ಯಮಿಗಳನ್ನು, ಶ್ರೀಮಂತರನ್ನು ಅವಲಂಬಿಸಿ ರೂಪುಗೊಳ್ಳುತ್ತಿದೆ ಮತ್ತು ವಿಸ್ತಾರಗೊಳ್ಳುತ್ತಿದೆ. ಈ ಕಾರಣಕ್ಕಾಗಿಯೇ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ದಿನೇ ದಿನೇ ಬೆಳೆಯುತ್ತಿದೆ. ಬಡವರ ಮತ್ತು ಶ್ರೀಮಂತರ ಎಂಬ ಎರಡು ಭಾರತಗಳಿರಲು ಸಾಧ್ಯವಿಲ್ಲದಿದ್ದರೂ ಒಂದೇ ದೇಶದೊಳಗೆ ಬಡವರು ಬಡವರಾಗಿಯೇ ಉಳಿಯುವ, ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿಯೇ ಬೆಳೆಯುವ ವ್ಯವಸ್ಥೆಯು ಗಟ್ಟಿಯಾಗಿರುವುದು ವಾಸ್ತವ.

## ವಿದ್ಯಾವಂತರಲ್ಲಿ ಜಾಗೃತಿ ಮೂಡಿಸಿದ ಲೇಖನ

''ವಿಶ್ವಾಸಿಯೇ ಎದ್ದೇಳು'' ಎಂಬ ಶೀರ್ಷಿಕೆಯಡಿ ಪ್ರಕಟವಾಗಿದ್ದ ಲೇಖನವು ವಿದ್ಯಾವಂತ ಜನತೆಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದೆ.

ಇಂದಿನ ಕಾಲದಲ್ಲಿ ವಿದ್ಯೆ ಕಲಿಯುವುದು ಕೇವಲ ಉದ್ಯೋಗಕ್ಕಾಗಿ. ಆ ಮೂಲಕ ಒಳ್ಳೆಯ ಸಂಪಾದನೆಯನ್ನು ಮಾಡಿ ತನ್ನ ಹಾಗೂ ಕುಟುಂಬದ ಜೀವನ ಮಟ್ಟವನ್ನು ಉತ್ತಮಪಡಿಸುವುದು. ಇದು ಪ್ರಸಕ್ತ ವಿದ್ಯಾವಂತ ಜನತೆಯ ಮನದಲ್ಲಿರುವ ಅರಿವು.

ಆದರೆ ವಿದ್ಯಾವಂತ ಜನತೆಯ ಜವಾಬ್ದಾರಿ ಇಷ್ಟಕ್ಕೆ ಮುಗಿಯುವುದಿಲ್ಲ. ಒಂದು ಸಮಾಜವನ್ನು ಬದಲಾಯಿಸಬೇಕಾದರೆ ಅದರಲ್ಲಿ ಸುಶಿಕ್ಷಿತರ ಪಾತ್ರ ಮುಖ್ಯವಾಗಿರುತ್ತದೆ. ತನ್ನಲ್ಲಿರುವ ಜ್ಞಾನವನ್ನು ಇತರರಿಗೆ ಧಾರೆ ಎರೆದುಕೊಡುವ ಮೂಲಕ ಸಮಾಜದಲ್ಲಿರುವ ಅಜ್ಞಾನಿಗಳನ್ನು ಒಳಿತಿನೆಡಗೆ ಕೊಂಡೊಯ್ಯಬಹುದು. ಸಮಾಜದಲ್ಲಿರುವವರು ಜ್ಞಾನ ಸಂಪಾದಿಸಿಕೊಂಡರೆ ಆ ಸಮಾಜವು ಬದಲಾವಣೆಯನ್ನು ಕಾಣವುದು.

ಹೀಗೆ ಒಂದು ಸಮಾಜದ ಬದಲಾವಣೆ ಜ್ಞಾನವಂತರ ಕೈಯಲ್ಲಿದೆ ಎಂಬುದು ಕುರ್‌ಆನ್ ವಚನಗಳು ಮೂಲಕ ಮನದಟ್ಟು ಮಾಡಿದ ಲೇಖಕರಿಗೆ ಅಭಿನಂದನೆಗಳು.

ಶೌಕತ್ ಅಲಿ, ಸುರತ್ಕಲ್

## ಕ್ರೈಸ್ತರ ಮೇಲೆ ಮುಂದುವರಿದ ದಾಳಿ

ಮತಾಂತರದ ಆರೋಪವನ್ನು ಹೊರಿಸಿ ಸಂಘಪರಿವಾರದ ಕಾರ್ಯಕರ್ತರು ಮತ್ತೆ ದಾಳಿ ನಡೆಸಲು ಪ್ರಾರಂಭಿಸಿದ್ದಾರೆ. ಕ್ರೈಸ್ತರು ನಡೆಸುತ್ತಿರುವ ಅನಾಥಾಲಯಗಳ ಮೇಲೆ ದಾಳಿ ನಡೆಸಿ ಅಲ್ಲಿನ ಸಿಬ್ಬಂದಿ, ಮಕ್ಕಳಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ.

2008ರಲ್ಲಿ ನಡೆದ ಚರ್ಚ್ ಮೇಲೆ ನಡೆದ ಸರಣಿ ದಾಳಿಯ ಆ ಕರಾಳ ನೆನಪು ಮಾಸುವ ಮುನ್ನವೇ ಇದೀಗ ಬಜರಂಗದಳದ ಕಾರ್ಯಕರ್ತರು ಮತ್ತೆ ಅಲ್ಲಲ್ಲಿ ದಾಳಿ ನಡೆಸುತ್ತಿದ್ದಾರೆ. ಇದರಿಂದಾಗಿ ಕ್ರೈಸ್ತ ಸಮುದಾಯದವರು ಸದಾ ಭಯದ ವಾತಾವರಣದಲ್ಲಿಯೇ ಜೀವಿಸುವಂತಾಗಿದೆ.

2008ರಲ್ಲಿ ನಡೆದ ಚರ್ಚ್ ದಾಳಿಯ ಬಗ್ಗೆ ವಿಚಾರಣೆ ನಡೆಸಿದ ಸೋಮಶೇಖರ್ ಆಯೋಗದ ವರದಿಯು ಬಜರಂಗದಳದ ಕಾರ್ಯಕರ್ತರಿಗೆ ರಕ್ಷಣೆ ನೀಡಿದ್ದರಿಂದಲೇ ಕ್ರೈಸ್ತ ಸಮುದಾಯದ ಪ್ರಾರ್ಥನಾ ಮಂದಿರ ಹಾಗೂ ಅನಾಥಾಶ್ರಮಗಳ ಮೇಲೆ ದಾಳಿ ನಡೆಯಲು ಪ್ರಮುಖ ಕಾರಣವಾಗಿದೆ.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ




## ಅಮಾಯಕರನ್ನು ಬಿಡುಗಡೆಗೊಳಿಸಿ

ಮಾಲೆಗಾಂವ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿಈಗಾಗಲೇ ಅಭಿನವ್ ಭಾರತ್ ಸಂಘಟನೆಯ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಸಾಧ್ವಿ ಪ್ರಜ್ಞಾ ಸಿಂಗ್, ಪ್ರವೀಣ್ ಮುತಾಲಿಕ್, ಪುರೋಹಿತ್ ಸೇರಿದಂತೆ ಮುಂತಾದ ಅಭಿನವ್ ಭಾರತ್ ಸಂಘಟನೆಯ ಕಾರ್ಯಕರ್ತರು ಬಾಂಬ್ ಸ್ಫೋಟ ನಡೆಸಿರುವ ಬಗ್ಗೆ ಬಲವಾದ ಸಾಕ್ಷ್ಯ ಎಟಿಎಸ್ ಬಳಿ ಇದೆ.

ಹಿಂದುತ್ವ ಭಯೋತ್ಪಾದಕರ ವಿರುದ್ಧ ಇಷ್ಟೊಂದು ಬಲವಾದ ಸಾಕ್ಷಾಧಾರಗಳು ಇದ್ದರು ಕೂಡ ಮಾಲೆಗಾಂವ್ ಸ್ಫೋಟ ಪ್ರಕರಣದ ಆರೋಪ ಹೊರಿಸಿ ಅಕ್ರಮವಾಗಿ ಬಂಧಿಸಿಡಲಾಗಿರುವ ಅಮಾಯಕ ಮುಸ್ಲಿಮ್ ಯುವಕರನ್ನು ಯಾಕೆ ಬಿಡುಗಡೆ ಮಾಡುತ್ತಿಲ್ಲ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಸಿನಾನ್, ಬಂದರ್

## ಶಾಪಗ್ರಸ್ಥ ಬಿಜೆಪಿ ಸರಕಾರ

ಬಿಜೆಪಿ ಸರಕಾರವು ಈ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿಲ್ಲ. ಮುಖ್ಯಮಂತ್ರಿ ಯಡಿಯೂರಪ್ಪರಂತೂ ಭಿನ್ನಮತದ ತೂಗುಗತ್ತಿಯಡಿಯಲ್ಲಿಯೇ ಕಾಲ ಕಳೆಯುತ್ತಿದ್ದರೆ.

ಅಧಿಕಾರ ಮಾಡಿದಷ್ಟು ಕಾಲ ತನ್ನ ಪಕ್ಷದ ಸಚಿವರಲ್ಲಿರುವ ಭಿನ್ನಮತವನ್ನು ಶಮನಗೊಳಿಸುತ್ತಿರುವುದೇ ಯಡಿಯೂರಪ್ಪರವರ ಮಹತ್ಸಾಧನೆ. ಯಡಿಯೂರಪ್ಪರು ಇನ್ನಾದರೂ ದೊಡ್ಡ ಮನಸ್ಸು ಮಾಡಿ ಒಂದೋ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿ ಅಥವಾ ಕುರ್ಚಿ ಬಿಟ್ಟು ತೊಲಗಲಿ.

ದೀಪಕ್, ಮಡಿಕೇರಿ

## ಮಾಧ್ಯಮಗಳು ಪಕ್ಷಪಾತ ನಡೆಸದಿರಲಿ

ಅಣ್ಣಾ ಹಝಾರೆಯವರು ಭ್ರಷ್ಟಾಚಾರದ ವಿರುದ್ಧ ನಡೆಸಿದ ಆಂದೋಲನಕ್ಕೆ ದೇಶಾದ್ಯಂತ ಬೆಂಬಲ ದೊರೆತಿದೆ. ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಸಂಬಂಧಿಸಿ ಮಾಧ್ಯಮಗಳು ವರ್ಣರಂಜಿತವಾಗಿ ಸುದ್ದಿ ಪ್ರಸಾರ ಮಾಡಿದ್ದರಿಂದಲೇ ಅಣ್ಣಾ ಹಝಾರೆಯವರು ಕೇವಲ ನಾಲ್ಕೇ ದಿನಗಳಲ್ಲಿ ತಮ್ಮ ನಿರಶನವನ್ನು ಮುಕ್ತಾಯಗೊಳಿಸಲು ಸಾಧ್ಯವಾಯಿತು.

ಒಂದರ್ಥದಲ್ಲಿ ನೋಡುವುದಾದರೆ ಈ ಆಂದೋಲನದಲ್ಲಿ ಜನರನ್ನು ಸಂಘಟಿಸಲು ಹಝಾರೆಗಿಂತ ಮಾಧ್ಯಮಗಳೇ ಪ್ರಮುಖ ಪಾತ್ರ ವಹಿಸಿದವು. ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು ಮಾಧ್ಯಮಗಳಿಂದ ಸಾಧ್ಯವಾಗಿದೆ. ಆದರೆ ಮಾಧ್ಯಮಗಳು ಎಸಗುವ ಪಕ್ಷಪಾತಗಳಿಂದಾಗಿ ಇಂದು ಕೆಲವೊಂದು ಪ್ರಮುಖ ವಿಷಯಗಳು ಸುದ್ದಿಯಾಗುವುದೇ ಇಲ್ಲ.

ಈ ದೇಶಕ್ಕೆ ಮಾರಕವಾಗಿರುವ ಕೇಸರಿ ಭಯೋತ್ಪಾದನೆಯ ಬಗ್ಗೆ ಬಹುತೇಕ ಮಾಧ್ಯಮಗಳು ಚಕಾರವೆತ್ತುತ್ತಿಲ್ಲ. ಒಂದು ವೇಳೆ ಕೇಸರಿ ಭಯೋತ್ಪಾದಕರ ಬಂಧನವಾದರೆ ಅಥವಾ ಭಯೋತ್ಪಾದನೆಯೊಂದಿಗೆ ಕೇಸರಿ ಪಡೆಗಳ ನಂಟು ಬಹಿರಂಗವಾದರೆ ಮಾಧ್ಯಮಗಳು ಈ ಸುದ್ದಿಯನ್ನು ಪ್ರಕಟಿಸುವ ಗೋಜಿಗೆ ಹೋಗುವುದಿಲ್ಲ.

ಇಂದು ಭ್ರಷ್ಟಾಚಾರ ವಿರೋಧಿ ಆಂದೋಲನದೊಂದಿಗೆ ಕೇಸರಿ ಭಯೋತ್ಪಾದನೆಯ ಬಗ್ಗೆ ಮಾಧಮಗಳ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸಗಳನ್ನು ಮಾಡಬೇಕಾದ ಅನಿವಾರ್ಯತೆ ಇದೆ.

ಶೌಕತ್ ಅಲಿ, ಸುರತ್ಕಲ್

## ಹಝಾರೆಯವರ ಬಿಜೆಪಿ ಪ್ರೇಮ!

ಇತ್ತೀಚೆಗೆ ಅಣ್ಣಾ ಹಝಾರೆಯವರು ಭ್ರಷ್ಟಾಚಾರದ ವಿರುದ್ಧ ನಡೆಸಿದ ಆಂದೋಲನ ಯಶಸ್ಸಿನತ್ತ ಸಾಗುತ್ತಿದ್ದಂತೆ ಮೋದಿಯು ಕೂಡ ಶೈನ್ ಆದರು. ಮೋದಿಯ ಬಗ್ಗೆ ಪ್ರಶಂಸನೀಯ ಮಾತುಗಳನ್ನಾಡಿದ ಅಣ್ಣಾ ಹಝಾರೆಯವರು ಆಂದೋಲನ ನಡೆಸಿದ್ದು ಬಿಜೆಪಿ ಪರವಾಗಿಯೇ ಎಂಬ ಸಂಶಯ ಕಾಡುತ್ತಿದೆ.

ಏಕೆಂದರೆ ಅಣ್ಣಾ ಭ್ರಷ್ಟಾಚಾರ ವಿರೋಧಿ. ಹಾಗೆಯೇ ಜನಲೋಕಪಾಲ ಮಸೂದೆಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿ ನಿರಶನ ಪ್ರಾರಂಭಿಸಿದ್ದರು. ಆದರೆ ಕಳೆದ ಎಂಟು ವರ್ಷಗಳಿಂದ ಲೋಕಯುಕ್ತವನ್ನೇ ಮೂಲೆಗುಂಪು ಮಾಡಲಾಗಿರುವ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯ ಬಗ್ಗೆ ಯಾವ ಮಾನದಂಡದ ಮೇಲೆ ಇಂತಹ ಮಾತುಗಳನ್ನಾಡಿದ್ದಾರೆ ಎಂಬುದನ್ನು ಹಝಾರೆಯವರು ಸ್ಪಷ್ಟಪಡಿಸಬೇಕಾಗಿದೆ.

ಅಣ್ಣಾ ಹಝಾರೆಯವರ ಈ ಹೋರಾಟ ಕಾಂಗ್ರೆಸ್ ವಿರೋಧಿ ಮತ್ತು ಬಿಜೆಪಿ ಪರ ಎಂಬ ಅನುಮಾನಗಳಂತೂ ದಟ್ಟವಾಗಿದೆ.

ರಾಜೇಶ್, ಉಡುಪಿ

## ವಿದ್ಯಾರ್ಥಿ ಶಕ್ತಿ ಹೋರಾಟ ನಡೆಸಲಿ

ಒಂದು ಸಮಾಜದ ಬದಲಾಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ತರವಾದುದು. ವಿದ್ಯಾರ್ಥಿ ಚಳವಳಿಯು ತೀವ್ರಗೊಂಡರೆ ಎಂತ ದೌರ್ಜನ್ಯ, ಅನ್ಯಾಯವನ್ನೂ ತಡೆಯಬಹುದು.

1947ರ ಮುಂಚೆ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿ ಸಮುದಾಯವು ಸಕ್ರಿಯ ಪಾಲ್ಗೊಂಡಿತ್ತು. ಇದರ ಫಲವಾಗಿಯೇ ಸ್ವಾತಂತ್ರ್ಯ ಹೋರಾಟವು ತೀವ್ರಗತಿಯಲ್ಲಿ ಸಾಗಿತ್ತು. ಈ ದೇಶಕ್ಕೆ ಸ್ವಾತಂತ್ರ್ಯ ದೊರೆಯಲು ವಿದ್ಯಾರ್ಥಿ ಸಮುದಾಯದ ಪಾಲು ಅದಮ್ಯವಾಗಿದೆ ಎಂಬುದನ್ನು ನಾವು ಚರಿತ್ರೆಯಿಂದ ತಿಳಿದುಕೊಳ್ಳಬಹುದು.

ಇದೀಗ ಭಾರತದಲ್ಲಿ ಇನ್ನೊಂದು ಸ್ವಾತಂತ್ರ್ಯ ಸಂಗ್ರಾಮದ ಅಗತ್ಯವಿದೆ. ಸಮಾಜವಾದಿಯಾಗಿರುವ ಈ ರಾಷ್ಟ್ರದಲ್ಲಿ ಬಂಡವಾಳಶಾಹಿ, ವಸಾಹತುಶಾಹಿಗಳ ಅಟ್ಟಹಾಸ ಮಿತಿಮೀರುತ್ತಿದೆ. ಈ ಕಾರಣದಿಂದಾಗಿಯೇ ಈ ದೇಶದ ಅಗಾಧವಾದ ಸಂಪತ್ತು ಒಂದು ಕೂಟದಲ್ಲಿ ಮಾತ್ರ ಶೇಖರಣೆಗೊಂಡಿದೆ. ದೇಶದ ಸಂಪತ್ತನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಧಾರೆ ಎರೆದುಕೊಡುತ್ತಾ ದೇಶದಲ್ಲಿರುವ ಬಡಜನರನ್ನು ವಂಚಿಸುತ್ತಿರುವ ಪ್ರಭುತ್ವವಾದಿಗಳ ವಿರುದ್ಧ ಹೋರಾಟ ನಡೆಸಬೇಕಾದ ಅನಿವಾರ್ಯತೆ ಇದೆ.

ಈ ನಿಟ್ಟಿನಲ್ಲಿ ಸಾಮಾಜಿಕ ಚಿಂತನೆ ಹೊಂದಿದೆ ವಿದ್ಯಾರ್ಥಿ ಶಕ್ತಿಗಳು ರಂಗಕ್ಕಿಳಿದು ಹೋರಾಟ ನಡೆಸಬೇಕಾಗಿದೆ.

ಮುಫ್ಸಿನ್, ಉಡುಪಿ

## ಆಡಳಿತ ವ್ಯವಸ್ಥೆ ಎಚ್ಚೆತ್ತುಕೊಳ್ಳಲಿ

ಮಳೆಗಾಲಕ್ಕಿಂತಲೂ ಮೊದಲೇ ವರುಣನ ಆರ್ಭಟ ಶುರುವಾಗಿದೆ. ಕೆಲವು ಕಡೆಗಳಲ್ಲಿ ಧಾರಾಕಾರ ಮಳೆ ಸುರಿದು ಇಡೀ ರಸ್ತೆಯೇ ಜಲಾವೃತವಾಗಿತ್ತು. ಇದರಿಂದಾಗಿ ಜನಜೀವನವೂ ಅಸ್ತವ್ಯಸ್ತವಾಗಿತ್ತು.

ಆಡಳಿತ ವರ್ಗವು ಇದನ್ನು ಎಚ್ಚರಿಕೆ ಎಂದು ತಿಳಿದುಕೊಂಡು ಮಳೆಗಾಲಕ್ಕೆ ಮೊದಲೇ ಚರಂಡಿ ವ್ಯವಸ್ಥೆಯ ದುರಸ್ತಿಗೊಳಿಸಬೇಕು. ಹೆಚ್ಚಿನ ಕಡೆಗಳಲ್ಲಿ ಚರಂಡಿ ವ್ಯವಸ್ಥೆಗಳಿಲ್ಲದೆ ಮಳೆ ನೀರು ರಸ್ತೆಯಲ್ಲೇ ಹರಿಯುವಂತ ಪರಿಸ್ಥಿತಿ ಇದೆ.

ಇಂತಹ ಸಮಸ್ಯೆಗಳನ್ನು ಆಡಳಿತ ವರ್ಗವು ಮಳೆಗಾಲಕ್ಕಿಂತ ಮೊದಲೇ ಸರಿಪಡಿಸುವುದು ಒಳಿತು.

ದೀಪಕ್, ಮಡಿಕೇರಿ

● ಶಬೀರ್ ಕೆ.

# ಅಭದ್ರತೆಯಲ್ಲಿ ಕಾರ್ಮಿಕರು

## ಕಾರ್ಮಿಕರ ಧ್ವನಿ ಬಲಗೊಳ್ಳಲಿ



ಕಾರ್ಮಿಕರು ಸದಾ ಅಭದ್ರತೆಯಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಬಂಡವಾಳಶಾಹಿಗಳು, ರಾಜಕೀಯ ಪಕ್ಷಗಳು ಅವರ ಧ್ವನಿಯನ್ನು ತಮ್ಮ ಹಿತಸಾಧನೆಗಾಗಿ ದುರುಪಯೋಗಪಡಿಸಿಕೊಳ್ಳುತ್ತಿವೆ. ಕಾರ್ಮಿಕ ಶಕ್ತಿಯು ಸ್ವಾರ್ಥ ರಾಜಕೀಯ ಪಕ್ಷಗಳ ದಾಳವಾಗದೇ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸಲು ಸಜ್ಜಾಗಬೇಕು. ಈ ಮೂಲಕ ಕಾರ್ಮಿಕರ ದಿನಾಚರಣೆಗೊಂದು ಅರ್ಥ ಕಲ್ಪಿಸಬೇಕು.



ಮೇ 1ನ್ನು ವಿಶ್ವದೆಲ್ಲೆಡೆಯು ಕಾರ್ಮಿಕ ದಿನವನ್ನಾಗಿ ಆಚರಿಸಲಾಗುತ್ತದೆ. ಅಂತೆಯೇ ಭಾರತದಲ್ಲೂ ಆ ದಿನದಂದು ಕಾರ್ಮಿಕ ಸಂಘಟನೆಗಳು ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ. ಕಾರ್ಮಿಕರ ಸಮಸ್ಯೆಗಳ ಬಗ್ಗೆ, ಅದನ್ನು ಹೋಗಲಾಡಿಸಲು ಚಳವಳಿಯ ಅಗತ್ಯತೆಯ ಬಗ್ಗೆ ಭಾಷಣಗಳನ್ನು ಬಿಗಿಯಲಾಗುತ್ತದೆ. ಅದೇ ದಿನ ಕಾರ್ಮಿಕರ ದಿನವೆಂಬುದರ ಬಗ್ಗೆ ಪರಿವೆಯೇ ಇಲ್ಲದೆ ಇಡೀ ದಿನ ಮೈಮುರಿದು ಕೆಲಸ ಮಾಡುವ ಕಾರ್ಮಿಕರೂ ನಮ್ಮಲ್ಲಿದ್ದಾರೆ. ಮೇ 1ನ್ನು ಯಾಕಾಗಿ ಕಾರ್ಮಿಕ ದಿನಾಚರಣೆಯಾಗಿ ಆಚರಿಸಲಾಗುತ್ತದೆ? ಇದು ಎಲ್ಲಿಂದ ಆರಂಭವಾಗಿದೆ? ಎಂಬುದರ ಬಗ್ಗೆ ಅರಿವಿಲ್ಲದವರೂ ಕಾರ್ಮಿಕ ದಿನವನ್ನು ಆಚರಿಸುವವರಲ್ಲಿದ್ದಾರೆ. ಮೇ 1 ಎಂಬುದು ಕಾರ್ಮಿಕರ ಹೋರಾಟದ ಪ್ರತೀಕವಾಗಿದೆ. ಆದರೆ ಪ್ರಸ್ತುತ ಕಾರ್ಮಿಕ ಹೋರಾಟವೆಂಬುದು ವಿಶ್ವದ ಬಂಡವಾಳಶಾಹಿಗಳಿಂದ ಮತ್ತು ರಾಜಕಾರಣಿಗಳಿಂದ ಅಪಹರಿಸಲ್ಪಟ್ಟಿರುವುದು ದುರಂತ.

ಮೇ 1ನ್ನು ಕಾರ್ಮಿಕ ದಿನಾಚರಣೆಯನ್ನಾಗಿ ಆಚರಿಸಲು ಕಾರಣ ಅಮೆರಿಕದಲ್ಲಿ 1886ರಲ್ಲಿ ಕಾರ್ಮಿಕರು ನಡೆಸಿದ ಪ್ರತಿಭಟನೆ. ಕೆಲಸದ ಸಮಯವನ್ನು ದಿನಕ್ಕೆ 8 ಗಂಟೆಗೆ ಮಿತಿಗೊಳಿಸಬೇಕೆಂಬ ಕಾರ್ಮಿಕರ ಆಗ್ರಹವು 19ನೆ ಶತಮಾನದ ಕೊನೆಯಲ್ಲಿ ಅಮೆರಿಕದಲ್ಲಿ ಹೆಚ್ಚಿತ್ತು. ಆಗ ಅಮೆರಿಕದಲ್ಲಿ ಕಾರ್ಮಿಕರ ಸ್ಥಿತಿಯು ಶೋಚನೀಯವಾಗಿತ್ತು. ಅವರು ನಿರಂತರ 10ರಿಂದ 16 ಗಂಟೆಗಳ ತನಕ ಅಪಾಯಕಾರಿ ಪರಿಸ್ಥಿತಿಯಲ್ಲಿ ದುಡಿಯಬೇಕಾಗಿತ್ತು. ಕೆಲಸದ ವೇಳೆ ನಡೆಯುವ ಅಪಘಾತಗಳಲ್ಲಿ ಕಾರ್ಮಿಕರು ಸಾವಿಗೀಡಾಗುವುದು, ಗಾಯಗೊಳ್ಳುವುದು ಸಾಮಾನ್ಯವಾಗಿತ್ತು. 1860ರ ಆರಂಭದಲ್ಲಿ ಇಲ್ಲಿ ಕೆಲಸದ ಅವಧಿಯನ್ನು ಕಡಿಮೆಗೊಳಿಸಬೇಕೆಂದು ಆಗ್ರಹಿಸಿ ಪ್ರತಿಭಟನೆಗಳು ಆರಂಭವಾದವು. ಇದೇ ಬೇಡಿಕೆಯನ್ನಿಟ್ಟುಕೊಂಡು ಅಮೆರಿಕದ ಕಾರ್ಮಿಕ ಸಂಘಟನೆಗಳು 1886ರ ಮೇ 1ರಂದು ಪ್ರತಿಭಟನೆಗೆ ಕರೆ ನೀಡಿದವು. ಇದಕ್ಕೆ ಓಗೊಟ್ಟು ಮೂರು ಲಕ್ಷಕ್ಕೂ ಅಧಿಕ ಕಾರ್ಮಿಕರು ತಮ್ಮ ಕೆಲಸವನ್ನು ಬದಿಗೆ ಸರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಇದು ವಿಶ್ವದಲ್ಲೇ ಮೊದಲ 'ಮೇ ಡೇ' ಅಥವಾ ಕಾರ್ಮಿಕರ ದಿನಾಚರಣೆಯೆನ್ನಬಹುದು.

ಉತ್ತರ ಅಮೆರಿಕದ ಚಿಕಾಗೋದಲ್ಲೂ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪ್ರತಿಭಟನೆಯನ್ನು ಹತ್ತಿಕ್ಕುವುದಕ್ಕಾಗಿ ಮೇ 3ರಂದು ಇಲ್ಲಿ ಪೊಲೀಸರು ಪ್ರತಿಭಟನಕಾರರ ಮೇಲೆ ದಾಳಿ ನಡೆಸಿದರು. ಪೊಲೀಸರು ಇಬ್ಬರು ಪ್ರತಿಭಟನಕಾರರನ್ನು ಗುಂಡಿಕ್ಕಿ ಹತ್ಯೆಗೈದರು ಮತ್ತು ಹಲವು ಮಂದಿಯನ್ನು ಗಾಯಗೊಳಿಸಿದರು. ಎದೆಗುಂದದ ಕಾರ್ಮಿಕರು ಈ ಅನ್ಯಾಯವನ್ನು ವಿರೋಧಿಸಲು ಮರುದಿನ ಹೇಮಾರ್ಕೆಟ್ ಸ್ಕ್ವಾರ್‌ನಲ್ಲಿ ಸಭೆ ಸೇರಿದರು. ಸಭೆಯಲ್ಲಿ ಭಾಷಣವು ಉದ್ವಿಗ್ನವಾಗುತ್ತಿದೆಯೆಂದು ಪೊಲೀಸರು ಅದನ್ನು ತಡೆಯಲು ಬಂದಾಗ ಯಾರೋ ಅನಾಮಿಕನೊಬ್ಬ ಸಭೆಯ ನಡುವಿನಿಂದ ಪೊಲೀಸರತ್ತ ಸ್ಫೋಟಕವೊಂದನ್ನು ಎಸೆದನು. ಸ್ಫೋಟಕವೆಸೆದ ವ್ಯಕ್ತಿ ಪೊಲೀಸ್ ಏಜೆಂಟ್ ಆಗಿದ್ದನೆಂದೂ, ಕೆಲವು ಉನ್ನತ ದರ್ಜೆಯ ಪೊಲೀಸರೇ ಇದನ್ನು ಮಾಡಿಸಿದ್ದರೆಂಬ ಆರೋಪಗಳೂ ಇದ್ದವು. ಈ ದಾಳಿಯಲ್ಲಿ ಒಬ್ಬ ಪೊಲೀಸ್ ಸಾವನ್ನಪ್ಪಿದನು. ತಕ್ಷಣದಲ್ಲೇ ಪೊಲೀಸರು ರೌದ್ರಾವತಾರ ತಾಳಿದರು. ಕಾರ್ಮಿಕರ ಮೇಲೆ ಮನಬಂದಂತೆ ಗುಂಡೆಸೆಯಲು ಪ್ರಾರಂಭಿಸಿದರು. ಸುಮಾರು 8 ಮಂದಿ ಕಾರ್ಮಿಕರು ಸಾವನ್ನಪ್ಪಿದರೆ, 40 ಕ್ಕೂ ಅಧಿಕ ಮಂದಿ ಗಾಯಗೊಂಡರು. 7 ಮಂದಿ ಪೊಲೀಸರೂ ಘಟನೆಯಲ್ಲಿ ಸಾವನ್ನಪ್ಪಿದ್ದರು. ಪ್ರತಿಭಟನಕಾರರತ್ತ ಮನಬಂದಂತೆ ಗುಂಡೆಸೆಯುವ ವೇಳೆ ಗಾಯಗೊಂಡು ಇವರು ಸಾವನ್ನಪ್ಪಿದ್ದರೆಂಬ ಆರೋಪಗಳೂ ಇದ್ದವು.

ಸಭೆಯನ್ನು ಆಯೋಜಿಸಿದ್ದಕ್ಕಾಗಿ 8 ಮಂದಿ ಕಾರ್ಮಿಕ ನೇತಾರರನ್ನು ಬಂಧಿಸಲಾಯಿತು. ಅವರಲ್ಲಿ ನಾಲ್ವರನ್ನು ಗಲ್ಲಿಗೇರಿಸಲಾಯಿತು. ಐದನೆ ವ್ಯಕ್ತಿ ಲೂಯಿಸ್ ಲಿಂಗ್ ಗಲ್ಲಿಗೇರಿಸಲ್ಪಡುವ ಮುನ್ನಾ ದಿನ ಸ್ಫೋಟಕವೊಂದನ್ನು ಬಾಯಿಯಲ್ಲಿಟ್ಟು ಸಿಡಿಸುವ ಮೂಲಕ ಅಂತಿಮ ಕ್ಷಣದಲ್ಲಿ

ನಮ್ಮ ದೇಶವು ತ್ವರಿತ ಗತಿಯಲ್ಲಿ ಅಭಿವೃದ್ಧಿಯಾಗುತ್ತಿದೆಯೆಂಬ ಭ್ರಮೆಯನ್ನು ರಾಜಕೀಯ ಪಕ್ಷಗಳು ಸೃಷ್ಟಿಸಿವೆ. ದೇಶದಲ್ಲಿ ತಲೆಯೆತ್ತುತ್ತಿರುವ ಬೃಹತ್ ಸ್ಥಾವರಗಳನ್ನು, ಸೇತುವೆಗಳನ್ನು, ಮಾಲ್‌ಗಳನ್ನು, ದೊಡ್ಡ ದೊಡ್ಡ ಕಟ್ಟಡಗಳನ್ನು ಅಭಿವೃದ್ಧಿಯ ಸಂಕೇತವಾಗಿ ತೋರಿಸಲಾಗುತ್ತದೆ. ಈ ಕಟ್ಟಡಗಳ ನಿರ್ಮಾಣಕ್ಕಾಗಿ ಅವುಗಳೆಡೆಯಲ್ಲಿ ರಾತ್ರಿ-ಹಗಲೆನ್ನದೆ ಅಪಾಯಕಾರಿ ಸ್ಥಿತಿಯಲ್ಲಿ ದುಡಿಯುವ ಕಾರ್ಮಿಕರ ಪರಿಸ್ಥಿತಿ, ಅವರ ಕಷ್ಟ ಕೋಟಲೆಗಳ ಬಗ್ಗೆ ಮಾತನಾಡುವ ಅಥವಾ ಸ್ಪಂದಿಸುವ ಯಾವುದೇ ರಾಜಕೀಯ ಪಕ್ಷಗಳು ನಮ್ಮ ದೇಶದಲ್ಲಿಲ್ಲ. ದೇಶದ ಅಭಿವೃದ್ಧಿಯು ಬಂಡವಾಳಶಾಹಿಗಳ ಅಭಿವೃದ್ಧಿಗೆ ಮಾತ್ರ ಸೀಮಿತವಾಗಿದೆ.

ಪ್ರತಿಭಟನೆಯನ್ನು ತೋರಿ ಸಾವನ್ನಪ್ಪಿದ್ದನು.

ವಿಶ್ವದ 66 ರಾಷ್ಟ್ರಗಳಲ್ಲಿ ಕಾರ್ಮಿಕ ದಿನಾಚರಣೆಯನ್ನು ಅಧಿಕೃತ ರಜಾ ದಿನವೆಂದು ಘೋಷಿಸಲಾಗಿದೆ. ಅದಲ್ಲದೆ ಇತರ ಕೆಲ ರಾಷ್ಟ್ರಗಳಲ್ಲೂ ಅನಧಿಕೃತವಾಗಿ ಕಾರ್ಮಿಕ ದಿನವನ್ನು ಆಚರಿಸಲಾಗುತ್ತದೆ. ಆದರೆ ಆರಂಭವಾಗಿರುವುದು ಅಮೆರಿಕದಲ್ಲಾದರೂ ಅಲ್ಲಿ ಈ ದಿನವನ್ನು ಆಚರಿಸಲಾಗುತ್ತಿಲ್ಲ. ಮೊದಲು ಇದನ್ನು ಆಚರಿಸಲಾಗುತ್ತಿತ್ತಾದರೂ, 20ನೆ ಶತಮಾನದಲ್ಲಿ ಅಮೆರಿಕ ಸರಕಾರ ಕಾರ್ಮಿಕ ದಿನಾಚರಣೆಯನ್ನು ಹತ್ತಿಕ್ಕಲು ಪ್ರಯತ್ನವನ್ನು ಆರಂಭಿಸಿತು. ಜನ ಮನದಿಂದ ಕಾರ್ಮಿಕರ ದಿನವನ್ನು ಅಳಿಸುವುದಕ್ಕಾಗಿ ಸರಕಾರ ಮೇ 1ನ್ನು 'ಕಾನೂನು ಹಾಗೂ ಸುವ್ಯಸ್ಥೆ ದಿನ' ಎಂಬುದಾಗಿ ಘೋಷಿಸಿತು.

ಇಂದಿಗೂ ಅಮೆರಿಕದಲ್ಲಿ ಮೇ 1 ಆಚರಿಸಲ್ಪಡುವುದು ಕಾನೂನು ಸುವ್ಯವಸ್ಥೆ ದಿನವಾಗಿ. ಉಳಿದೆಲ್ಲಾ ರಾಷ್ಟ್ರಗಳು ಈ ದಿನವನ್ನು ಕಾರ್ಮಿಕ ದಿನವನ್ನಾಗಿ ಆಚರಿಸುತ್ತದೆ. ಭಾರತದಲ್ಲೂ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಆದರೆ ಅಮೆರಿಕದಂತೆಯೇ ಇಲ್ಲಿನ ಕಾರ್ಮಿಕರೂ ಹೋರಾಟವೆಂಬುದನ್ನು ಮರೆತಿದ್ದಾರೆ. ಅವರು ಹಲವು ರಾಜಕೀಯ ಪಕ್ಷಗಳ ಅಡಿಯಲ್ಲಿ ಛಿದ್ರಗೊಂಡಿದ್ದಾರೆ. ಈಗ ಅವರ ಹೋರಾಟಗಳು ನಡೆಯುವುದು ಕಾರ್ಮಿಕರಿಗಾಗಿಯಲ್ಲ, ಬದಲಾಗಿ ರಾಜಕೀಯ ಪಕ್ಷಗಳಿಗಾಗಿ. ಅವರ ಭಾವನೆಗಳನ್ನು ನಿಯಂತ್ರಿಸುವುದು ರಾಜಕೀಯ ಪಕ್ಷಗಳು. ಆ ರಾಜಕೀಯ ಪಕ್ಷಗಳು ನಿಯಂತ್ರಿಸಲ್ಪಡುತ್ತಿರುವುದು ದೇಶ ಹಾಗೂ ವಿದೇಶದ ಬಂಡವಾಳಶಾಹಿಗಳಿಂದ.

ನಮ್ಮ ದೇಶವು ತ್ವರಿತ ಗತಿಯಲ್ಲಿ ಅಭಿವೃದ್ಧಿಯಾಗುತ್ತಿದೆಯೆಂಬ ಭ್ರಮೆಯನ್ನು ರಾಜಕೀಯ ಪಕ್ಷಗಳು ಸೃಷ್ಟಿಸಿವೆ. ದೇಶದಲ್ಲಿ ತಲೆಯೆತ್ತುತ್ತಿರುವ ಬೃಹತ್ ಸ್ಥಾವರಗಳನ್ನು, ಸೇತುವೆಗಳನ್ನು, ಮಾಲ್‌ಗಳನ್ನು, ದೊಡ್ಡ ದೊಡ್ಡ ಕಟ್ಟಡಗಳನ್ನು ಅಭಿವೃದ್ಧಿಯ ಸಂಕೇತವಾಗಿ ತೋರಿಸಲಾಗುತ್ತದೆ. ಈ ಕಟ್ಟಡಗಳ ನಿರ್ಮಾಣಕ್ಕಾಗಿ ಅವುಗಳೆಡೆಯಲ್ಲಿ ರಾತ್ರಿ-ಹಗಲೆನ್ನದೆ ಅಪಾಯಕಾರಿ ಸ್ಥಿತಿಯಲ್ಲಿ ದುಡಿಯುವ ಕಾರ್ಮಿಕರ ಪರಿಸ್ಥಿತಿ, ಅವರ ಕಷ್ಟ ಕೋಟಲೆಗಳ ಬಗ್ಗೆ ಮಾತನಾಡುವ ಅಥವಾ ಸ್ಪಂದಿಸುವ ಯಾವುದೇ ರಾಜಕೀಯ ಪಕ್ಷಗಳು ನಮ್ಮ ದೇಶದಲ್ಲಿಲ್ಲ. ದೇಶದ ಅಭಿವೃದ್ಧಿಯು ಬಂಡವಾಳಶಾಹಿಗಳ ಅಭಿವೃದ್ಧಿಗೆ ಮಾತ್ರ ಸೀಮಿತವಾಗಿದೆ.

ನಮ್ಮ ದೇಶದ ಕಟ್ಟಡ ಕಾರ್ಮಿಕರ ಸ್ಥಿತಿಯಂತೂ ಅತ್ಯಂತ ಶೋಚನೀಯ. ಅಧ್ಯಯನವೊಂದರ ಪ್ರಕಾರ ಇಲ್ಲಿ ಸುಮಾರು



35 ದಶಲಕ್ಷ ಮಹಿಳೆಯರು ಹಾಗೂ ಪುರುಷರು ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ನಿರತರಾಗಿದ್ದಾರೆ. ಕೇವಲ ಮುಂಬೈಯೊಂದರಲ್ಲೇ ಸುಮಾರು 10 ಲಕ್ಷ ಮಂದಿ ಕಟ್ಟಡ ನಿರ್ಮಾಣ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಕಾರ್ಮಿಕರು ದೇಶದ ಬಡವರಲ್ಲಿ ಅತಿ ಬಡವರಾಗಿದ್ದಾರೆ ಮತ್ತು ಹೆಚ್ಚಿನವರು ವಲಸೆ ಕಾರ್ಮಿಕರಾಗಿದ್ದಾರೆ. ಹಲವು ಅನನುಭವಿ ಮೇಸ್ತ್ರಿಗಳು,

ಗೌಂಡಿಗಳು ಮತ್ತು ಇತರ ಕೆಳ ವರ್ಗದ ಕಾರ್ಮಿಕರು ತೀವ್ರವಾದ ಗ್ರಾಮೀಣ ಬಡತನದಿಂದ ಪಾರಾಗುವುದಕ್ಕಾಗಿ ತಮ್ಮ ತವರೂರನ್ನು ತ್ಯಜಿಸಿ ನಗರಗಳಿಗೆ ಬಂದು ನೆಲೆಸುತ್ತಾರೆ. ಹೀಗೆ ಬಂದ ಅಲೆಮಾರಿ ಕಾರ್ಮಿಕರು ದೇಶದಾದ್ಯಂತ ಹರಡಿಕೊಂಡಿದ್ದಾರೆ. ಅವರು ಕೆಲಸಕ್ಕಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಮ್ಮ ಕುಟುಂಬದೊಂದಿಗೆ ಪ್ರಯಾಣಿಸುತ್ತಿರುತ್ತಾರೆ. ಅವರು ತಾತ್ಕಾಲಿಕ ಬಿಡಾರಗಳಲ್ಲಿ ಬೀಡುಬಿಟ್ಟಿರುತ್ತಾರೆ. ಕೆಲವೊಮ್ಮೆ ಅವರಿಗೆ ಕಂಪೆನಿಗಳು ಬಿಡಾರವನ್ನು ನೀಡಿರುತ್ತದೆ. ತಮ್ಮ ಕೆಲಸವು ಮುಗಿಯುವುದರೊಂದಿಗೆ ಆ ಬಿಡಾರವನ್ನು ಅವರು ತೊರೆಯಬೇಕಾಗುತ್ತದೆ.

ಈ ಕಾರ್ಮಿಕರಲ್ಲಿ ಹೆಚ್ಚಿನವರು ಅನಕ್ಷರಸ್ಥರು. ಅಲೆಮಾರಿಗಳಾದ ಕಾರಣಕ್ಕಾಗಿ ಅವರು ಸರಕಾರಿ ದಾಖಲೆಗಳಲ್ಲಿ ನೋಂದಾಯಿಸಲ್ಪಡುವುದಿಲ್ಲ. ಹಾಗಾಗಿ ಸರಕಾರದ ಎಲ್ಲಾ ಸೌಲಭ್ಯಗಳಿಂದಲೂ ಅವರು ವಂಚಿತರಾಗುತ್ತಾರೆ. ಕಾರ್ಮಿಕರ ರಕ್ಷಣೆಗಾಗಿ ಹಲವು ಕಾನೂನುಗಳು ದೇಶದಲ್ಲಿ ಇವೆಯಾದರೂ ಅವು ಈ ಕಾರ್ಮಿಕರಿಗೆ ರಕ್ಷಣೆ ನೀಡಲು ಸಂಪೂರ್ಣವಾಗಿ ವಿಫಲವಾಗಿದೆ. ಕೂಲಿಯಲ್ಲಿ ಅಭದ್ರತೆ, ಅಪಾಯಕಾರಿ ಕೆಲಸ ಹಾಗೂ ಅಭಿವೃದ್ಧಿ ಯೋಜನೆಗಳ ಕೊರತೆಯನ್ನು ಈ ಕಾರ್ಮಿಕರು ಎದುರಿಸುತ್ತಿದ್ದಾರೆ. ಅವರು ರಾತ್ರಿ ಹಗಲೆನ್ನದೆ ಕೆಲಸ ಮಾಡಬೇಕಾಗುತ್ತದೆ. ಬಿಡುವೆಂಬುದು ಅವರಿಗೆ ಇರುವುದಿಲ್ಲ. ಅವರಲ್ಲಿ ಹೆಚ್ಚಿನವರು ದಿನಕ್ಕೆ 8ರಿಂದ 11 ಗಂಟೆ ದುಡಿಯಬೇಕಾಗುತ್ತದೆ. ಅವರ ಕಠಿಣ ದುಡಿಮೆಗೆ ಸಿಗುವ ಆದಾಯ ಅತ್ಯಂತ ಕಡಿಮೆ. ಅಸಂಘಟಿತರಾಗಿರುವ ಸ್ಥಿತಿಯಲ್ಲಿ ಅವರಿಗೆ ಚೌಕಾಶಿ ಮಾಡುವ ಶಕ್ತಿಯಿರುವುದಿಲ್ಲ. ಅನ್ಯಾಯದ ವಿರುದ್ಧ ಹೋರಾಡಲು ಅವರಿಗೆ ಸಾಧ್ಯವಾಗಿಲ್ಲ.

ಕೆಲವೊಮ್ಮೆ ಅವರಿಗೆ ಕನಿಷ್ಠ ವೇತನವನ್ನೂ ನೀಡಲಾಗುವುದಿಲ್ಲ. ಮೊದಲೇ ನಿಗದಿಪಡಿಸಿದ ವೇತನವು ಅವರಿಗೆ ಸಮಯಕ್ಕೆ ಸರಿಯಾಗಿ ದೊರೆಯುವುದಿಲ್ಲ. ಅವರ ದುಡಿಮೆಯ ಅವಧಿಗೆ ಮಿತಿಯಿರುವುದಿಲ್ಲ ಮತ್ತು ದಿನದಲ್ಲಿ ಹೆಚ್ಚುವರಿಯಾಗಿ ದುಡಿದದ್ದಕ್ಕೆ ಅವರಿಗೆ ನೀಡುವ ಕೂಲಿಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಬಹುತೇಕ ಕಟ್ಟಡ ನಿರ್ಮಾಣ ಕೆಲಸವನ್ನು ಮಾಡುವ ಕಾರ್ಮಿಕರು ದಿನಕ್ಕೆ ಪಡೆಯುವುದು 50ರಿಂದ 100 ರೂಪಾಯಿ ಸಂಬಳವಾಗಿದೆ.

ಈ ಕಾರ್ಮಿಕರು ಅಪಾಯಕಾರಿ ಸ್ಥಿತಿಯಲ್ಲಿ ಕೆಲಸಮಾಡಬೇಕಾಗುತ್ತದೆ. ಹೆಚ್ಚಿನ ಕಂಪೆನಿಗಳು ಸೇಫ್ಟಿ ಬೆಲ್ಟ್, ರಕ್ಷಾಕವಚಗಳು, ಕನ್ನಡಕಗಳು, ಕೈ ಕವಚ, ಶೂ ಹಾಗೂ ಹೆಲ್ಮೆಟ್‌ಗಳನ್ನು ಕಾರ್ಮಿಕರಿಗೆ ನೀಡುವುದಿಲ್ಲ. ನಿರ್ಮಾಣ



ಕಾಮಗಾರಿಯ ವೇಳೆ ಕಾರ್ಮಿಕರು ಅಪಘಾತಕ್ಕೊಳಗಾಗುವುದರಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ಯ ಪ್ರಕಾರ ಎಲ್ಲಾ 1000 ಕಾರ್ಮಿಕರಲ್ಲಿ 165 ಮಂದಿ ಕೆಲಸದ

ಈ ಕಾರ್ಮಿಕರು ಅಪಾಯಕಾರಿ ಸ್ಥಿತಿಯಲ್ಲಿ ಕೆಲಸಮಾಡಬೇಕಾಗುತ್ತದೆ. ಹೆಚ್ಚಿನ ಕಂಪೆನಿಗಳು ಸೇಫ್ಟಿ ಬೆಲ್ಟ್, ರಕ್ಷಾಕವಚಗಳು, ಕನ್ನಡಕಗಳು, ಕೈ ಕವಚ, ಶೂ ಹಾಗೂ ಹೆಲ್ಮೆಟ್‌ಗಳನ್ನು ಕಾರ್ಮಿಕರಿಗೆ ನೀಡುವುದಿಲ್ಲ. ನಿರ್ಮಾಣ ಕಾಮಗಾರಿಯ ವೇಳೆ ಕಾರ್ಮಿಕರು ಅಪಘಾತಕ್ಕೊಳಗಾಗುವುದರಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ಯ ಪ್ರಕಾರ ಎಲ್ಲಾ 1000 ಕಾರ್ಮಿಕರಲ್ಲಿ 165 ಮಂದಿ ಕೆಲಸದ ವೇಳೆ ಗಾಯಗೊಂಡವರಾಗಿದ್ದಾರೆ. ಇವರಿಗೆ ಲೈಫ್ ಇನ್ಶೂರೆನ್ಸ್‌ಗಳ ಭದ್ರತೆಯೂ ಇಲ್ಲ. ಕೆಲಸದ ವೇಳೆ ಗಾಯಗೊಂಡಿರುವುದಕ್ಕಾಗಿ ಹೆಚ್ಚಿನ ವೇಳೆ ಕಂಪೆನಿಗಳು ಪರಿಹಾರವನ್ನೂ ನೀಡುವುದಿಲ್ಲ. ಅತೀವ ಪರಿಶ್ರಮ ಪಡುವ ಹೊರತಾಗಿಯೂ ಈ ಕಾರ್ಮಿಕರ ಅಥವಾ ಅವರ ಕುಟುಂಬದ ಆರ್ಥಿಕ ಸ್ಥಿತಿಯು ಉತ್ತಮವಾಗಿಯೇನೂ ಇರುವುದಿಲ್ಲ. ತಾತ್ಕಾಲಿಕ ಬಿಡಾರಗಳಲ್ಲಿ ಜೀವಿಸುವ ಇವರಿಗೆ ವಿದ್ಯುತ್ ಅಥವಾ ಶೌಚ ವ್ಯವಸ್ಥೆಯನ್ನು ನೀಡಲಾಗುವುದಿಲ್ಲ. ಬಾತ್‌ರೂಂ, ಕುಡಿಯುವ ನೀರಿನ ಸೌಲಭ್ಯಗಳು ಇರುವುದಿಲ್ಲ. ವಿದ್ಯಾಭ್ಯಾಸವೆಂಬುದು ಇವರಂತೇ ಇವರ ಮಕ್ಕಳಿಗೂ ಮರೀಚಿಕೆಯಾಗಿದೆ.

> ನಮ್ಮ ದೇಶದಲ್ಲಿ ಅತಿದೊಡ್ಡ ಕಾರ್ಮಿಕ ವಲಯವೇ ಇದೆ. ಕಾರ್ಮಿಕ ಸಂಘಟನೆಗಳೂ ಇವೆ. ಆದರೆ ಈ ಸಂಘಟನೆಗಳು ಯಾವಾಗ ಹೋರಾಟ ನಡೆಸಬೇಕು? ಯಾವಾಗ ಪ್ರತಿಭಟನೆ ನಡೆಸಬೇಕು? ಯಾರ ವಿರುದ್ಧ ಪ್ರತಿಭಟನೆ ನಡೆಸಬೇಕು? ಎಂಬಿತ್ಯಾದಿಯನ್ನು ನಿರ್ಧರಿಸುತ್ತಿರುವುದು ಮಾತ್ರ ರಾಜಕೀಯ ಪಕ್ಷಗಳು. ಈ ರಾಜಕೀಯ ಪಕ್ಷಗಳನ್ನು ನಿಯಂತ್ರಿಸುತ್ತಿರುವುದು ಬಹುರಾಷ್ಟ್ರೀಯ ಕಂಪೆನಿಗಳು, ಬಂಡವಾಳಶಾಹಿಗಳು.
>
> ಅಂದರೆ ಪರೋಕ್ಷವಾಗಿ ದೇಶದ ಕಾರ್ಮಿಕ ಸಂಘಟನೆಗಳು ದಾಸ್ಯದಲ್ಲಿವೆ. ಸದ್ಯ ಭಾರತದಲ್ಲಿ ಕಾರ್ಮಿಕರು ಸಂಘಟಿತರಾಗುವುದು ಕೂಡ ರಾಜಕೀಯ ಬೆಳವಣಿಗೆ ಎಂಬಂತೆ ಪರಿಗಣಿಸಲ್ಪಡುತ್ತಿರುವುದು ಕಾರ್ಮಿಕ ವಲಯವು ಅಸಂಘಟಿತರು ಎಂಬುದರ ಸ್ಪಷ್ಟ ಸಂಕೇತವಾಗಿದೆ.



ವೇಳೆ ಗಾಯಗೊಂಡವರಾಗಿದ್ದಾರೆ. ಇವರಿಗೆ ಲೈಫ್ ಇನ್ಶೂರೆನ್ಸ್‌ಗಳ ಭದ್ರತೆಯೂ ಇಲ್ಲ. ಕೆಲಸದ ವೇಳೆ ಗಾಯಗೊಂಡಿರುವುದಕ್ಕಾಗಿ ಹೆಚ್ಚಿನ ವೇಳೆ ಕಂಪೆನಿಗಳು ಪರಿಹಾರವನ್ನೂ ನೀಡುವುದಿಲ್ಲ. ಅತೀವ ಪರಿಶ್ರಮ ಪಡುವ ಹೊರತಾಗಿಯೂ ಈ ಕಾರ್ಮಿಕರ ಅಥವಾ ಅವರ ಕುಟುಂಬದ ಆರ್ಥಿಕ ಸ್ಥಿತಿಯು ಉತ್ತಮವಾಗಿಯೇನೂ ಇರುವುದಿಲ್ಲ. ತಾತ್ಕಾಲಿಕ ಬಿಡಾರಗಳಲ್ಲಿ ಜೀವಿಸುವ ಇವರಿಗೆ ವಿದ್ಯುತ್ ಅಥವಾ ಶೌಚ ವ್ಯವಸ್ಥೆಯನ್ನು ನೀಡಲಾಗುವುದಿಲ್ಲ. ಬಾತ್‌ರೂಂ, ಕುಡಿಯುವ ನೀರಿನ ಸೌಲಭ್ಯಗಳು ಇರುವುದಿಲ್ಲ. ವಿದ್ಯಾಭ್ಯಾಸವೆಂಬುದು ಇವರಂತೇ ಇವರ ಮಕ್ಕಳಿಗೂ ಮರೀಚಿಕೆಯಾಗಿದೆ. ಬಾಲ್ಯವೆಂಬುದರ ಸವಿಯನ್ನು ಅವರು ಉಂಡಿರುವುದಿಲ್ಲ. ಇಂತಹ ಮಕ್ಕಳನ್ನು ಅಪಹರಿಸಿ ಬೇಡುವ ವೃತ್ತಿಗೆ ನೂಕಿ ಅದರಿಂದ ಹಣ ಗಳಿಸುವ ಒಂದು ಮಾಫಿಯಾ ಕೂಡ ಇರುವುದು ವಾಸ್ತವವಾಗಿದೆ.

ಇನ್ನು ಐಟಿ ಹಾಗೂ ಬ್ಯುಸಿನೆಸ್ ಪ್ರೊಸೆಸ್ ಔಟ್‌ಸೋರ್ಸಿಂಗ್ (ಬಿಪಿಒ) ಕ್ಷೇತ್ರದಲ್ಲಿ ದೇಶವು ಬೆಳೆಯುತ್ತಿದೆಯೆಂದು ವಿಶ್ವವು ಹೊಗಳುತ್ತಿದೆ. ಆದರೆ ಇದರಲ್ಲಿ ದುಡಿಯುವ ಕಾರ್ಮಿಕರ ಪರಿಸ್ಥಿತಿಯನ್ನೊಮ್ಮೆ ನಾವು ಅವಲೋಕಿಸಬೇಕಾಗಿದೆ. ಔಟ್ ಸೋರ್ಸಿಂಗ್ ಕಾಲ್ ಸೆಂಟರ್‌ಗಳಲ್ಲಿ ದುಡಿಯುವ ಉದ್ಯೋಗಿಗಳು ದೀರ್ಘ ಕಾಲದ ಕೆಲಸದಿಂದಾಗಿ ಹಲವು ಮಾನಸಿಕ ಹಾಗೂ ದೈಹಿಕ ಅನಾರೋಗ್ಯಗಳಿಗೆ ಗುರಿಯಾಗಬೇಕಾಗುತ್ತದೆ. ಅವರ ಉದ್ಯೋಗಕ್ಕೆ ಯಾವುದೇ ಭದ್ರತೆಗಳಿರುವುದಿಲ್ಲ. ಕಂಪೆನಿಗಳು ಹೆಚ್ಚಾಗಿ ಹೆಣ್ಣು ಮಕ್ಕಳನ್ನು ಈ ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳುತ್ತವೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಇವರು ಲೈಂಗಿಕ ದೌರ್ಜನ್ಯಗಳನ್ನು ಎದುರಿಸಬೇಕಾಗುತ್ತದೆ. ಅವರಿಗೆ ಉದ್ಯೋಗ ಭದ್ರತೆಯೂ ಇರುವುದಿಲ್ಲ. ಅವರು ತಮ್ಮ ಧ್ವನಿ ಸೌಂದರ್ಯವನ್ನು ಕಳೆದುಕೊಳ್ಳುವುದರೊಂದಿಗೆ ಉದ್ಯೋಗವನ್ನೂ ಕಳೆದುಕೊಳ್ಳಬೇಕಾಗುತ್ತದೆ.

ನಮ್ಮ ದೇಶದಲ್ಲಿರುವ ದೊಡ್ಡ ಸಮಸ್ಯೆ ಬಾಲ ಕಾರ್ಮಿಕರು. ಸರಕಾರವು ದೇಶದಲ್ಲಿ ಬಾಲ ಕಾರ್ಮಿಕ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಕ್ರಮಕೈಗೊಳ್ಳಲಾಗಿದೆಯೆಂದು ಹೇಳಲಾಗುತ್ತಿದೆಯಾದರೂ, ಅದನ್ನು ಹೋಗಲಾಡಿಸುವ ಪ್ರಯತ್ನವು ಏನೇನೂ ಸಾಲದು. ಹೊಟೇಲುಗಳಲ್ಲಿ, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ, ಮನೆಗೆಲಸಗಳಿಗೆ ಹಾಗೂ ಇನ್ನೇನೋ ಕೆಲಸಗಳಿಗೆ ಬಾಲ ಕಾರ್ಮಿಕರನ್ನು ಬಳಸಲಾಗುತ್ತದೆ. ಇವರ ದುಡಿಮೆಗೆ ಅವಧಿಯ ಮಿತಿಯೆಂಬುದಿಲ್ಲ. ಯಜಮಾನನ ಎಲ್ಲಾ ಆಜ್ಞೆಗಳನ್ನೂ ಪಾಲಿಸಬೇಕಾಗುತ್ತದೆ. ಇವರಲ್ಲಿ ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯವನ್ನು ಎದುರಿಸಬೇಕಾಗುತ್ತದೆ.

ನಮ್ಮ ದೇಶದಲ್ಲಿ ಅತಿದೊಡ್ಡ ಕಾರ್ಮಿಕ ವಲಯವೇ ಇದೆ. ಕಾರ್ಮಿಕ ಸಂಘಟನೆಗಳೂ ಇವೆ. ಆದರೆ ಈ ಸಂಘಟನೆಗಳು ಯಾವಾಗ ಹೋರಾಟ ನಡೆಸಬೇಕು? ಯಾವಾಗ ಪ್ರತಿಭಟನೆ ನಡೆಸಬೇಕು? ಯಾರ ವಿರುದ್ಧ ಪ್ರತಿಭಟನೆ ನಡೆಸಬೇಕು? ಎಂಬಿತ್ಯಾದಿಯನ್ನು ನಿರ್ಧರಿಸುತ್ತಿರುವುದು ಮಾತ್ರ ರಾಜಕೀಯ

## ಗಣಿರಾಶಿಯಲ್ಲಿ ಕಾರ್ಮಿಕರ ಮೃತದೇಹಗಳು!

**ಗಣಿ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ. ಅವರು ತಮ್ಮ ಜೀವದ ಹಂಗನ್ನು ತೊರೆದು ಕೆಲಸ ಮಾಡಬೇಕಾಗುತ್ತದೆ. ಗಣಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಸಮೀಪದಿಂದ ಕಂಡಿರುವ ಸಿರಾಜ್ ಮಂಗಳೂರು ಇವರನ್ನು ಮಾತನಾಡಿಸಿದಾಗ ಅವರು ಕಾರ್ಮಿಕರ ದಯನೀಯ ಸ್ಥಿತಿಯನ್ನು ಈ ರೀತಿ ಬಿಚ್ಚಿಟ್ಟರು.**

ಬಳ್ಳಾರಿಯಲ್ಲಿ ಗಣಿ ಕಾರ್ಮಿಕರು ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅಲ್ಲಿ ಕಾರ್ಮಿಕರಿಗೆ ಕುಡಿಯಲು ಶುದ್ಧ ನೀರಿನ ವ್ಯವಸ್ಥೆಯಿಲ್ಲ. ಆಹಾರಗಳಿಗೆ ಗಣಿ ಧೂಳುಗಳು ಸೇರುವುದರಿಂದ ರೋಗಗಳಿಗೆ ತುತ್ತಾಗುವ ಸಾಧ್ಯತೆಗಳು ಅಧಿಕ. ಗಣಿ ಗುತ್ತಿಗೆ ವಹಿಸುವ ಕಂಪೆನಿಗಳು ಕಾರ್ಮಿಕರಿಗೆ ರಕ್ಷಣೆಗಾಗಿ ಮುಖ ಕವಚಗಳು, ಹೆಲ್ಮೆಟ್‌ಗಳನ್ನು ನೀಡುವುದಿಲ್ಲ. ಅಪಘಾತಗಳು ಸಂಭವಿಸಿದರೆ ಪ್ರಥಮ ಚಿಕಿತ್ಸೆಯಾಗಲಿ ಅಥವಾ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವುದಕ್ಕಾಗಿ ಆಂಬ್ಯುಲೆನ್ಸ್ ವ್ಯವಸ್ಥೆಯಾಗಲೀ ಇಲ್ಲ. ಹಲವು ಸಂದರ್ಭಗಳಲ್ಲಿ ಗಾಯಗೊಂಡ ಕಾರ್ಮಿಕರನ್ನು ಟಿಪ್ಪರ್‌ಗಳಲ್ಲಿ ಆಸ್ಪತ್ರೆಗೆ ಸಾಗಿಸಿದ ನಿದರ್ಶನಗಳಿವೆ.

ಗಣಿ ಅಗೆಯುವುದಕ್ಕಾಗಿ ಪರ್ವತಗಳ ಮೇಲೆ ಬೃಹತ್ ಗುಂಡಿಗಳನ್ನು ಕೊರೆಯಲಾಗುತ್ತದೆ. ಈ ಗುಂಡಿಗಳಿಂದ ಗಣಿಯನ್ನು ಸಾಗಿಸಲು ಇರುವ ಮಾರ್ಗವು ಅತ್ಯಂತ ಕಡಿದಾದುದು. ಈ ಮಾರ್ಗದಲ್ಲಿ ಸಂಚರಿಸುವಾಗ ಟಿಪ್ಪರ್‌ಗಳು ಹಲವು ಬಾರಿ ಕೆಳಕ್ಕೆ ಉರುಳಿ ಬಿದ್ದು ಕಾರ್ಮಿಕರು ಸಾವನ್ನಪ್ಪಿದ ಘಟನೆಗಳು ನಡೆದಿವೆ. ಈ ಕಾರ್ಮಿಕರಿಗೆ ಜೀವ ವಿಮೆಯಾಗಲೀ ಅಥವಾ ಪರಿಹಾರವಾಗಲೀ ನೀಡಲಾಗುವುದಿಲ್ಲ. ಗಣಿಗಾಗಿ ಸ್ಫೋಟಕಗಳನ್ನು ಸಿಡಿಸುವ ಸಂದರ್ಭದಲ್ಲಿ ಅಲ್ಲೇ ವಿಶ್ರಾಂತಿಗಾಗಿ ಮಲಗಿದ್ದ ಕಾರ್ಮಿಕರು ಕಲ್ಲುಗಳ ಹೊಡೆತಕ್ಕೆ ಸಾವನ್ನಪ್ಪುವ ಘಟನೆಗಳು ಸಂಭವಿಸುತ್ತದೆ.

ಡಂಪಿಂಗ್ ಯಾರ್ಡ್‌ನಲ್ಲಿ ಗಣಿಯನ್ನು ಕ್ರಶರ್‌ಗಳ ಮೂಲಕ ವಿಂಗಡಿಸಿ ಒಂದು ಕಡೆ ರಾಶಿ ಹಾಕಲಾಗಿರುತ್ತದೆ. ಕೆಲವೊಮ್ಮೆ ವಿಶ್ರಾಂತಿಗಾಗಿ ಈ ರಾಶಿಯ ಮೇಲೆ ಮಲಗಿದ್ದ ಕಾರ್ಮಿಕರನ್ನು ಜೆಸಿಬಿಗಳು ಟ್ರಕ್‌ಗಳಲ್ಲಿ ತುಂಬಿಸಿಕೊಂಡು ಹೋಗಿ ನಂತರ ಶವಗಳು ಕಾರವಾರ, ಮಂಗಳೂರು ಹಾಗೂ ಇತರ ಬಂದರ್‌ಗಳಲ್ಲಿ ಸಿಕ್ಕಿದ ನಿದರ್ಶನಗಳಿವೆ.

ಗಣಿಗಾರಿಕೆ ನಡೆಯುವ ಪ್ರದೇಶದಲ್ಲಿ ಸಂಭವಿಸುವ ಯಾವುದೇ ಅಪಘಾತಗಳು ಹೊರಜಗತ್ತಿಗೆ ತಿಳಿಯದಂತೆ ನೋಡಿಕೊಳ್ಳಲಾಗುತ್ತದೆ. ಅದಕ್ಕಾಗಿ ಮಾಧ್ಯಮಗಳ ಸ್ಥಳೀಯ ವರದಿಗಾರರಿಗೆ ಲಂಚವನ್ನೂ ನೀಡಲಾಗುತ್ತದೆ.

ಇನ್ನು ವಿದ್ಯಾಭ್ಯಾಸ. ಇಲ್ಲಿ ದುಡಿಯುವ ಕಾರ್ಮಿಕರೆಲ್ಲರೂ ಅವಿದ್ಯಾವಂತರೇ ಆಗಿದ್ದಾರೆ. ತಮ್ಮ ಮಕ್ಕಳಿಗೂ ವಿದ್ಯಾಭ್ಯಾಸವನ್ನು ಕಲಿಸದೆ ಅವರನ್ನು ಇದೇ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ವಿದ್ಯಾಭ್ಯಾಸದ ಬಗ್ಗೆ ಇವರಲ್ಲಿ ಜಾಗೃತಿಯುಂಟುಮಾಡುವವರು ಯಾರೂ ಇಲ್ಲ. ಬಾಲ ಕಾರ್ಮಿಕ ಕಾಯ್ದೆಗಳೇನೂ ಇಲ್ಲಿಗೆ ಅನ್ವಯಿಸುವುದೇ ಇಲ್ಲವೆನ್ನುವಂತಿದೆ. ಕಾರ್ಮಿಕರು ಇಂತಹ ಅಪಾಯಕಾರಿ ಸ್ಥಿತಿಯಲ್ಲಿ ಯಾವುದೇ ಭದ್ರತೆಗಳಿಲ್ಲದೆ ದುಡಿಯುತ್ತಾರೆ. ಆದರೆ ಇದರ ಲಾಭವನ್ನು ಮಾತ್ರ ಬಂಡವಾಳಶಾಹಿ ಕಂಪೆನಿಗಳು ಪಡೆದುಕೊಳ್ಳುತ್ತವೆ.

ಪಕ್ಷಗಳು. ಈ ರಾಜಕೀಯ ಪಕ್ಷಗಳನ್ನು ನಿಯಂತ್ರಿಸುತ್ತಿರುವುದು ಬಹುರಾಷ್ಟ್ರೀಯ ಕಂಪೆನಿಗಳು, ಬಂಡವಾಳಶಾಹಿಗಳು. ಅಂದರೆ ಪರೋಕ್ಷವಾಗಿ ದೇಶದ ಕಾರ್ಮಿಕ ಸಂಘಟನೆಗಳು ದಾಸ್ಯದಲ್ಲಿವೆ. ಸದ್ಯ ಭಾರತದಲ್ಲಿ ಕಾರ್ಮಿಕರು ಸಂಘಟಿತರಾಗುವುದು ಕೂಡ ರಾಜಕೀಯ ಬೆಳವಣಿಗೆ ಎಂಬಂತೆ ಪರಿಗಣಿಸಲ್ಪಡುತ್ತಿರುವುದು ಕಾರ್ಮಿಕ ವಲಯವು ಅಸಂಘಟಿತರು ಎಂಬುದರ ಸ್ಪಷ್ಟ ಸಂಕೇತವಾಗಿದೆ.

ಒಂದು ಕಟ್ಟಡ ನಿರ್ಮಾಣ ಎಂಬ ಸಣ್ಣ ವಲಯದಲ್ಲೂ ಕಾರ್ಮಿಕರಿಗೆ ಕಡ್ಡಾಯವಾಗಿರಬೇಕಾದ ಮೂಲಭೂತ ಅವಶ್ಯಕತೆಗಳಿಲ್ಲ ಎಂದ ಮೇಲೆ ಇಡೀ ದೇಶದಲ್ಲಿ ಕಾರ್ಮಿಕರು ಅದೆಷ್ಟು ಸೌಲಭ್ಯಗಳನ್ನು ಪಡೆಯುತ್ತಿರಬಹುದು? ಕಾರ್ಮಿಕರ ಬೆವರ ಹನಿಗೆ ದೇಶದಲ್ಲಿ ಇನ್ನೂ ಮೌಲ್ಯ ಪ್ರಾಪ್ತಿಯಾಗಿಲ್ಲ ಎಂಬ ಕಠೋರ ಸತ್ಯವನ್ನು ನಾವು ಒಪ್ಪಿಕೊಳ್ಳಲೇಬೇಕು.

ನಮ್ಮದು ದಿನಕ್ಕೆ 2 ಡಾಲರ್‌ಗೂ ಕಡಿಮೆ ಹಣ ಸಂಪಾದಿಸುವ 80% ಮಂದಿಯನ್ನು ಹೊಂದಿರುವ ದೇಶವಾಗಿದೆ. ಈ ಮಂದಿಯೆಲ್ಲಾ ಬಡ ಕಾರ್ಮಿಕರಾಗಿದ್ದಾರೆ. ಕಾರ್ಮಿಕ ಸಂಘಟನೆಗಳು ಈವರೆಗೆ ನಡೆಸಿದ ಹೋರಾಟಗಳಿಂದ ಕಾರ್ಮಿಕರಿಗೆ ಆದ ಲಾಭವಾದರೂ ಏನು? ಎಂಬುದನ್ನು ಅವಲೋಕನ ನಡೆಸಲು ಇದು ಸಕಾಲವಾಗಿದೆ.

## ಕಲ್ಲಿದ್ದಲ್ಲು ಗಣಿ ದುರಂತದ ಇತಿಹಾಸ...

ಕಲ್ಲಿದ್ದಲ್ಲು ಗಣಿಗಾರಿಕೆಯು ಅತ್ಯಂತ ಅಪಾಯಕಾರಿಯಾಗಿದೆ. 20ನೆ ಶತಮಾನದಲ್ಲಿ ಅಮೆರಿಕವೊಂದರಲ್ಲೇ 1,00,000 ಲಕ್ಷಕ್ಕೂ ಅಧಿಕ ಕಾರ್ಮಿಕರು ಕಲ್ಲಿದ್ದಲ್ಲು ಗಣಿಗಾರಿಕೆಯ ವೇಳೆ ನಡೆದ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. 1907ರಲ್ಲಿ ಒಂದೇ ವರ್ಷದಲ್ಲಿ ಅಮೆರಿಕದಲ್ಲಿ 3,200 ಮಂದಿ ಇಲ್ಲಿ ಸಾವನ್ನಪ್ಪಿದ್ದರು.

ಗಣಿ ಸಾಗಾಟದ ವಾಹನಗಳ ಅಪಘಾತ, ಉಸಿರುಗಟ್ಟುವಿಕೆ, ವಿಷಾನಿಲ, ವಾಯು ಮಾಲಿನ್ಯ ಮತ್ತು ಛಾವಣಿ ಕುಸಿತಗಳನ್ನೊಳೊಗಂಡಂತೆ ಅಂಡರ್ ಗ್ರೌಂಡ್ ಮೈನಿಂಗ್ ದುರಂತಗಳಿಗೆ ಕಾರ್ಮಿಕರು ಬಲಿಯಾಗಬೇಕಾಗುತ್ತದೆ. ಕಲ್ಲಿದ್ದಲು ಗಣಿಗಳು ಸ್ಫೋಟಿಸಿಯೂ ಕೆಲವೊಮ್ಮೆ ಕಾರ್ಮಿಕರು ಸಾವನ್ನಪ್ಪುತ್ತಾರೆ.

ಚೀನದಲ್ಲಿ ಅತ್ಯಧಿಕ ಕಾರ್ಮಿಕರು ಕಲ್ಲಿದ್ದಲು ಗಣಿಗಾರಿಕೆ ಸಂಬಂಧಿಸಿದ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ. ಅಧಿಕೃತ ಅಂಕಿಅಂಶಗಳ ಪ್ರಕಾರ 2004ರಲ್ಲಿ 6027 ಕಾರ್ಮಿಕರು ಕಲ್ಲಿದ್ದಲ್ಲು ಗಣಿಗಾರಿಕೆಯ ವೇಳೆ ನಡೆದ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ. ಇಂದಿಗೂ ಪ್ರತೀ ದಿನ ಚೀನದಲ್ಲಿ ನೂರಾರು ಮಂದಿ ಕಾರ್ಮಿಕರು ಕಲ್ಲಿದ್ದಲ್ಲು ಅಪಘಾತಗಳಲ್ಲಿ ಸಾವನ್ನಪ್ಪುತ್ತಿದ್ದಾರೆ.

### 10 ಪ್ರಮುಖ ಕಲ್ಲಿದ್ದಲ್ಲು ಗಣಿ ದುರಂತಗಳು

1. ಚೀನದ ಹಾನ್ಕಿಕೊ ಕೊಲ್ಲೀರಿಯ ಕಲ್ಲಿದ್ದಲು ಗಣಿಯಲ್ಲಿ 1942ರ ಎಪ್ರಿಲ್ 26ರಂದು ನಡೆದ ಅವಘಡದಲ್ಲಿ 1549 ಗಣಿ ಕಾರ್ಮಿಕರು ಸಾವನ್ನಪ್ಪಿದ್ದರು. ಇದು ಅತ್ಯಂತ ಭೀಕರ ಕಲ್ಲಿದ್ದಲ್ಲು ಅವಘಡವೆಂದು ಪರಿಗಣಿಸಲಾಗಿದೆ.

2. 1906ರಲ್ಲಿ ಫ್ರಾನ್ಸ್‌ನ ಕರಿಯರ್ಸ್‌ನಲ್ಲಿ ನಡೆದ ಕಲ್ಲಿದ್ದಲು ಗಣಿ ದುರಂತದಲ್ಲಿ 1100 ಕಾರ್ಮಿಕರು ಸಾವನ್ನಪ್ಪಿದ್ದರು.

3. 1963ರಲ್ಲಿ ನವೆಂಬರ್ 9ರಂದು ಕಲ್ಲಿದ್ದಲ್ಲು ಗಣಿಗಾರಿಕೆಯ ವೇಳೆ ನಡೆದ ಸ್ಫೋಟವೊಂದರಲ್ಲಿ 447 ಮಂದಿ ಗಣಿ ಕಾರ್ಮಿಕರು ಸಾವನ್ನಪ್ಪಿದ್ದರು.

4. 1913ರ ಅಕ್ಟೋಬರ್ 14ರಂದು ಇಂಗ್ಲೆಂಡ್‌ನ ಸೆಂಘೆನಿಡ್‌ನಲ್ಲಿ ನಡೆದ ಕಲ್ಲಿದ್ದಲ್ಲು ಗಣಿ ದುರಂತದಲ್ಲಿ ಮಕ್ಕಳನ್ನೊಳಗೊಂಡಂತೆ 438 ಸಾವನ್ನಪ್ಪಿದ್ದರು.

5. 1960ರ ಜನವರಿ1ರಂದು ದಕ್ಷಿಣ ಆಫ್ರಿಕದ ಕೋಲ್‌ಬ್ರೂಕ್‌ನಲ್ಲಿ ನಡೆದ ದುರಂತದಲ್ಲಿ 437 ಮಂದಿ ಸಾವನ್ನಪ್ಪಿದ್ದರು.

6. 1972ರಲ್ಲಿ ವಾನ್ಕಿಯಲ್ಲಿ ನಡೆದ ಕಲ್ಲಿದ್ದಲ್ಲು ಗಣಿ ಸ್ಫೋಟದಲ್ಲಿ 427 ಮಂದಿ ಸಾವನ್ನಪ್ಪಿದ್ದರು.

7. 1965ರಲ್ಲಿ ಭಾರತದ ಧನ್‌ಬಾದ್‌ನಲ್ಲಿ ಕಲ್ಲಿದ್ದಲು ಗಣಿಗೆ ಬೆಂಕಿ ತಗುಲಿದಾಗ 375 ಮಂದಿ ಸಾವನ್ನಪ್ಪಿದ್ದರು.

8. ಭಾರತದ ಚನ್ನಾಲದಲ್ಲಿ 1975ರ ಡಿಸೆಂಬರ್ 7ರಂದು ನಡೆದ ಕಲ್ಲಿದ್ದಲು ಸ್ಫೋಟ ಹಾಗೂ ಆ ನಂತರದ ಪ್ರವಾಹದಲ್ಲಿ 372 ಮಂದಿ ಸಾವನ್ನಪ್ಪಿದ್ದರು.

9. 1866ರ ಡಿಸೆಂಬರ್ 12ರಂದು ಇಂಗ್ಲೆಂಡ್‌ನ ಬಾಮ್ಸ್ಲಿಯಲ್ಲಿ 361 ಮಂದಿ ಸಾವನ್ನಪ್ಪಿದ್ದರು.

10. ಪಶ್ಚಿಮ ವರ್ಜೀನಿಯಾದ ಮೊನೋಂಘಾದಲ್ಲಿ ನಡೆದ ಕಲ್ಲಿದ್ದಲು ದುರಂತದಲ್ಲಿ 361 ಮಂದಿ ಸಾವನ್ನಪ್ಪಿದ್ದರು.

ಅಭದ್ರತೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಹತ್ತು ಹಲವು ಸಮಸ್ಯೆಗಳಿಂದ ತೊಳಲಾಡುತ್ತಿರುವ ಕಾರ್ಮಿಕರು ಮೊದಲನೆಯದಾಗಿ ತಮಗೆ ಪರೋಕ್ಷವಾಗಿ ತೊಡಿಸಲಾಗಿರುವ ಬೇಡಿಗಳನ್ನು ಕಿತ್ತೆಸೆಯಬೇಕಾಗಿದೆ. ಅವರು ಆಳಿಸಿಕೊಳ್ಳುವವರಾಗುವ ಬದಲು ಆಳುವವರಾಗಬೇಕಾಗಿದೆ. ಈ ದೇಶದ ಎಲ್ಲಾ ಅಭಿವೃದ್ಧಿಗೆ ಮೂಲ ಕಾರಣ ಕಾರ್ಮಿಕನ ಪರಿಶ್ರಮವಾಗಿದೆ. ಆತನ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿ ಅಸಾಧ್ಯ. ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ನಡೆಸಬೇಕಾಗಿದೆ. ಅವರು ರಾಜಕೀಯ ಪಕ್ಷಗಳ ಕೈಗೊಂಬೆಯಾಗಬಾರದು.

ತಮ್ಮ ಅಭಿವೃದ್ಧಿಯೊಂದಿಗೆ ದೇಶದ ಅಭಿವೃದ್ಧಿಗಾಗಿ ಅವರು ಪರ್ಯಾಯ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಕೆಳ ಸ್ತರದಲ್ಲಿರುವ ಅನಕ್ಷರಸ್ಥ ಕಾರ್ಮಿಕರಿಗೂ ತಮ್ಮ ಹಕ್ಕುಗಳ ಬಗ್ಗೆ ಮನವರಿಕೆಯುಂಟು ಮಾಡಿ ದೇಶದಲ್ಲಿರುವ ಸಾಮಾಜಿಕ ವ್ಯವಸ್ಥೆಯ ಬದಲಾವಣೆಗೆ ಕಾರ್ಮಿಕರು ಪಣತೊಡಬೇಕು.

# ಅರಬ್ ಜಗತ್ತಿನಲ್ಲಾದ ಬದಲಾವಣೆಯೇನು?

● ಅನೀಸ್ ಅಹ್ಮದ್, ಬೆಂಗಳೂರು



ತುನೀಸಿಯಾದಲ್ಲಿ ಡಿಸೆಂಬರ್ 17, 2010ರಂದು ಪ್ರತಿಭಟನೆಯು ಭುಗಿಲೇಳುವುದರೊಂದಿಗೆ ಇಡೀ ಪೂರ್ವ ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಜನ ಬಂಡಾಯವು ಆರಂಭವಾಯಿತು. ಇದು ಸರ್ವಾಧಿಕಾರಿಗಳಾದ ಜನರಲ್ ಝೈನ್ ಉಲ್ ಆಬಿದೀನ್ ಬಿನ್ ಅಲಿ ಮತ್ತು ಜನರಲ್ ಹುಸ್ನಿ ಮುಬಾರಕ್‌ನ ಆಳ್ವಿಕೆಗೆ ಅಂತ್ಯ ತಂದಿತು. ಉಳಿದ ಸರ್ವಾಧಿಕಾರಿಗಳ ಎದೆಯಲ್ಲಿ ನಡುಕವನ್ನು ಉಂಟುಮಾಡಿತು. ಈ ಬಂಡಾಯಗಳನ್ನು 'ಪ್ರಜಾಪ್ರಭುತ್ವ ಪರ ಚಳವಳಿ', 'ಅರಬ್ ಜಗತ್ತಿನ ಎಚ್ಚರ' ಅಥವಾ 'ಕ್ರಾಂತಿ' ಎಂದು ಬಣ್ಣಿಸಲಾಯಿತು. ಪಶ್ಚಿಮವು ಇದನ್ನು ತುಂಬಾ ಒಲ್ಲದ ಮನಸ್ಸಿನಿಂದ ಸ್ವಾಗತಿಸಿತು. ಅರಬ್ ಜಗತ್ತಿನಲ್ಲಿ ಮುಸ್ಲಿಮರು ಬೃಹತ್ ಪ್ರಮಾಣದಲ್ಲಿದ್ದು, ಈ ಸಮಾಜದಲ್ಲಿ ಸಾಮಾಜಿಕ-ರಾಜಕೀಯ ಮಾದರಿಯು ಉತ್ತಮವಾಗಿ ರೂಪುಗೊಳ್ಳುವುದನ್ನು ಪಾಶ್ಚಿಮಾತ್ಯರು ಬಯಸುವುದಿಲ್ಲ. ಅದೇ ರೀತಿಯಲ್ಲಿ, ಇಸ್ಲಾಮಿಕ್ ಪಕ್ಷಗಳಾದ ಅಲ್ ಇಖ್ವಾನ್ ಉಲ್ ಮುಸ್ಲಿಮೂನ್, ಅಲ್ ನದಾಹ್ ಮತ್ತು ಇತರ ಇಸ್ಲಾಮಿಕ್ ಪಕ್ಷಗಳನ್ನು ತಡೆ ಹಿಡಿಯಲಾಗಿದೆ ಅಥವಾ ಬಂಡಾಯದಲ್ಲಿ ಅವುಗಳ ಪಾತ್ರವನ್ನು ಉಲ್ಲೇಖಿಸಲಾಗಿರುವುದು ಬಹಳ ವಿರಳ . ಆದರೆ ಇದು ಸಮಸ್ಯೆಯ ಒಂದು ಮುಖವಾಗಿದೆ.

'ಬದಲಾವಣೆಯ ಕಾಲಘಟ್ಟ ಆರಂಭವಾಗಿದೆ' ಎಂಬ ನನ್ನ ಕಳೆದ ಲೇಖನದಲ್ಲಿ ಅರಬ್ ರಾಷ್ಟ್ರಗಳಲ್ಲಿ ನಿರೀಕ್ಷಿತ ಫಲಿತಾಂಶವು ಹೊರಬಹುದೇ ಎಂಬ ಕಳವಳವನ್ನು ವ್ಯಕ್ತಪಡಿಸಿದ್ದೆ. ಈ ಬಂಡಾಯವು ಕ್ರಾಂತಿಯಾಗಿ ಬಣ್ಣಿಸಬಹುದೆ ಎಂಬುದು ಇನ್ನೊಂದು ಪ್ರಶ್ನೆಯಾಗಿತ್ತು. ಇದನ್ನು ವಿಶಾಲವಾಗಿ ವಿಶ್ಲೇಷಿಸುವ ಅಗತ್ಯವಿದೆ. ಇದೊಂದು ಹೊಸ ಮಾದರಿಯ ಪ್ರತಿಭಟನೆಯಾಗಿರುವುದರಿಂದ, ಜನರನ್ನು ಸಂಘಟಿಸುವುದಕ್ಕಾಗಿ ಟ್ವಿಟ್ಟರ್ ಮತ್ತು ಫೇಸ್‌ಬುಕ್‌ನಂತಹ ಸಾಮಾಜಿಕ ತಾಣಗಳನ್ನು ಉಪಯೋಗಿಸಲಾಗಿರುವುದರಿಂದ ಒಂದು ರೀತಿಯಲ್ಲಿ ಇದನ್ನು ಕ್ರಾಂತಿಯೆಂದು ಕರೆಯಬಹುದು.

ಅಲ್ಲದೆ, ಬಹುತೇಕ ದೇಶಗಳಲ್ಲಿ ಯುವಕರು ಮುಂದಾಳುಗಳಾಗಿದ್ದಾರೆ. ಇದು ಕೂಡ ಒಂದು ಅಸಾಧಾರಣಾ ಸಂಗತಿಯಾಗಿದೆ. ಆದರೆ ಇದನ್ನೇ ಅಂತಿಮವೆಂದು ಭಾವಿಸುವುದು ತುಂಬಾ ಸರಳವಾಗುತ್ತದೆ. ಎಲ್ಲಾ ದೇಶಗಳಲ್ಲೂ ಯುವಕರು ಚಳವಳಿಗೆ ಹುರುಪನ್ನು ನೀಡಿದ್ದಾರೆ; ಅವರು ಯಾವಾಗಲೂ ಇದನ್ನು ನೀಡುತ್ತಾರೆ ಮತ್ತು ಈಗ ನಡೆಯುತ್ತಿರುವ ಬಂಡಾಯಗಳಲ್ಲೂ. ವಾಸ್ತವ ಜಗತ್ತಿನಲ್ಲಿ, ಚಳವಳಿಯ ಯಶಸ್ವಿಗೆ ಕೆಲವು ಅಗತ್ಯತೆಗಳಿವೆ. ಸರ್ವಾಧಿಕಾರಿಗಳನ್ನು ಉಚ್ಚಾಟಿಸುವುದು ಅಥವಾ ಮುಖಗಳ ಬದಲಾವಣೆಯೊಂದಿಗೆ ತೃಪ್ತಿ ಪಡುವುದು ಸಾಕಾಗುವುದಿಲ್ಲ. ಅದರ ನಂತರ ಏನಾಗುತ್ತದೆ ಎಂಬುದೂ ಅದೇ ರೀತಿಯಲ್ಲಿ ಮಹತ್ವದ್ದಾಗಿದೆ. ಆದುದರಿಂದ ನಾವು ಇಂತಹ ಕೆಲವು ಪ್ರಾಥಮಿಕ ನಿಯಮಗಳ ಬಗ್ಗೆ ಅರಿತುಕೊಳ್ಳುವುದರ ಅಗತ್ಯವಿದೆ.

ಮೊದಲು ನಾವು ಕ್ರಾಂತಿಯ ಅರ್ಥವನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕಾಗಿದೆ. ಕ್ರಾಂತಿ ಎಂಬ ಶಬ್ದವು ತುಂಬಾ ಆಕರ್ಷಕವಾದುದು. ಯಾವುದೇ ಚಳವಳಿಯನ್ನು ಕ್ರಾಂತಿಯೆಂದು ಕರೆಯಲು ಕನಿಷ್ಠ ಅಗತ್ಯವೆಂದರೆ ಅದು ಪ್ರಸ್ತುತ ಇರುವ ವ್ಯವಸ್ಥೆಯನ್ನು ಕಿತ್ತೆಸೆಯಬೇಕು ಮತ್ತು ಸಂಪೂರ್ಣವಾಗಿ ಭಿನ್ನವಾದ ಹೊಸ ವ್ಯವಸ್ಥೆಯನ್ನು ಸ್ಥಾಪಿಸಬೇಕು. ನಾವು ಅರಬ್ ಬಂಡಾಯಗಳನ್ನು ಗಮನಿಸುವಾಗ, ತುನೀಸಿಯಾದಲ್ಲಾಗಲೀ ಅಥವಾ ಈಜಿಪ್ಟ್‌ನಲ್ಲಾಗಲೀ ನಮಗೆ ಇದನ್ನು ಕಾಣಸಲು ಸಾಧ್ಯವಿಲ್ಲ. ಅಲ್ಲಿ ಹಳೆಯ ಸರ್ವಾಧಿಕಾರಿಗಳ ಉಚ್ಚಾಟನೆಯಾಗಿದೆ. ಆದರೆ ಹಳೆಯ ವ್ಯವಸ್ಥೆಯು ಇನ್ನೂ ಹಾಗೇ ಉಳಿದಿದೆ ಮತ್ತು ಈ ಹಳೆಯ ವ್ಯವಸ್ತೆಗೆ ಯಾವುದೇ ಅಪಾಯವು ನಮಗೆ ಕಾಣಲಾರದು.

ಮೊದಲು ನಾವು ಕ್ರಾಂತಿಯ ಅರ್ಥವನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕಾಗಿದೆ. ಕ್ರಾಂತಿ ಎಂಬ ಶಬ್ದವು ತುಂಬಾ ಆಕರ್ಷಕವಾದುದು. ಯಾವುದೇ ಚಳವಳಿಯನ್ನು ಕ್ರಾಂತಿಯೆಂದು ಕರೆಯಲು ಕನಿಷ್ಠ ಅಗತ್ಯವೆಂದರೆ ಅದು ಪ್ರಸ್ತುತ ಇರುವ ವ್ಯವಸ್ಥೆಯನ್ನು ಕಿತ್ತೆಸೆಯಬೇಕು ಮತ್ತು ಸಂಪೂರ್ಣವಾಗಿ ಭಿನ್ನವಾದ ಹೊಸ ವ್ಯವಸ್ಥೆಯನ್ನು ಸ್ಥಾಪಿಸಬೇಕು. ನಾವು ಅರಬ್ ಬಂಡಾಯಗಳನ್ನು ಗಮನಿಸುವಾಗ, ತುನೀಸಿಯಾದಲ್ಲಾಗಲೀ ಅಥವಾ ಈಜಿಪ್ಟ್‌ನಲ್ಲಾಗಲೀ ನಮಗೆ ಇದನ್ನು ಕಾಣಸಲು ಸಾಧ್ಯವಿಲ್ಲ. ಅಲ್ಲಿ ಹಳೆಯ ಸರ್ವಾಧಿಕಾರಿಗಳ ಉಚ್ಚಾಟನೆಯಾಗಿದೆ. ಆದರೆ ಹಳೆಯ ವ್ಯವಸ್ಥೆಯು ಇನ್ನೂ ಹಾಗೇ ಉಳಿದಿದೆ ಮತ್ತು ಈ ಹಳೆಯ ವ್ಯವಸ್ತೆಗೆ ಯಾವುದೇ ಅಪಾಯವು ನಮಗೆ ಕಾಣಲಾರದು. ತುನೀಸಿಯಾದಲ್ಲಿ ಜನರಲ್ ಝೈನ್ ಉಲ್ ಆಬಿದೀನ್ ಪರಾರಿಯಾಗಿದ್ದಾನೆ. ಆದರೆ ಆತನ ಪಕ್ಷ ಮತ್ತು ಅನುಯಾಯಿಗಳು ತುನೀಸಿಯಾದ ಎಲ್ಲಾ ವ್ಯವಹಾರಗಳ ಮೇಲೂ ನಿಯಂತ್ರಣವನ್ನು ಹೊಂದಿದ್ದಾರೆ. ಹಾಗಾದರೆ ತುನೀಸಿಯಾದಲ್ಲಿ ಬದಲಾವಣೆಯಾದದ್ದೇನು? ಅದೇ ರೀತಿ, ಈಜಿಪ್ಟ್‌ನಲ್ಲಿ ಹಳೆಯ ಆಡಳಿತದ ಪ್ರಮುಖ ಆಧಾರವಾಗಿದ್ದ ಸೇನೆಯು ಈಜಿಪ್ಟ್‌ನ ಮೇಲೆ ಪೂರ್ಣ ನಿಯಂತ್ರಣವನ್ನು ಹೊಂದಿದೆ. ಈಜಿಪ್ಟ್‌ನ ನೂತನವಾಗಿ ಆಯ್ಕೆಯಾದ ವಿದೇಶಾಂಗ ಸಚಿವ ಎನೀಲ್ ಅಲ್ ಅರಬಿ, ಬಹ್ರೈನ್‌ನಲ್ಲಿ ಜನ ಬಂಡಾಯವನ್ನು ದಮನಿಸುವುದಕ್ಕಾಗಿ ಸೌದಿ ಅರೇಬಿಯಾ ಸೇನೆಯನ್ನು ನಿಯೋಜಿಸಿರುವುದನ್ನು ಒಪ್ಪಿಕೊಂಡಿದ್ದಾರೆ. ತುರ್ತು ಪರಿಸ್ಥಿತಿಯು ಈಗಲೂ ಉಳಿದಿದೆ. ಗಾಝಾದ ಗಡಿಯು ಇನ್ನೂ ಮುಚ್ಚಲ್ಪಟ್ಟಿದೆ. ದಶಕಗಳ ಕಾಲ ದೌರ್ಜನ್ಯಗಳ ನೇತೃತ್ವ ವಹಿಸಿದ್ದ ಹಳೆಯ ಫರೋವಾ ಹುಸ್ನಿ ಮುಬಾರಕ್ ಇನ್ನೂ ಶರ್ಮ್ ಅಲ್ ಶೇಖ್‌ನಲ್ಲಿರುವ ತನ್ನ ಸಿರಿವಂತ ಬಂಗ್ಲೆಯಲ್ಲಿ ಜೀವಿಸುತ್ತಿದ್ದಾನೆ. ಹಾಗಾದರೆ ಈಜಿಪ್ಟ್‌ನಲ್ಲಿ ಬದಲಾವಣೆಯಾಗಿರುವುದೇನು?

ಇತರ ರಾಷ್ಟ್ರಗಳಲ್ಲೂ ವಾಸ್ತವ ಇದೇ ರೀತಿಯಲ್ಲಿದೆ. ಲಿಬಿಯಾ, ಯಮನ್, ಬಹ್ರೈನ್, ಸೌದಿ ಅರೇಬಿಯಾ, ಜೋರ್ಡಾನ್ ಮತ್ತು ಸಿರಿಯಾಗಳಲ್ಲಿ ಬಂಡಾಯವು ನಡೆಯುತ್ತಲಿದೆ. ಬಹ್ರೈನ್ ಮತ್ತು ಜೋರ್ಡಾನ್ ಬಿಟ್ಟರೆ, ಇತರ ಯಾವುದೇ ನಾಯಕರು ಅಥವಾ ಚಳವಳಿಗಳು ಪ್ರತಿಭಟನೆಯ ನೇತೃತ್ವ ವಹಿಸಿಲ್ಲ. ಬಹ್ರೈನ್‌ನಲ್ಲಿ ಆಂದೋಲನದ ನೇತೃತ್ವವನ್ನು ಉಲೆಮಾಗಳು ವಹಿಸಿದರೆ, ಜೋರ್ಡಾನ್‌ನಲ್ಲಿ ಇಸ್ಲಾಮಿಕ್ ಆ್ಯಕ್ಷನ್ ಫ್ರಂಟ್ (ಐಎಎಫ್) ಚಳವಳಿಯ ಮುಂಚೂಣಿಯಲ್ಲಿದೆ. ಆದರೆ ಇವುಗಳ ಬೇಡಿಕೆಗಳು ಬಹಳ ಸಂಕುಚಿತವಾದದ್ದು. ಐಎಎಫ್ ರಾಜಾಡಳಿತದ ನಿರ್ಮೂಲನವಾಗಬೇಕೆಂದು ಆಗ್ರಹಿಸಿಲ್ಲ; ಅದು ಕೇವಲ ಪ್ರಧಾನ ಮಂತ್ರಿಯ ರಾಜೀನಾಮೆ ಮತ್ತು ರಾಜನ ಕೆಲವು ಅಧಿಕಾರವನ್ನು ಸಂಕ್ಷೇಪಿಸುವ ಬೇಡಿಕೆಗಳನ್ನಿಟ್ಟಿದೆ. ಇಲ್ಲಿ ಯಾವುದೇ ಕ್ರಾಂತಿಕಾರಿ ಬದಲಾವಣೆಯ

ಬೇಡಿಕೆಗಳಿಲ್ಲದಿರುವುದರಿಂದ ಇದನ್ನು ಕ್ರಾಂತಿಯೆಂದು ಹೇಳುವುದು ಕಷ್ಟಕರ.

ತಮ್ಮ ಸಮಾಜದಲ್ಲಿರುವ ವ್ಯವಸ್ಥೆಯು ವಸಾಹತುಶಾಹಿಗಳ ರಚನೆಯಾಗಿದೆ ಎಂಬುದನ್ನು ಮುಸ್ಲಿಮರು ಅರಿತುಕೊಳ್ಳಬೇಕಾಗಿದೆ. ಇವು ಜನರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ರಚಿಸಲ್ಪಟ್ಟಿರುವುದಲ್ಲ. ಎಲ್ಲಾ ಮುಸ್ಲಿಮ್ ಸಮಾಜದಲ್ಲಿರುವ ಆಡಳಿತ ಶಕ್ತಿಗಳು ಪಾಶ್ಚಿಮಾತ್ಯರಿಗೆ ನಿಷ್ಠವಾದುದು. 1979ರಲ್ಲಿ ಇರಾನ್‌ನಲ್ಲಾದಂತೆ ಮುಸ್ಲಿಮರು ಈ ವ್ಯವಸ್ಥೆಗಳನ್ನು ಸಂಪೂರ್ಣವಾಗಿ ಕಿತ್ತೆಸೆಯುವುದಕ್ಕಾಗಿ ಹೋರಾಟ ನಡೆಸುವವರೆಗೆ, ಅವರ ಬದಲಾವಣೆಯ ಬಯಕೆಯು ಪೂರ್ಣವಾಗುವುದಿಲ್ಲ. ಬದಲಾವಣೆಯು ಉಂಟಾಗಬೇಕಾದರೆ, ಕೆಲವು ನಿಯಮಗಳು ಖಂಡಿತವಾಗಿಯೂ ಪಾಲಿಸಲ್ಪಡಬೇಕಾಗಿದೆ. ಉತ್ತಮ ಸಲಹೆ ಸೂಚನೆಗಳನ್ನು ನೀಡಬಲ್ಲ ವರ್ಚಸ್ಸಿನ ಹಾಗೂ ಪ್ರಾಮಾಣಿಕ ನಾಯಕತ್ವವನ್ನು ಹೊಂದಿರುವ ಚಳುವಳಿಯ ಅಗತ್ಯವಿದೆ. ಹಳೆಯ ವ್ಯವಸ್ಥೆಯನ್ನು ಕಿತ್ತೆಸೆಯುವ ಮಾತ್ರವಲ್ಲ, ಹೊಸ ಸರಳ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿಯತ್ತ ಜನ ಶಕ್ತಿಯನ್ನು ಒಟ್ಟು ಸೇರಿಸಬೇಕು. ಇಂತಹ ಆಂದೋಲನವು ಯಾವುದೇ ಪ್ರಾದೇಶಿಕ, ಬುಡಕಟ್ಟು ಅಥವಾ ರಾಷ್ಟ್ರೀಯ ಹಿತಾಸಕ್ತಿಗಳನ್ನು ಹೊಂದಿರಬಾರದು. ಈ ಆಂದೋಲನ ಮತ್ತು ನಾಯಕತ್ವವು ಅಮೆರಿಕ, ಬ್ರಿಟನ್, ಫ್ರಾನ್ಸ್‌ಗಳಂತಹ ಯಾವುದೇ ಬಾಹ್ಯ ಶಕ್ತಿಗಳನ್ನು ಆಧರಿಸಿರಬಾರದು. ಉದಾಹರಣೆಗೆ ಈಜಿಪ್ಟ್‌ನಲ್ಲಿ ಹೊಸ ಆಡಳಿತವು ಹಳೆಯ ನೀತಿಗಳನ್ನೇ ಅನುಸರಿಸುತ್ತಿದೆ ಮತ್ತು ಮುಬಾರಕ್‌ನನ್ನು ಉಚ್ಚಾಟಿಸಿದ ಆಂದೋಲನವು ತನ್ನ ಆಂತರಿಕ ವಿಷಯಗಳಲ್ಲೇ ಮುಳುಗಿದ್ದು, ಫೆಲೆಸ್ತೀನ್ ಸಮಸ್ಯೆಗಳಂತಹ ಹೊರ ಜಗತ್ತಿನ ವಿಷಯಗಳ ಬಗ್ಗೆ ಅವುಗಳಿಗೆ ಪರಿವೆಯೇ ಇಲ್ಲವಾಗಿದೆ. ಇದು ತುಂಬಾ ಕಳವಳಕಾರಿಯಾಗಿದೆ. ಅದೇ ರೀತಿ, ಲಿಬಿಯಾದಲ್ಲಿ ಗದ್ದಾಫಿ ಪಡೆಗಳ ವಿರುದ್ಧ ಹೋರಾಡಲು ಅಲ್ಲಿನ ಬಂಡುಗೋರರು ಪಾಶ್ಚಿಮಾತ್ಯರ ನೆರವನ್ನು ಬಯಸುತ್ತಿದ್ದಾರೆ. ಲಿಬಿಯಾದ ನಾಗರಿಕರನ್ನು ರಕ್ಷಿಸುವ ನೆಪದಲ್ಲಿ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ತೈಲ ಶ್ರೀಮಂತ ಲಿಬಿಯಾವನ್ನು ವಶಪಡಿಸಿಕೊಳ್ಳುವ ಮತ್ತು ನಿಯಂತ್ರಿಯಿಸುವ ಆ ಬಳಿಕ ನೈಜರ್, ಚಾಡ್ ಹಾಗೂ ಸುಡಾನ್‌ಗಳತ್ತ ಚಲಿಸುವ ತಮ್ಮ ಬಹುದಿನಗಳ ಕನಸನ್ನು ನೆರವೇರಿಸುತ್ತಿದೆ. ಜನರ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳ ಬಯಕೆಯನ್ನು ಪಾಶ್ಚಿಮಾತ್ಯ ರಾಷ್ಟ್ರಗಳು ಯಾವಾಗ ಬೆಂಬಲಿಸಿವೆ? ಗದ್ದಾಫಿ ಆಡಳಿತವು ಕೊನೆಗೊಂಡರೆ, ಲಿಬಿಯಾ ಜನತೆ ನೇರ ವಸಾಹತುಶಾಹಿ ಆಡಳಿತಕ್ಕೆ ಮತ್ತೊಮ್ಮೆ ಕಾಲಿಡಬೇಕಾಗುತ್ತದೆ.




ನಿರಂಕುಶ ಪ್ರಭುಗಳ ವಿರುದ್ಧ ಯುವಕರು ಮತ್ತು ಸಮಾಜದ ಇತರ ವಿಭಾಗಗಳ ಸಾಹಸ ಹಾಗೂ ಅರ್ಪಣೆಯು ಶ್ಲಾಘನೀಯವಾದರೂ, ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಲು ಅವರು ಇನ್ನೂ ದೂರವನ್ನು ಕ್ರಮಿಸಬೇಕಾಗಿದೆ. ರಾಷ್ಟ್ರವಾದಿ ಘೋಷಣೆಗಳನ್ನು ಕೂಗುವುದರಿಂದ ಅಥವಾ ಪಾಶ್ಚಿಮಾತ್ಯರ ಗುಲಾಮತನವನ್ನು ಒಪ್ಪಿಕೊಳ್ಳುವುದರಿಂದ ಇದು ಸಾಧ್ಯವಿಲ್ಲ. ಪಾಶ್ಚಿಮಾತ್ಯ ಆಡಳಿತಗಳು ಅವರ ಸ್ನೇಹಿತರಲ್ಲ. ಅವರು ಯಾರ ಸ್ನೇಹಿತರೂ ಅಲ್ಲ. ಅವರ ಜನತೆಯೂ ಅವರಿಗೆ ಸ್ನೇಹಿತರಲ್ಲ. ಅವರು ತಮ್ಮದೇ ಜನರನ್ನು ದಮನಿಸುತ್ತಾರೆ ಮತ್ತು ದೌರ್ಜನ್ಯಕ್ಕೊಳಪಡಿಸುತ್ತಾರೆ.

ಸ್ವಾಭಿಮಾನ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಮುಸ್ಲಿಮರು ತಮ್ಮ ಗುರಿಯನ್ನು ತಲುಪಬೇಕಾದರೆ ತಮ್ಮ ಸಮಾಜ ಹಾಗೂ ಜಾಗತಿಕ ಮಟ್ಟದಲ್ಲಿರುವ ವಾಸ್ತವಗಳನ್ನು ಅರಿತುಕೊಳ್ಳಬೇಕಾಗಿದೆ. ಇದ್ಯಾವುದೂ ಸುಲಭವಲ್ಲ. ಇದನ್ನು ನಾವು ಪ್ರವಾದಿ ಮುಹಮ್ಮದ್ (ಸ.ಅ)ರ ಸುನ್ನತ್ ಮತ್ತು ಹದೀಸ್‌ನಿಂದ ತಿಳಿದುಕೊಳ್ಳಬಹುದಾಗಿದೆ.

# ಮೋದಿಯ ಸುತ್ತ ಸತ್ಯದ ಹುತ್ತ

■ ಟಿ.ಅಹ್ಮದ್



2002ರಲ್ಲಿ ನಡೆದ ಗುಜರಾತ್ ಹತ್ಯಾಕಾಂಡದ ಸಂತ್ರಸ್ತರಿಗೆ ನ್ಯಾಯ ಸಿಗದೇ ಇರಬಹುದು. ಆದರೆ ಆ ಹತ್ಯಾಕಾಂಡಕ್ಕೆ ಉತ್ತೇಜನ ನೀಡಿದ್ದ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯ ಕೊರಳಿಗೆ ಆ ಹತ್ಯಾಕಾಂಡದ ಸರಪಳಿಯು ಬಿಗಿಯಾಗಿ ಸುತ್ತಿಕೊಳ್ಳುತ್ತಲೇ ಇದೆ.

''ಜನರಲ್ಲಿ ಭಾರೀ ಆಕ್ರೋಶವಿದೆ. ಹೀಗಿರುವಾಗ ಹಿಂದೂಗಳ ಮತ್ತು ಮುಸ್ಲಿಮರ ಬಗ್ಗೆ ಸಮಾನವಾಗಿ ನಡೆದುಕೊಂಡರೆ ಆಗುವುದಿಲ್ಲ. ಜನರಿಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ಅವಕಾಶ ನೀಡುವುದು ಈಗ ಅಗತ್ಯ'' ಎಂದು ಮುಖ್ಯಮಂತ್ರಿ ನರೇಂದ್ರ ಮೋದಿ ಗುಜರಾತ್‌ನ ಉನ್ನತ ಅಧಿಕಾರಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು ಎಂದು ರಾಜ್ಯದ ಬೇಹುಗಾರಿಕಾ ಇಲಾಖೆಯ ಆಂತರಿಕ ಭದ್ರತೆ ವಿಭಾಗದ ಡಿಸಿಪಿಯಾಗಿದ್ದ ಸಂಜೀವ ಭಟ್ ಎರಡು ತಿಂಗಳ ಹಿಂದೆಯೇ ಸಿಟ್ ಮುಂದೆ ಹೇಳಿಕೆ ನೀಡಿದ್ದರು. ಇದಕ್ಕೆ ಪೂರಕವಾಗಿ ನರೇಂದ್ರ ಮೋದಿ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅಫಿದಾವಿತ್ ದಾಖಲಾಗಿರುವುದು ಒಂದು ಉತ್ತಮ ಬೆಳವಣಿಗೆಯಾಗಿದೆ.

ಗುಜರಾತ್ ನರಮೇಧ ಸಾಕ್ಷ್ಯಗಳನ್ನು ನಾಶಪಡಿಸಲು ಮೋದಿ ಪ್ರಯತ್ನಿಸುತ್ತಲೇ ಇದ್ದಾರೆ. ಕಾನೂನಿನ ಸುಳಿಯಿಂದ ತಪ್ಪಿಸಿಕೊಳ್ಳಲು ಮೋದಿಗೆ ಇದು ಅನಿವಾರ್ಯವೂ ಹೌದು. ಈ ಹಿಂದೆ ಆಘಾತಕಾರಿ ಹೇಳಿಕೆ ನೀಡಿದ್ದರೆಂದು ಮೋದಿಯ ವಿರುದ್ಧ ಬಿಜೆಪಿ ನಾಯಕ ಹರೇನ್ ಪಾಂಡ್ಯ ಸ್ವತಂತ್ರ ತನಿಖಾ ಸಂಸ್ಥೆ ಮುಂದೆ ಸಾಕ್ಷ್ಯ ನೀಡಿದ್ದರು. ಇದಾದ ಬಳಿಕ ಹರೇನ್ ಪಾಂಡ್ಯ ನಿಗೂಢವಾಗಿ ಕೊಲೆಯಾಗಿದ್ದರು. ಈ ಕೊಲೆಯಲ್ಲಿಯೂ ನರೇಂದ್ರ ಮೋದಿಯ ಪಾತ್ರವಿದೆ ಎಂಬುದನ್ನು ಪಾಂಡ್ಯರ ತಂದೆ ಆರೋಪಿಸಿದ್ದರು.

ತೆಹಲ್ಕಾ ನಡೆಸಿದ ರಹಸ್ಯ ಕಾರ್ಯಾಚರಣೆಯೊಂದರಲ್ಲಿ ಗೋಧ್ರಾ ಶಾಸಕ ಹಾಗೂ ಬಜರಂಗ ದಳ ನಾಯಕ ಹರೇಶ್ ಭಟ್ ಮತ್ತು ರಾಜ್ಯ ಸರಕಾರದ ಪರ ವಕೀಲ ಅರವಿಂದ ಪಾಂಡ್ಯ, ಗೋಧ್ರಾ ದುರಂತದ ಬಳಿಕ ಮೋದಿ ಗಲಭೆಕೋರರರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು ಮತ್ತು ಅವರ ನಾಯಕತ್ವದಿಂದಲೇ ನರಮೇಧ ನಡೆಸಲು ಸಾಧ್ಯವಾಯಿತು ಎಂದು ಹೇಳಿಕೊಂಡಿದ್ದರು. ಮೋದಿಯು ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಮಾಯಕ ಜೀವಗಳನ್ನು ಬಲಿ ಪಡೆಕೊಳ್ಳುತ್ತಲೇ ಇದ್ದಾರೆ.

ಸಂಜೀವ ಭಟ್‌ನಂತೆಯೇ ಇನ್ನೊರ್ವ ಹಿರಿಯ ಪೊಲೀಸ್ ಅಧಿಕಾರಿಯಾಗಿದ್ದ ಆರ್.ಬಿ.ಶ್ರೀಕುಮಾರ್ ಕೂಡ


ಸಂಜೀವ ಭಟ್

ಮೋದಿಯಿಂದ ದೌರ್ಜನ್ಯಕ್ಕೊಳಗಾಗಿದ್ದಾರೆ. ಮೋದಿ ಸರಕಾರದ ವಿರುದ್ಧ ಹೋರಾಟ ನಡೆಸಿದ ಪರಿಣಾಮವಾಗಿ ಅವರು ಭಡ್ತಿ ಅವಕಾಶವನ್ನು ಕಳೆದುಕೊಳ್ಳಬೇಕಾಯಿತು. ಜೊತೆಗೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ದೋಷಾರೋಪಣೆ ಪಟ್ಟಿಯಲ್ಲೂ ಕೂಡ ಅವರ ಹೆಸರನ್ನು ಸೇರ್ಪಡೆಗೊಳಿಸಲಾಗಿತ್ತು. ಕಾನೂನು ಹೋರಾಟದ ಬಳಿಕ ಅವರು ಭಡ್ತಿಯನ್ನು ಪಡೆದುಕೊಂಡರೂ ಅದಾಗಲೇ ಅವರಿಗೆ ನಿವೃತ್ತಿಯ ವಯಸ್ಸಾಗಿತ್ತು.

ಸತ್ಯ ಎಂದಾದರೂ ಹೊರ ಬಂದೇ ಬರುತ್ತದೆ ಎಂಬ ವಾಸ್ತವವನ್ನು ಅರಿಯಲು ಬಹುಶಃ ಮೋದಿಗೆ ತುಂಬಾ ಸಮಯ ಹಿಡಿಯಿತು ಎನ್ನಬಹುದು. ಸತ್ಯ ಸಮಾಧಿಯಲ್ಲಿದ್ದರೂ ಸರಿ. ಅದು ಒಂದಲ್ಲ ಒಂದು ದಿನ ಹೊರ ಬರಲೇಬೇಕು. ಮೋದಿ ನೇತೃತ್ವದಲ್ಲಿ ಗಲಭೆ ನಡೆದು 9 ವರ್ಷಗಳು ಸಂದಿರಬಹುದು. ಮೃತದೇಹಗಳ ಗುರುತು ಸಿಗದಿರಲೆಂದು ಅದನ್ನು ಹೂತಿಟ್ಟಿರಬಹುದು. ಆದರೆ ಅದೇ ಮೃತದೇಹಗಳ ಮೂಳೆಗಳು ಇಂದು ಮೋದಿ ವಿರುದ್ಧ ಸಾಕ್ಷ್ಯ ಹೇಳುತ್ತಿವೆ.

ಗುಜರಾತ್ ಹತ್ಯಾಕಾಂಡದಲ್ಲಿ ಮೋದಿಯ ಪಾತ್ರವಿರುವ ಬಗ್ಗೆ ಸಿಟ್ ಮುಂದೆ ಹಲವು ಪ್ರಮುಖ ಸಾಕ್ಷ್ಯಾಧಾರಗಳಿವೆ. ಆದರೆ ಸಿಟ್ ಒಂದು ಮಾತನ್ನು ಅರ್ಥ ಮಾಡಿಕೊಳ್ಳಬೇಕು. ತನಿಖೆ ವಿಳಂಬ ವಾದಷ್ಟು ಸಾಕ್ಷ್ಯಗಳು ದುರ್ಬಲವಾಗುತ್ತವೆ. ಈ ನಿಟ್ಟಿನಲ್ಲಿ 9 ವರ್ಷಗಳಿಂದ ಆಮೆ ಗತಿಯಲ್ಲಿ ಸಾಗುತ್ತಿರುವ ಈ ಪ್ರಕರಣದ ತನಿಖೆಯನ್ನು ಇನ್ನಷ್ಟು ಚುರುಕುಗೊಳಿಸಬೇಕು. ಒಂದು ವೇಳೆ ಇದು ಅಸಾಧ್ಯವೆಂದಾದಲ್ಲಿ ನರೇಂದ್ರ ಮೋದಿಯ ವಿರುದ್ಧ ಸಾಕ್ಷ್ಯ ನಾಶಪಡಿಸಿದ ಹಲವು ಆರೋಪಗಳಿವೆ. ಇವುಗಳನ್ನು ಗಂಭೀರವಾಗಿ ಪರಿಗಣಿಸಿಕೊಂಡು ಮೋದಿಯನ್ನು ಬಂಧಿಸಿ ಜೈಲಿನಲ್ಲಿಡಬೇಕು. ಈ ಮೂಲಕ ಇನ್ನಷ್ಟು ಸಾಕ್ಷ್ಯಗಳು ನಾಶವಾಗದಂತೆ ತಡೆಯಬಹುದು.

ಸಾವಿರಕ್ಕೂ ಅಧಿಕ ಮಂದಿ ಹತ್ಯೆಗಯ್ಯಲ್ಪಟ್ಟ ಕ್ರೂರ ಹತ್ಯಾಕಾಂಡದಲ್ಲಿ ಮೋದಿಯ ಪಾತ್ರವಿದೆ ಎಂಬುದನ್ನು ಈ ಹಿಂದೆಯೇ ತೆಹಲ್ಕಾ ನಡೆಸಿದ್ದ ಗುಪ್ತಕಾರ್ಯಾಚರಣೆಯಲ್ಲಿ ಬಹಿರಂಗವಾಗಿತ್ತು. ಆದರೆ ಮೋದಿಯನ್ನು ನ್ಯಾಯಾಂಗದ ಕಟಕಟೆಗೆ ಎಳೆದು ತರಲು ಇಲ್ಲಿನ ನ್ಯಾಯಾಂಗ ವ್ಯವಸ್ಥೆಯು ಸಂಪೂರ್ಣ ವಿಫಲವಾಗಿದೆ.

ಗುಜರಾತ್‌ನಲ್ಲಿ ಬಿಜೆಪಿ ಹಾಗೂ ಆರೆಸ್ಸೆಸ್ ಇತಿಹಾಸವನ್ನು ಬಲ್ಲವರು ಈ ಹತ್ಯಾಕಾಂಡದಲ್ಲಿ ಮೋದಿ ಭಾಗಿಯಾಗಿರುವುದನ್ನು ಆಶ್ಚರ್ಯಪಡಲಾರರು. ಆರೆಸ್ಸೆಸ್ ಗುಜರಾತ್‌ನಲ್ಲಿ ಮುಸ್ಲಿಮರನ್ನು ನಿರ್ನಾಮಗೊಳಿಸುವ ಪ್ರಯತ್ನದಲ್ಲಿ ತೊಡಗಿದೆ. ಗುಜರಾತ್‌ನ ಇತಿಹಾಸವನ್ನು ಗಮನಿಸಿದರೆ ಅದನ್ನು ಅರಿಯಬಹುದು.

ಗುಜರಾತ್‌ನಲ್ಲಿ ಮುಸ್ಲಿಮರ ಇತಿಹಾಸವು ಗುಜರಾತ್ ಎಂಬ ಯೋಚನೆಗಿಂತಲೂ ಹಳೆಯದ್ದಾಗಿದೆ. ಆದರೆ ಈಗ ಗುಜರಾತಿನಲ್ಲಿ ಮುಸ್ಲಿಮರು ನೆಲೆ (ಸಂಖ್ಯೆಯಲ್ಲಿ ಮತ್ತು ಶಿಕ್ಷಣದಲ್ಲಿ) ಕಳೆದುಕೊಳ್ಳುತ್ತಿದ್ದಾರೆ.

ದೇಶ ವಿಭಜನೆಯ ಬಳಿಕ ಉತ್ತರ ಭಾರತದ ಅರ್ಧದಷ್ಟು ಭಾಗ ಉರಿಯುತ್ತಿತ್ತು. ಆದರೆ ಗುಜರಾತ್ ಶಾಂತಿಯುತವಾಗಿತ್ತು. ಸ್ವಾತಂತ್ರ್ಯಾ ನಂತರ ಮೊದಲ ಹಿಂದೂ-ಮುಸ್ಲಿಮ್ ಗಲಭೆ ನಡೆದಿರುವುದು 1969ರಲ್ಲಿ ಅಹ್ಮದಾಬಾದ್‌ನಲ್ಲಿ. ಇತಿಹಾಸದ ಪುಟಗಳನ್ನು ತಿರುವಿದಾಗ 1714ರಿಂದ 1969ರ ತನಕ ಗುಜರಾತ್‌ನಲ್ಲಿ ಗಲಭೆಗಳು ನಡೆದಿರುವುದು ಎರಡು ಬಾರಿ ಮಾತ್ರವಾಗಿದೆ. ಅದು 1941 ಮತ್ತು 1946ರಲ್ಲಿ. 1969ರಲ್ಲಿ ನಡೆದ ಗಲಭೆಯಲ್ಲಿ 1100ಕ್ಕೂ ಅಧಿಕ ಮಂದಿ ಕೊಲ್ಲಲ್ಪಟ್ಟಿದ್ದರು. ಇಲ್ಲಿಂದ ಹಿಂದೂ-ಮುಸ್ಲಿಮ್ ಎಂಬ ಪ್ರತ್ಯೇಕತೆಯು ಆರಂಭವಾಗಿತ್ತು.

1985ರಲ್ಲಿ ನಡೆದ ಗಲಭೆಯ ನಂತರ ಮುಸ್ಲಿಮರು ಸಂಪೂರ್ಣವಾಗಿ ಪ್ರತ್ಯೇಕಿಸಲ್ಪಟ್ಟರು. 1960ರಲ್ಲಿ ರಾಜ್ಯವು ಸ್ಥಾಪಿಸಲ್ಪಟ್ಟ ನಂತರ 1960ರಿಂದ 1990ರ ತನಕ ಗುಜರಾತ್

24ನೇ ಪುಟಕ್ಕೆ

ಆಯಿಶಾ

# ಯಶಸ್ಸಿನ ಗುಟ್ಟು

ಶ್ರೀಮಂತ ವ್ಯಾಪಾರಿಯೊಬ್ಬ ತನ್ನೆಲ್ಲಾ ವ್ಯಾಪಾರವನ್ನು ಕಳೆದುಕೊಂಡು ಚಿಂತಾಕ್ರಾಂತನಾಗಿ ಪಾರ್ಕ್‌ವೊಂದರಲ್ಲಿ ಕುಳಿತಿದ್ದ. ಸಾಲಗಾರರು ಆತನಿಗೆ ಕಿರುಕುಳ ನೀಡಲಾರಂಭಿಸಿದರು. ಸಮಸ್ಯೆಯನ್ನು ಹೇಗೆ ಬಗೆಹರಿಸಲಿ ಎಂದು ಆತ ಚಿಂತಿಸುತ್ತಲೇ ಇದ್ದ. ಇದೇ ಸಂದರ್ಭದಲ್ಲಿ ಮುದುಕನೊಬ್ಬ ಆತನ ಸಮೀಪಕ್ಕೆ ಬಂದ. ''ಯಾಕೆ, ಏನಾಯಿತು, ಯಾಕೆ ಹೀಗೆ ಚಿಂತಿಸುತ್ತಾ ಕುಳಿತಿದ್ದೀಯಾ?'' ಎಂದು ಪ್ರಶ್ನಿಸಿದ. ಅದಕ್ಕೆ ಆ ವ್ಯಾಪಾರಿ ''ತಾನು ಬಹುದೊಡ್ಡ ವ್ಯಾಪಾರಿಯಾಗಿದ್ದೆ. ವ್ಯಾಪಾರದಲ್ಲಿ ನಷ್ಟ ಸಂಭವಿಸಿ ತಾನು ಈಗ ಸಾಲಗಾರರಿಂದ ಕಿರುಕುಳ ಅನುಭವಿಸುತ್ತಿದ್ದೇನೆ'' ಎಂದು ತಿಳಿಸಿದ.



ಅದಕ್ಕೆ ಆ ಮುದುಕ, ತಾನು ನಿನಗೆ ಸಹಾಯ ಮಾಡಲು ಇಚ್ಛಿಸುತ್ತೇನೆ ಎಂದು ಹೇಳಿ ಆ ವ್ಯಾಪಾರಿಯ ಹೆಸರು ಕೇಳಿ ತನ್ನ ಬ್ಯಾಗಿನಿಂದ ಚೆಕ್‌ನ್ನು ತೆಗೆದುಕೊಂಡು ಸಹಿ ಮಾಡಿ ಆ ವ್ಯಾಪಾರಿಯ ಕೈಗಿಟ್ಟ. ಈ ಹಣವನ್ನು ತೆಗೆದುಕೋ. ತನಗೆ ನೀನು ಇಂದಿನಿಂದ ಸರಿಯಾಗಿ ಒಂದು ವರ್ಷಕ್ಕೆ ಇಲ್ಲಿಯೇ ಭೇಟಿಯಾಗಬೇಕು ಮತ್ತು ಈ ಹಣವನ್ನು ಹಿಂದಿರುಗಿಸಬೇಕು ಎಂದು ಮುದುಕ ಹೇಳಿದ. ಆ ಬಳಿಕ ಮುದುಕ ತಾನು ಬಂದ ವೇಗದಲ್ಲಿಯೇ ಹಿಂದಿರುಗಿ ಹೋದ.

ಆ ವ್ಯಾಪಾರಿ ಚೆಕ್‌ನ್ನು ಒಮ್ಮೆ ಸರಿಯಾಗಿ ಪರಿಶೀಲಿಸಿದ. ಆ ಚೆಕ್‌ನಲ್ಲಿ 5ಲಕ್ಷ ಡಾಲರ್ ನಮೂದಿಸಲಾಗಿತ್ತು. ಮಾತ್ರವಲ್ಲ ಜಗತ್ತಿನ ಶ್ರೀಮಂತನಲ್ಲೊಬ್ಬನಾದ ಜೋನ್ ಡಿ.ರಾಕ್‌ಫೆಲ್ಲರ್‌ನ ಸಹಿಯೂ ಇತ್ತು. ಇದರಿಂದ ಸಂತುಷ್ಟನಾದ ಆ ವ್ಯಾಪಾರಿ ತಾನು ತನ್ನ ವ್ಯಾಪಾರವನ್ನು ಕೆಲವೇ ಸಮಯದಲ್ಲಿ ಪುನಃ ತಹಬಂದಿಗೆ ತರಬಹುದು ಎಂದು ಯೋಚಿಸಿದ.

ಹೀಗೆ ಆತ ಮೊದಲು ಆ ಚೆಕ್‌ನ್ನು ಅಲಮಾರದಲ್ಲಿ ಭದ್ರವಾಗಿ ಇಟ್ಟ. ಬಳಿಕ ಕಠಿಣ ಪರಿಶ್ರಮ ಪಟ್ಟು ತನ್ನ ವ್ಯಾಪಾರವನ್ನು ತಹಬಂದಿಗೆ ತರಲು ಪ್ರಯತ್ನಿಸಿದ. ತನ್ನ ಎಲ್ಲಾ ವ್ಯಾಪಾರವನ್ನು ಪುನಶ್ಚೇತನಗೊಳಿಸಿದ. ತನ್ನ ಕಷ್ಟ ಕಾಲದಲ್ಲಿ ಆ ಚೆಕ್‌ನಲ್ಲಿರುವ ಹಣವನ್ನು ತೆಗೆದರಾಯಿತು ಎಂದು ಆ ವ್ಯಾಪಾರಿಯು ಮನದಲ್ಲೇ ಅಂದುಕೊಂಡ. ಹೀಗೆ ಕಠಿಣ ಪರಿಶ್ರಮದ ಬಳಿಕ ಆ ವ್ಯಾಪಾರಿಯು ತನ್ನ ವ್ಯಾಪಾರ-ವಹಿವಾಟನ್ನು ಅಭಿವೃದ್ಧಿ ಪಡಿಸುತ್ತಾ ಸಾಗಿದ. ಸಾಲಗಾರರ ಹಣವನ್ನು ಕೂಡ ಮರಳಿಸಿದ. ದೊಡ್ಡ ದೊಡ್ಡ ವ್ಯಾಪಾರಿಗಳೊಂದಿಗೆ ತನ್ನ ವ್ಯಾಪಾರ ಸಂಬಂಧವನ್ನು ಪುನಃ ಬೆಳೆಸಿದ. ಹೀಗೆ ಆತ ಕೆಲವೇ ತಿಂಗಳುಗಳಲ್ಲಿ ತನ್ನ ನಷ್ಟವನ್ನು ಸರಿದೂಗಿಸಿಕೊಂಡು ಅಪಾರ ಪ್ರಮಾಣದ ಲಾಭವನ್ನೂ ಗಳಿಸಿದ. ಹೀಗೆ ಆ ವ್ಯಾಪಾರಿ ತನ್ನ ಗತವೈಭವವನ್ನು ಮರಳಿ ಪಡೆದ.

ಸರಿಯಾಗಿ ಒಂದು ವರ್ಷದ ಬಳಿಕ ಆ ವ್ಯಾಪಾರಿ ನಗದೀಕರಿಸದ ಚೆಕ್‌ನೊಂದಿಗೆ ಪಾರ್ಕ್‌ಗೆ ಮರಳಿ ಬಂದ. ತುಂಬಾ ಹೊತ್ತು ಕಾದು ಕುಳಿತರೂ ಚೆಕ್ ನೀಡಿದ್ದ ಮುದುಕ ಪಾರ್ಕ್‌ಗೆ ಬರಲೇ ಇಲ್ಲ. ಸಂಯಮದಿಂದಲೇ ಇದ್ದ ಆ ವ್ಯಾಪಾರಿ ಆ ಮುದುಕನಿಗಾಗಿ ಇನ್ನಷ್ಟು ಹೊತ್ತು ಕಾಯೋಣ ಎಂದು ತೀರ್ಮಾನಿಸಿದ. ಬಹಳ ಹೊತ್ತಿನ ಬಳಿಕ ಆ ಮುದುಕ ಆ ಪಾರ್ಕ್‌ಗೆ ಧಾವಿಸಿದ. ಆದರೆ ಮುದುಕ ವ್ಯಾಪಾರಿಯನ್ನು ಗುರುತಿಸದ ಕಾರಣ ವ್ಯಾಪಾರಿಯೇ ಆ ಮುದುಕನನ್ನು ತಡೆದು

ನಿಲ್ಲಿಸಿ ಆತನಿಗೆ ವಂದಿಸುತ್ತಾ ಆತ ನೀಡಿದ್ದ ಚೆಕ್‌ನ್ನು ಆತನಿಗೇ ಹಿಂದಿರುಗಿಸಿದ. ಬಳಿಕ ತಾನು ವ್ಯಾಪಾರದಲ್ಲಿ ಪುನಃ ಯಶಸ್ಸನ್ನು ಸಾಧಿಸಿದ ಬಗೆಗಿನ ಕಥೆಯನ್ನು ಮುದುಕನಲ್ಲಿ ವಿವರಿಸಿದ.

ಅದೇ ಸಂದರ್ಭದಲ್ಲಿ ಮುದುಕನ ಬೆನ್ನ ಹಿಂದೆಯೇ ಓಡಿ ಬಂದ ನರ್ಸ್ ಮುದುಕನನ್ನು ಹಿಡಿದು ಗದರಿಸಿದಳು. ಈ ವೇಳೆ ವ್ಯಾಪಾರಿಯೊಂದಿಗೆ, ''ಈತನಿಂದ ತಮಗೇನು ತೊಂದರೆಯಾಗಲಿಲ್ಲ ಎಂದು ತಾನು ಭಾವಿಸುತ್ತೇನೆ ಎಂದು ಆಕೆ ಹೇಳಿದಳು. ಈ ಮುದುಕ ಬುದ್ಧಿಮಾಂದ್ಯ. ಈತ ಯಾವಾಗಲೂ ಕೋಣೆಯಿಂದ ತಪ್ಪಿಸಿಕೊಂಡು ಈ ಪಾರ್ಕ್‌ಗೆ ಬಂದು ಇಲ್ಲಿರುವವರಲ್ಲಿ ತಾನು ಜೋನ್ ಡಿ.ರಾಕ್‌ಫೆಲ್ಲರ್ ಎಂದು ಪರಿಚಯಿಸುತ್ತಾನೆ ಎಂದು ಹೇಳುತ್ತಾ ಆತನನ್ನು ಕೈಯಲ್ಲಿ ಹಿಡಿದುಕೊಂಡು ಆಶ್ರಮಕ್ಕೆ ಕೊಂಡೊಯ್ದಳು.

ಆ ವ್ಯಾಪಾರಿ ಒಮ್ಮೆಲೆ ಆಶ್ಚರ್ಯಚಕಿತನಾಗಿ ನೆಲದ ಮೇಲೆ ಕುಳಿತುಕೊಂಡ. ತಾನು ಒಂದು ವರ್ಷದಿಂದ ಈತ ನೀಡಿದ ಚೆಕ್‌ನ್ನು ನಂಬಿಕೊಂಡೇ ವ್ಯಾಪಾರ ನಡೆಸಿದ್ದೆ. ಪ್ರತಿಯೊಂದು ವ್ಯಾವಹಾರವನ್ನು, ಕೊಡು-ಕೊಳ್ಳುವಿಕೆಯನ್ನು ಹಾಗೂ ಪ್ರತಿ ಬಾರಿಯೂ ತಾನು ವ್ಯವಹಾರ ನಡೆಸುವಾಗ ಆ ಚೆಕ್‌ನ್ನು ನಂಬಿಯೇ ಇತರರಿಗೆ ಆಶ್ವಾಸನೆ ನೀಡುತ್ತಿದ್ದೆ. ಇದರಿಂದಾಗಿಯೇ ತಾನು ಬಿಲಿಯನ್‌ಗಟ್ಟಲೆಯ ವ್ಯಾಪಾರ-ವಹಿವಾಟು ನಡೆಸುತ್ತಿದ್ದೆ ಎಂಬುದನ್ನು ಆಲೋಚಿಸುತ್ತಾ ದಿಗ್ಭ್ರಾಂತನಾದ.

ತನ್ನ ಜೀವನಮಟ್ಟವನ್ನು ಸುಧಾರಿಸಿದ್ದು ಹಣವಲ್ಲ. ಬದಲಾಗಿ ತನ್ನಲ್ಲಿದ್ದ ಆತ್ಮವಿಶ್ವಾಸ ಎಂಬ ಸತ್ಯವನ್ನು ಆತ ಕಂಡುಕೊಂಡ. ಆತ್ಮವಿಶ್ವಾಸ ಎಂಬುದೊಂದು ಇದ್ದರೆ ಎಂಥಹ ಸಂದರ್ಭದಲ್ಲಿಯೂ ಯಶಸ್ಸನ್ನು ಸಾಧಿಸಬಹುದು. ಪ್ರತಿಯೊಂದು ವಿಷಯಗಳನ್ನು ಸಕಾರಾತ್ಮಕವಾಗಿ ಚಿಂತಿಸಿದಾಗ ಮಾತ್ರವೇ ಆ ಆತ್ಮವಿಶ್ವಾಸದ ಸದುಪಯೋಗವಾಗುವುದು. ಆತ್ಮವಿಶ್ವಾಸ ಎಂಬುದು ಅದು ಸ್ವತಃ ಒಬ್ಬ ವ್ಯಕ್ತಿಯ ಬದ್ಧತೆ, ತನ್ನನ್ನು ತಾನು ಮುಡಿಪಾಗಿಡುವ ಮೂಲಕ ಮತ್ತು ಅಂತರಾಳದಿಂದ ಬರಬೇಕು. ಆಗ ಮಾತ್ರ ಆತ್ಮವಿಶ್ವಾಸದ ಮಹತ್ವವನ್ನು ಅರಿಯಲು ಸಾಧ್ಯವಾಗುವುದು.


ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್ | ಶಿಹಾಬ್ ಇಂಗ್ಲೀಷ್ ಮೀಡಿಯಂ ಸ್ಕೂಲ್

ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲೆಯ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ವಿದ್ಯಾ ಕೇಂದ್ರ



ಪ್ರತೀ ವರ್ಷದಂತೆ ಈ ವರ್ಷವೂ S.S.L.C ಪಬ್ಲಿಕ್ ಪರೀಕ್ಷೆಯಲ್ಲಿ ಶೇ. 100% ಫಲಿತಾಂಶ ಬಂದಿರುತ್ತದೆ.

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.

- ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
- ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸದ ಜೊತೆಗೆ ಕಂಪ್ಯೂಟರ್ ತರಬೇತಿ.
- ಅರ್ಹತೆಗನುಸಾರ ವಿದ್ಯಾರ್ಥಿವೇತನ.
- ಮಂಗಳೂರಿನಿಂದ 32ಕಿ.ಮೀ. ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದ ಪ್ರಶಾಂತ ವಾತಾವರಣ.

ದಾಖಲಾತಿಗಾಗಿ ಸಂಪರ್ಕಿಸಿರಿ

ಚೆಯರ್‌ಮೆನ್,
ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ.,
ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್,
ಮಂಗಳೂರು - 575003,
ಫೋನ್ : 0824-2440339(O), 2495121(R)
ಇಮೈಲ್ : sheikhabdullah@email.com
ಫ್ಯಾಕ್ಸ್ : 0824 : 4256762 ಮೊಬೈಲ್ : 98440 35786

ಪ್ರಾಂಶುಪಾಲರು,
ಶಿಹಾಬುಲ್ ಉಲೂಮ್ ರೆಸಿಡೆನ್ಸಿಯಲ್ ಸ್ಕೂಲ್,
ಅಡ್ಕಬಂದಿಯೋಡ್, ಮಂಗಲಪಾಡಿ - 671324
ಉಪ್ಪಳ, ಕಾಸರಗೋಡ್ ಜಿಲ್ಲೆ,
ಫೋನ್ : 04998 - 240222, 240333
ಫ್ಯಾಕ್ಸ್ : 04998-240333
ವೆಬ್‌ಸೈಟ್ : www.shihabfoundation.org

# ಇಲ್ಲಿ ಇನ್ನೋರ್ವ ಗಾಂಧಿ ಬೇಕಾಗಿರುವುದು ಯಾರಿಗೆ?

• ಪಿಎನ್‌ಬಿ



ಈ ದೇಶದಲ್ಲಿ ಇನ್ನೊಂದು ಗಾಂಧಿಯ ಅಗತ್ಯವಿದೆ. ಅದು ಸಂಘಪರಿವಾರಕ್ಕೆ. ಅಂತಹ ಗಾಂಧಿಯನ್ನು ಹುಟ್ಟುಹಾಕಿ ಅವರ ಮೂಲಕ ಸಂಘಪರಿವಾರವನ್ನು ದೇಶಪ್ರೇಮಿ, ದೇಶದ ಉದ್ಧಾರಕ, ದೇಶದ ಬಗ್ಗೆ ಕಾಳಜಿಯುಳ್ಳ ಏಕೈಕ ಸಂಘಟನೆ ಎಂಬಿತ್ಯಾದಿ ಸರ್ಟಿಫಿಕೇಟ್ ಪಡೆದುಕೊಳ್ಳಲು ಭಾರೀ ಷಡ್ಯಂತ್ರ ನಡೆಯುತ್ತಿದೆ.

ಪ್ರಗತಿಪರ ಸಂಘಟನೆಗಳಿಗೆ ಬೇಕಾಗಿರುವುದು ಇನ್ನೋರ್ವ ಗಾಂಧಿಯಲ್ಲ. ಅವರಿಗೆ ಬೇಕಾಗಿರುವುದು ಗಾಂಧಿ ಸಿದ್ಧಾಂತದ ಪುನರ್‌ಪ್ರತಿಷ್ಠಾಪನೆ.

ಈ ಎರಡೂ ಮನೋಸ್ಥಿತಿಯ ನಡುವೆ ಸಂಘರ್ಷ ಉಂಟಾದಾಗ ದೇಶದಲ್ಲಿ ಏನು ಸಂಭವಿಸಬಹುದು? ಇಂಥದ್ದೊಂದು ಕುತೂಹಲಕಾರಿ ಪ್ರಶ್ನೆಗೆ ಈಗಾಗಲೇ ಉತ್ತರ ಸಿಗತೊಡಗಿದೆ. ಈ ಉತ್ತರದ ಅರ್ಥ ವ್ಯಾಪ್ತಿಯು ದಿನಕಳೆದಂತೆ ವಿಸ್ತಾರಗೊಳ್ಳುತ್ತಲೇ ಹೋಗಬಹುದು.

ಈಗ ನೀವು ಅಣ್ಣಾ ಹಝಾರೆಯನ್ನು ನೆನಪಿಸಿಕೊಳ್ಳಿ. ಅವರು ಜನಾಂದೋಲನ ಆರಂಭಿಸಿದ್ದನ್ನು, ಅವರ ಬಳಿಗೆ ಮೀಡಿಯಾಗಳು ತಮ್ಮ ಕ್ಯಾಮರಾವನ್ನು ತಿರುಗಿಸಿದ್ದನ್ನು, ಮೀಡಿಯಾಗಳು ತಲುಪಿದ ನಂತರ ಹಜಾರೆಯನ್ನು ಸುತ್ತುವರಿದ ಶಂಕಿತ ಭ್ರಷ್ಟಾಚಾರಿಗಳನ್ನು, ಆಂದೋಲನಕ್ಕೆ ದೇಶಾದ್ಯಂತ ಬೆಂಬಲ ದೊರೆತು ಅಣ್ಣಾ ಹಝಾರೆ ಇನ್ನೇನು ದೇಶದ ನವಗಾಂಧಿಯಾಗಿ ರೂಪುಗೊಳ್ಳುತ್ತಿದ್ದುದನ್ನು, ಆ ಸಂದರ್ಭದಲ್ಲೇ ಅವರ ಬಾಯಿಯ ಮೂಲಕ ಸಂಘಪರಿವಾರ ಮಾತನಾಡಿದ್ದನ್ನು.... ಹೀಗೆ ಪ್ರತಿಯೊಂದು ಕ್ಷಣವನ್ನು ಒಮ್ಮೆ ಮೆಲುಕು ಹಾಕಿ. ಇಡೀ ಜನಾಂದೋಲನದಲ್ಲಿ ಎರಡು ಮನೋಸ್ಥಿತಿಗಳ ಸಂಘರ್ಷ ನಡೆದಿರುವುದನ್ನು ಗಮನಿಸಬಹುದು.

**ಸಂಘಪರಿವಾರವು ತನ್ನ ಕೋಮುವಾದಿ ಇಮೇಜನ್ನು ತೊಡೆದುಹಾಕಲು ಯತ್ನಿಸುತ್ತಿರುವುದನ್ನೂ ಸೂಕ್ಷ್ಮವಾಗಿ ಗಮನಿಸಬಹುದು. ದೇಶದ ಆಡಳಿತವನ್ನು ತನ್ನ ಕೈವಶಪಡಿಸಿಕೊಳ್ಳುವುದೇ ಸಂಘಪರಿವಾರದ ಏಕೈಕ ಉದ್ದೇಶ. ಕಳೆದೆರಡು ಚುನಾವಣೆಗಳಲ್ಲಿ ಜನರಿಂದ ತಿರಸ್ಕೃತಗೊಂಡು ಅಧಿಕಾರದಿಂದ ದೂರ ಉಳಿದಿರುವ ಬಿಜೆಪಿ ಮತ್ತು ಪರಿವಾರಕ್ಕೆ ಈಗ ಬೇರೆಯೇ ರೀತಿಯ ಇಮೇಜು ಬೇಕಾಗಿದೆ. ಅದು ದೇಶದಲ್ಲಿ ಇನ್ನೋರ್ವ ಗಾಂಧಿಯನ್ನು ಸೃಷ್ಟಿಸುವುದು. ಆ ಗಾಂಧಿಯು ಸಂಘಪರಿವಾರದ ಸಕ್ರಿಯ ಕಾರ್ಯಕರ್ತನಾಗಿರಬೇಕೆಂದಿಲ್ಲ. ಸಂಘಪರಿವಾರದ ಸಿದ್ಧಾಂತವನ್ನು ತಿಳಿದಿರಬೇಕೆಂದಿಲ್ಲ. ಗಾಂಧಿವಾದಿಯಾಗಿದ್ದರೂ ಸರಿಯೇ, ಮೊದಲು ನವಗಾಂಧಿ ಸೃಷ್ಟಿಯಾಗಬೇಕು. ಹಾಗೊಮ್ಮೆ ಗಾಂಧಿ ಸೃಷ್ಟಿಯಾದ ಕೂಡಲೇ ಆ ಗಾಂಧಿಯ ಮೂಲಕ ನಾವು ಮಾತನಾಡಬೇಕು ಎಂಬುದೇ ಸಂಘಪರಿವಾರದ ಲೆಕ್ಕಾಚಾರ.**

ಜಾಗತಿಕ ಮಟ್ಟದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿರುವ ಹೊತ್ತಿನಲ್ಲೇ ಭಾರತದಲ್ಲೂ ಅಂಥದ್ದೊಂದು ಬದಲಾವಣೆಯ ಗಾಳಿ ಬೀಸುವ ಸೂಚನೆಗಳು ಕಾಣಿಸಿಕೊಂಡವು. ಅರಬ್ ರಾಷ್ಟ್ರಗಳಾದ ಈಜಿಪ್ಟ್, ಒಮನ್, ಬಹ್ರೈನ್, ಜೋರ್ಡಾನ್, ಲಿಬಿಯ ಮುಂತಾದ ದೇಶಗಳಲ್ಲಿ ಬದಲಾವಣೆಯ ಅಲೆ ಬೀಸಲಾರಂಭಿಸಿ ಅದು ಜಗತ್ತಿನಾದ್ಯಂತ ಭಾರೀ ಸುದ್ದಿಗೆ ಗ್ರಾಸವಾದದ್ದನ್ನು ನಾವೆಲ್ಲ ಗಮನಿಸಿದ್ದೇವೆ. ಅಂಥದ್ದೇ ಬದಲಾವಣೆಯ ಗಾಳಿಯು ನಮ್ಮ ನೆಲದಲ್ಲೂ ಬೀಸತೊಡಗಿದ್ದಕ್ಕೆ ನಾವೆಲ್ಲ ಆನಂದ ಪಟ್ಟೆವು. ಜನಾಂದೋಲನದಲ್ಲಿ ಸೇರಿಕೊಂಡೆವು. 97 ಗಂಟೆಗಳ ಕಾಲ ಟಿವಿ ಚಾನೆಲ್‌ಗಳು ಜಂತರ್‌ಮಂತರ್‌ನಲ್ಲಿ ದಿಗ್ಬಂಧನಕ್ಕೊಳಗಾಗಿದ್ದಂತೆ ಭಾಸವಾಗತೊಡಗಿತು.

ಒಂದು ವಿಚಾರವಂತೂ ಸ್ಪಷ್ಟವಾಗಿದೆ. ರಾಷ್ಟ್ರಪಿತ ಗಾಂಧೀಜಿಯನ್ನು ಹತ್ಯೆಗೈದ ಕಳಂಕ ಹೊಂದಿರುವ ಸಂಘಪರಿವಾರಕ್ಕೆ ಆ ಕಳಂಕವು ಇಂದಿಗೂ ತೊಡಕಾಗಿದೆ. ಇತ್ತೀಚಿನ ದಿನಗಳಲ್ಲಿ ಕೇಸರಿ ಭಯೋತ್ಪಾದನೆಯು ಬೆಳಕಿಗೆ ಬರತೊಡಗಿದ ನಂತರ ಸಂಘಪರಿವಾರದ ಹೇಳಿಕೆಗಳಲ್ಲಿ ತುಸು ಮೃದುತ್ವವನ್ನು ಗಮನಿಸಬಹುದು. ಮಾತ್ರವಲ್ಲದೆ, ಸಂಘಪರಿವಾರವು ತನ್ನ ಕೋಮುವಾದಿ ಇಮೇಜನ್ನು ತೊಡೆದುಹಾಕಲು ಯತ್ನಿಸುತ್ತಿರುವುದನ್ನೂ ಸೂಕ್ಷ್ಮವಾಗಿ ಗಮನಿಸಬಹುದು. ದೇಶದ ಆಡಳಿತವನ್ನು ತನ್ನ ಕೈವಶಪಡಿಸಿಕೊಳ್ಳುವುದೇ ಸಂಘಪರಿವಾರದ ಏಕೈಕ ಉದ್ದೇಶ. ಕಳೆದೆರಡು ಚುನಾವಣೆಗಳಲ್ಲಿ ಜನರಿಂದ ತಿರಸ್ಕೃತಗೊಂಡು ಅಧಿಕಾರದಿಂದ ದೂರ ಉಳಿದಿರುವ ಬಿಜೆಪಿ ಮತ್ತು ಪರಿವಾರಕ್ಕೆ ಈಗ ಬೇರೆಯೇ ರೀತಿಯ ಇಮೇಜು ಬೇಕಾಗಿದೆ. ಅದು ದೇಶದಲ್ಲಿ ಇನ್ನೋರ್ವ ಗಾಂಧಿಯನ್ನು ಸೃಷ್ಟಿಸುವುದು. ಆ ಗಾಂಧಿಯು ಸಂಘಪರಿವಾರದ ಸಕ್ರಿಯ ಕಾರ್ಯಕರ್ತನಾಗಿರಬೇಕೆಂದಿಲ್ಲ. ಸಂಘಪರಿವಾರದ ಸಿದ್ಧಾಂತವನ್ನು ತಿಳಿದಿರಬೇಕೆಂದಿಲ್ಲ. ಗಾಂಧಿವಾದಿಯಾಗಿದ್ದರೂ ಸರಿಯೇ, ಮೊದಲು ನವಗಾಂಧಿ ಸೃಷ್ಟಿಯಾಗಬೇಕು. ಹಾಗೊಮ್ಮೆ ಗಾಂಧಿ ಸೃಷ್ಟಿಯಾದ ಕೂಡಲೇ ಆ ಗಾಂಧಿಯ ಮೂಲಕ ನಾವು ಮಾತನಾಡಬೇಕು ಎಂಬುದೇ ಸಂಘಪರಿವಾರದ ಲೆಕ್ಕಾಚಾರ.

ಅಣ್ಣಾ ಹಜಾರೆಯ ವಿಚಾರದಲ್ಲಿ ಹಾಗೆಯೇ ನಡೆಯಿತು. ಹಜಾರೆಯ ಮೂಲಕವೇ ಗೋಗ್ರಾಮವನ್ನು ಸ್ಥಾಪಿಸಿದರು. ಹಜಾರೆಯ ಮೂಲಕ ಮೋದಿಯ ಗುಣಗಾನ ಮಾಡಿಸಿದರು. (ಮೋದಿ ಬಿಜೆಪಿಯ ಭವಿಷ್ಯದ ಪ್ರಧಾನಿ ಅಭ್ಯರ್ಥಿಯೂ ಹೌದು) ಕಾಂಗ್ರೆಸ್‌ನೊಂದಿಗೆ ಜಗಳವಾಡುವಂತೆ ಮಾಡಿದರು. ಹಜಾರೆಯೊಂದಿಗೆ ಕುಳಿತುಕೊಂಡು ಮೀಡಿಯಾಗಳಿಗೆ ಪೋಸು ಕೊಟ್ಟರು. ಹಜಾರೆಯ ಆಂದೋಲನಕ್ಕೆ ಬೆಂಬಲ ಸೂಚಿಸಿ ಮೀಡಿಯಾಗಳಿಗೆ ಹೇಳಿಕೆಯನ್ನೂ ಕೊಟ್ಟರು. ಅಂತೂ ಬರೋಬ್ಬರಿ ಪ್ರಚಾರ ಗಿಟ್ಟಿಸಿಕೊಂಡ ಬಿಜೆಪಿ, ಮತ್ತೊಂದೆಡೆ ಯೋಗ ಗುರು ರಾಮ್‌ದೇವ್ ಮೂಲಕವೂ ಪ್ರಚಾರಾಂದೋಲನ ನಡೆಸಿದರು. ಹಜಾರೆಯ ಆಂದೋಲನದಲ್ಲಿ ರಾಮ್‌ದೇವ್‌ಗೆ ಏನು ಕೆಲಸವಿತ್ತು?

ರಾಮ್‌ದೇವ್ ದೇಶಾದ್ಯಂತ ಸಂಚರಿಸುವ ಯೋಜನೆ ಯಾವತ್ತೋ ನಿರ್ಧಾರವಾದದ್ದು. ಅದರ ಪ್ರಚಾರವನ್ನು ಹಜಾರೆಯ ಆಂದೋಲನದ ಮೂಲಕ ನಡೆಸಲಾಯಿತು. ಮೊನ್ನೆಯವರೆಗೆ ಆಸ್ಥಾ ಚಾನೆಲ್‌ನಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ರಾಮ್‌ದೇವ್, ಆಂದೋಲನ ಪ್ರಾರಂಭವಾದಂದಿನಿಂದ ಎಲ್ಲ ಚಾನೆಲ್‌ಗಳಲ್ಲೂ ಕಾಣಿಸತೊಡಗಿದರು. ರಾಮ್‌ದೇವ್ ಹಮ್ಮಿಕೊಂಡಿದ್ದ ದಕ್ಷಿಣ ಭಾರತ ಪ್ರವಾಸದ ವೇಳೆಗಾಗಲೇ ಎಲ್ಲರಿಗೂ ಪರಿಚಯವಾಗಿ ಇಮೇಜ್ ಸೃಷ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ರಾಮ್‌ದೇವ್ ಯೋಗ ಶಿಬಿರ ಮತ್ತು ಬಿಜೆಪಿಯ ಪ್ರಚಾರಾಂದೋಲನವೆಂದರೆ ಅದು ಬೇರೆ ಬೇರೆ ಅಲ್ಲ. ಹೀಗಾಗಿ ಹಜಾರೆಯ ಆಂದೋಲನದಲ್ಲಿ ರಾಮ್‌ದೇವ್ ಪ್ರವೇಶವಾಗುತ್ತಲೇ ಪ್ರಗತಿಪರರು ಅಲ್ಲಿಂದ ಜಾಗ ಖಾಲಿ ಮಾಡತೊಡಗಿದರು. ಅದರೊಂದಿಗೆ ಇಡೀ ಆಂದೋಲನವೇ ರಿಯಾಲಿಟಿ ಶೋನಂತಾಯಿತು.

ಯೋಗ, ಪವಾಡ, ಆಧ್ಯಾತ್ಮ, ಧರ್ಮವನ್ನು ತಮ್ಮ ಕಾರ್ಯಸಿದ್ಧಿಗೆ ಬಂಡವಾಳವಾಗಿಸಿರುವ ಈ ದೇಶದಲ್ಲಿ ಜನತೆಯ ಮನೋಸ್ಥಿತಿಯು ಸಂಪೂರ್ಣವಾಗಿ ದುರ್ಬಲವಾಗಿದೆ. ಈ ಕಾರಣಕ್ಕಾಗಿಯೇ ಬದಲಾವಣೆಯ ಉದ್ದೇಶದಿಂದ ಆರಂಭಗೊಳ್ಳುತ್ತಿರುವ ಕ್ರಾಂತಿ, ಸಂಗ್ರಾಮಗಳು ದುರ್ಬಲಗೊಂಡು ಮೂಲೆ ಸೇರುತ್ತಿರುವುದು.

19ನೇ ಪುಟದಿಂದ...

ರಾಜಕೀಯವಾಗಿ ಅಸ್ಥಿರವಾಗಿತ್ತು. ಈ ಅವಧಿಯ ನಡುವೆ ಗುಜರಾತ್ 8 ಅಸೆಂಬ್ಲಿಗಳನ್ನು, 9 ಮುಖ್ಯ ಮಂತ್ರಿಗಳನ್ನು ಮತ್ತು 20 ಸಚಿವಾಲಯಗಳನ್ನು ಕಂಡಿತ್ತು. ಮುಖ್ಯಮಂತ್ರಿಯಾಗಿ ಪೂರ್ಣಾವಧಿಯನ್ನು ಪೂರೈಸಲು ಯಶಸ್ವಿಯಾದವರು ಮಾಧವ್ ಸಿಂಹ ಸೋಲಂಕಿ ಮಾತ್ರ. ಅವರ ಕಾಲದಲ್ಲೂ ಹಲವು ರಾಜಕೀಯ ಗಲಭೆಗಳು ನಡೆದಿವೆ.

1950ರಲ್ಲಿ ಮಾಹ್ ಗುಜರಾತ್ ಚಳವಳಿಯು ಗುಜರಾತ್ ರಾಜ್ಯದ ಸ್ಥಾಪನೆಗೆ ನಾಂದಿಯಾಯಿತು. 1970 ದಶಕದಲ್ಲಿ ಸಮಾಜವಾದಿಗಳ ನೇತೃತ್ವದಲ್ಲಿ ಭ್ರಷ್ಟಾಚಾರದ ವಿರುದ್ಧ ನವ ನಿರ್ಮಾಣ ಚಳವಳಿ ಆರಂಭವಾಯಿತು ಮತ್ತು ನಂತರ ಸಂಘಪರಿವಾರ ಇದರಲ್ಲಿ ನುಸುಳಿಕೊಂಡಿತು. ಜನರನ್ನು ಸಂಘಟಿಸಲು ಚೆಡ್ಡಿ ಪರಿವಾರವು ಇದನ್ನೇ ಪಾಠವಾಗಿ ಸ್ವೀಕರಿಸಿಕೊಂಡಿತು. 1980ರ ಮೀಸಲಾತಿ ವಿರೋಧಿ ಚಳವಳಿಯ ವೇಳೆ ಇದು ಸಂಘಿಗಳಿಗೆ ನೆರವಾಯಿತು ಮತ್ತು ಈ ಚಳವಳಿಯನ್ನೂ ಅವರು ಹೈಜಾಕ್ ಮಾಡಿದರು. ಆ ಬಳಿಕ ಇದು ಮುಸ್ಲಿಮ್ ವಿರೋಧಿ ಗಲಭೆಯಾಗಿ ಪರಿವರ್ತನೆಯಾಯಿತು. 1990ರ ರಾಮ ಜನ್ಮಭೂಮಿ ಚಳವಳಿ ಮತ್ತು 2002ರ ಹತ್ಯಾಕಾಂಡಗಳು ಕೋಮು ವಿಷಜ್ವಾಲೆಯನ್ನು ಹರಡಿದ ಸಂಘಪರಿವಾರಕ್ಕೆ ಪ್ರತಿಫಲಗಳಾಗಿದ್ದವು.

ಹೈಫಾ ಯುನಿವರ್ಸಿಟಿಯ ಒರ್ನಿಟ್ ಶಾನಿ 1985ರ ಕೋಮುಗಲಭೆಯ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿದವರಾಗಿದ್ದಾರೆ. ಗುಜರಾತ್‌ನಲ್ಲಿ ಮುಸ್ಲಿಮರನ್ನು ಪ್ರತ್ಯೇಕಿಸುವುದಕ್ಕೆ 1985ರ ಗಲಭೆ ಪ್ರಮುಖ ಕಾರಣವಾಗಿದೆ ಎಂಬುದು ಅವರ ಅಭಿಪ್ರಾಯವಾಗಿದೆ.

'ಕೋಮುವಾದ, ಜಾತಿ ಹಾಗೂ ಹಿಂದೂ ರಾಷ್ಟ್ರೀಯತೆ' ಎಂಬ ಪುಸ್ತಕದಲ್ಲಿ ಆಕೆ ಬರೆದಂತೆ 'ಹಿಂದೂಗಳಲ್ಲಿರುವ ಹಿಂದುಳಿದ ಜಾತಿಗಳಿಗೆ ಸರಕಾರಿ ಸಂಸ್ಥೆ ಮತ್ತು ವಿದ್ಯಾ ಸಂಸ್ಥೆಗಳಲ್ಲಿ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ ನಡೆದ ಚಳವಳಿಯು 1985ರಲ್ಲಿ ಕೋಮುಗಲಭೆಯಾಗಿ ಪರಿವರ್ತನೆಗೊಂಡಿತು. ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಈ ಹಿಂದೆ ಯಾವುದೇ ಧಾರ್ಮಿಕ ವೈಷಮ್ಯಗಳು ಇಲ್ಲದಿದ್ದರೂ, ಮೇಲ್ಜಾತಿ ಹಾಗೂ ಕೆಳ ಜಾತಿ ಹಿಂದೂಗಳ ನಡುವಿನ ಮೀಸಲಾತಿ ವಿವಾದವು ಹಿಂದೂ-ಮುಸ್ಲಿಮ್ ಗಲಭೆಯಾಗಿ ಪರಿವರ್ತನೆಯಾಯಿತು. ಇದು ರಾಜ್ಯದಲ್ಲಿ ದಶಕಗಳ ಕಾಲದ ಕಾಂಗ್ರೆಸ್ ಬಲವನ್ನು ಕುಂದಿಸಿತು ಮತ್ತು ಹಿಂದೂ ರಾಷ್ಟ್ರೀಯವಾದಿ ಬಿಜೆಪಿಯು ಗುಜರಾತ್‌ನಲ್ಲಿ ಆಡಳಿತಕ್ಕೆ ಬರಲು ಸಾಧ್ಯವಾಯಿತು''.

ಮಾರ್ಚ್ 18ರ ರಾತ್ರಿ ಸವರ್ಣೀಯ ಹಿಂದೂಗಳು ಅಹ್ಮದಾಬಾದ್‌ನ ನಗಿನಾಪೋಲ್ ಪ್ರದೇಶದಲ್ಲಿ ಮೀಸಲಾತಿಯ ವಿರುದ್ಧ ಗಲಭೆ ಎಬ್ಬಿಸುತ್ತಿದ್ದರು. ಈ ವೇಳೆ ಮುಸ್ಲಿಮ್ ಬಾಲಕನೊಬ್ಬನ ತಲೆಗೆ ಕಲ್ಲನ್ನು ಎಸೆಯಲಾಯಿತು. ಈ ಘಟನೆಯು ಹಿಂದೂ ಮತ್ತು ಮುಸ್ಲಿಮರಲ್ಲಿ ಗಲಭೆಗೆ ನಾಂದಿ ಹಾಡಿತು. ಮರುದಿನವೇ ಘಟನಾ ಸ್ಥಳಕ್ಕೆ ಸೇನೆಯನ್ನು ಕರೆಸಲಾಯಿತು. ಮಾರ್ಚ್ 23ರಂದು ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಸ್ಥಳಕ್ಕೆ ಭೇಟಿ ನೀಡಿದರು. ಆದರೆ ಗಲಭೆ ಮಾತ್ರ ಮುಂದಿನ ನಾಲ್ಕು ತಿಂಗಳುಗಳ ಕಾಲ ಮುಂದುವರಿಯಿತು.

ಜುಲೈ 6ರಂದು ಸೋಲಾಂಕಿಯ ಸ್ಥಾನದಲ್ಲಿ ಅಮರ್‌ಸಿಶ್ ಚೌಧರಿ ಮುಖ್ಯ ಮಂತ್ರಿಯಾಗಿ ನೇಮಕವಾದರು. ಕೂಡಲೇ ಆತ ಮೀಸಲಾತಿ ವಿರೋಧಿಗಳ ಬೇಡಿಕೆಗೆ ಒಪ್ಪಿಕೊಂಡರು. ಮೀಸಲಾತಿ ಹೆಚ್ಚಳವನ್ನು ಹಿಂದೆಗೆಯಲಾಯಿತು ಮತ್ತು ಗಲಭೆಯಲ್ಲಿ ಬಂಧಿಸಲ್ಪಟ್ಟ ಎಲ್ಲಾ ಆರೋಪಿಗಳನ್ನು ಬಿಡುಗಡೆಗೊಳಿಸಲಾಯಿತು. 1985ರ ಫೆಬ್ರವರಿಯಿಂದ ಜುಲೈ ತನಕ 220 ಮಂದಿಯ ಹತ್ಯೆ ನಡೆಯಿತು. ಕೇವಲ ಅಹ್ಮದಾಬಾದ್‌ನಲ್ಲೇ 662 ಮೀಸಲಾತಿ ವಿರೋಧಿ ಗಲಭೆ ಮತ್ತು 743 ಕೋಮುಗಲಭೆಗಳು ದಾಖಲಾದವು.

> ಗುಜರಾತ್ ಹತ್ಯಾಕಾಂಡದಲ್ಲಿ ಮೋದಿಯ ಪಾತ್ರವಿರುವ ಬಗ್ಗೆ ಸಿಟ್ ಮುಂದೆ ಹಲವು ಪ್ರಮುಖ ಸಾಕ್ಷ್ಯಾಧಾರಗಳಿವೆ. ಆದರೆ ಸಿಟ್ ಒಂದು ಮಾತನ್ನು ಅರ್ಥ ಮಾಡಿಕೊಳ್ಳಬೇಕು. ತನಿಖೆ ವಿಳಂಬ ವಾದಷ್ಟು ಸಾಕ್ಷ್ಯಗಳು ದುರ್ಬಲವಾಗುತ್ತವೆ. ಈ ನಿಟ್ಟಿನಲ್ಲಿ 9 ವರ್ಷಗಳಿಂದ ಆಮೆ ಗತಿಯಲ್ಲಿ ಸಾಗುತ್ತಿರುವ ಈ ಪ್ರಕರಣದ ತನಿಖೆಯನ್ನು ಇನ್ನಷ್ಟು ಚುರುಕುಗೊಳಿಸಬೇಕು. ಒಂದು ವೇಳೆ ಇದು ಅಸಾಧ್ಯವೆಂದಾದಲ್ಲಿ ನರೇಂದ್ರ ಮೋದಿಯ ವಿರುದ್ಧ ಸಾಕ್ಷ್ಯ ನಾಶಪಡಿಸಿದ ಹಲವು ಆರೋಪಗಳಿವೆ. ಇವುಗಳನ್ನು ಗಂಭೀರವಾಗಿ ಪರಿಗಣಿಸಿಕೊಂಡು ಮೋದಿಯನ್ನು ಬಂಧಿಸಿ ಜೈಲಿನಲ್ಲಿಡಬೇಕು. ಈ ಮೂಲಕ ಇನ್ನಷ್ಟು ಸಾಕ್ಷ್ಯಗಳು ನಾಶವಾಗದಂತೆ ತಡೆಯಬಹುದು.

ಸಂತ್ರಸ್ತರಲ್ಲಿ ಹೆಚ್ಚಿನವರು ಮುಸ್ಲಿಮರಾಗಿದ್ದರು. ಮಾತ್ರವಲ್ಲ ಅವರ 2,500 ಮನೆಗಳಿಗೆ ಹಾನಿ ಮಾಡಲಾಯಿತು, 1500 ಅಂಗಡಿಗಳಿಗೆ ಬೆಂಕಿ ಹಚ್ಚಲಾಯಿತು. ಗಲಭೆಯನ್ನು ನೂರು ಮಂದಿ ಸಾವನ್ನಪ್ಪಿದರು ಮತ್ತು ನೂರಾರು ಮಂದಿ ಗಾಯಗೊಂಡರು.

ಇದು ಮುಸ್ಲಿಮರು ಮತ್ತು ಹಿಂದೂಗಳ ನಡುವೆ ಒಂದು ಕಣಿವೆಯನ್ನು ನಿರ್ಮಿಸಿತು. ಹಲವು ವರ್ಷಗಳಿಂದ ಮುಸ್ಲಿಮರೊಂದಿಗೆ ಬೆರೆತು ಜೀವಿಸುತ್ತಿದ್ದ ಹಿಂದೂಗಳು ತಮ್ಮ ವಾಸವನ್ನು ಬದಲಾಯಿಸಲು ಆರಂಭಿಸಿದರು. ಈ ಪ್ರತ್ಯೇಕತೆಯು 1990ರ ದಶಕದಲ್ಲಿ ಮತ್ತು ವಿಶೇಷವಾಗಿ 2002ರಲ್ಲಿ ನಡೆದ ಹತ್ಯಾಕಾಂಡಕ್ಕೆ ದಾರಿಯನ್ನು ಸುಗಮಗೊಳಿಸಿತ್ತು. ಈ ಹತ್ಯಾಕಾಂಡದ ನೇತೃತ್ವ ವಹಿಸಿದವರು ಗುಜರಾತ್ ನರೇಂದ್ರ ಮೋದಿಯಲ್ಲದೆ ಮತ್ಯಾರೂ ಅಲ್ಲ.

ನರೇಂದ್ರ ಮೋದಿ ಈ ಗಲಭೆಯ ನೇತೃತ್ವ ವಹಿಸಿರುವುದು ಆಕಸ್ಮಿಕವೇನೂ ಅಲ್ಲ. ಆತನೊಬ್ಬ ಆರೆಸ್ಸೆಸ್‌ನ ಜೀವನ ಪರ್ಯಂತ ಸದಸ್ಯನಾಗಿದ್ದ. 1980 ಮತ್ತು 1990ರಲ್ಲಿ ಗುಜರಾತ್ ಬಿಜೆಪಿಯನ್ನು ಸಂಘಟಿಸಿರುವುದು ಈತನೇ ಆಗಿದ್ದ. 1987ರ ನ್ಯಾಯ್ ಯಾತ್ರೆ, 1989ರ ಲೋಕ್ ಶಕ್ತಿ ಯಾತ್ರೆ ಮತ್ತು 1991ರ ಏಕ್ತಾ ಯಾತ್ರೆಯ ಹಿಂದೆ ಈತ ಪ್ರಮುಖ ವ್ಯಕ್ತಿಯಾಗಿದ್ದ. 1992ರಲ್ಲಿ ಬಾಬ್ರಿ ಮಸ್ಜಿದ್ ಧ್ವಂಸಕ್ಕೆ ಅತ್ಯಧಿಕ ಸಂಖ್ಯೆಲ್ಲಿ ಕರ ಸೇವಕರನ್ನು ಕಳುಹಿಸಿದ ರಾಜ್ಯ ಗುಜರಾತ್ ಆಗಿದೆ. ಈ ಎಲ್ಲಾ ಯಾತ್ರೆಗಳು ಮುಸ್ಲಿಮರು ಗುಜರಾತ್‌ನಲ್ಲಿ ಮುಸ್ಲಿಮರು 'ಇತರರು' ಅಥವಾ 'ಶತ್ರುಗಳು' ಎಂಬ ಭಾವನೆಯುಂಟಾಗಲು ಕಾರಣವಾಯಿತು.

ಚೆಡ್ಡಿಗಳ ಪ್ರಕಾರ ಗುಜರಾತ್‌ನಲ್ಲಿರಲು ಮುಸ್ಲಿಮರಿಗೆ ಯಾವುದೇ ಹಕ್ಕಿಲ್ಲ ಮತ್ತು ಅವರು ಗುಜರಾತ್‌ನ ಭಾಗವೇ ಅಲ್ಲ. 2002ರಲ್ಲಿ ಗುಜರಾತ್ ಹತ್ಯಾಕಾಂಡವು ನಡೆದಿರುವುದು ಇದೇ ಕಾರಣಕ್ಕಾಗಿ. ಮೋದಿ ಇದರಲ್ಲಿ ಪ್ರಮುಖನೆಂಬುದು ಹಿಂದೆಯೇ ಎಲ್ಲರೂ ತಿಳಿದ ವಿಚಾರ. ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಈ ಬಗ್ಗೆ ಕೋರ್ಟ್‌ಗೆ ಅಫಿದವಿತ್ ಸಲ್ಲಿಸಿರುವುದು ಗುಜರಾತ್ ಗಲಭೆಯಲ್ಲಿ ಮೋದಿಯ ಪಾತ್ರವನ್ನು ಅಧಿಕೃತವೆಂದು ಘೋಷಿಸಿದೆಯಷ್ಟೇ.



# ದಿಕ್ಕೆಟ್ಟ ಅಣ್ಣಾ...



● ಶಿವಸುಂದರ್ ಮತ್ತು ಗೌರಿ ಲಂಕೇಶ್

ಕಳೆದ ಕೆಲವು ದಿನಗಳಿಂದ ಭಾರತದ ಮಧ್ಯಮ ವರ್ಗ- ಅದರಲ್ಲೂ ನಗರದ ಮಧ್ಯಮ ವರ್ಗ- ಒಂದು ಕ್ರಾಂತಿಯನ್ನೇ ಮಾಡಿದ ಧನ್ಯತೆಯಲ್ಲಿ ತೇಲಾಡುತ್ತಿದೆ. ಖ್ಯಾತ ಗಾಂಧೀವಾದಿ ಅಣ್ಣಾ ಹಜಾರೆ ನೇತೃತ್ವದಲ್ಲಿ ಜನಲೋಕಪಾಲ್ ಮಸೂದೆಯನ್ನು ಜಾರಿಗೆ ತರಲು ಒತ್ತಾಯಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ 97 ಗಂಟೆಗಳ ಉಪವಾಸದ ಮೂಲಕ ಭಾರತದಲ್ಲಿ ಕ್ರಾಂತಿಯ ಹೊಸ ಪರ್ವವೇ ಪ್ರಾರಂಭವಾಗಿದೆಯೆಂಬ ಭ್ರಾಂತಿಯನ್ನು ಮಾಧ್ಯಮಗಳೂ ಯಶಸ್ವಿಯಾಗಿ ಬಿತ್ತುತ್ತಲೇ ಇವೆ. ಕೆಲವು ಮಹಾಶಯರಂತೂ 97 ಗಂಟೆಗಳ ಈ ಕ್ರಾಂತಿಯನ್ನು ಈಜಿಪ್ಟ್‌ನ ತಹ್ರೀಕ್ ಚೌಕದ ಕ್ರಾಂತಿಗೆ ಹೋಲಿಸಿ ಸಂಭ್ರಮಿಸುತ್ತಿದ್ದಾರೆ.

ಇಂಥಾ ಹೋಲಿಕೆಗಳೇ ಈ ಹೋರಾಟದ ಸುತ್ತ ಇರುವ ಭ್ರಾಂತಿಯನ್ನು ಸೂಚಿಸುತ್ತವೆ. ಈಜಿಪ್ಟ್, ಟುನಿಸಿಯಾ ಮತ್ತು ಇತರ ಅರಬ್ ದೇಶಗಳಲ್ಲಿ ನಡೆಯುತ್ತಿರುವ ಜನಸಂಗ್ರಾಮಗಳಿಗೆ ಸ್ಪಷ್ಟ ಶತ್ರುಗಳಿದ್ದರೆ, ಅಲ್ಲಿ ಆ ದೇಶಗಳ ಅಧ್ಯಕ್ಷರ ಭ್ರಷ್ಟಾಚಾರ ಮತ್ತು ನಿರಂಕುಶತ್ವಗಳ ವಿರುದ್ಧ ಅಲ್ಲಿಯ ಜನಹೋರಾಟಗಳು ನಡೆದವು. ಅದರಲ್ಲೂ ಈಜಿಪ್ಟ್ ಮತ್ತು ಟುನಿಸಿಯಾಗಳಲ್ಲಿ ಒಂದು ಕಡೆ ಭ್ರಷ್ಟರು ಮತ್ತು ದುಷ್ಟರು ಇದ್ದರೆ, ಇನ್ನೊಂದು ಕಡೆ ಈ ಜನಪೀಡಕರಿಂದ ಬಾಧಿತರಾದ ಇಡೀ ಜನತೆ ಹೋರಾಟ ನಡೆಸಿತ್ತು. ಹೀಗಾಗಿ ಅಲ್ಲಿ ನಡೆದ ಸಂಗ್ರಾಮ ಮೌಲಿಕವಾಗಿಯೇ ಭಿನ್ನವಾಗಿತ್ತು.

### ವಿರೋಧಿಗಳೇ ಇಲ್ಲದ ಸಂಗ್ರಾಮ !

ಆದರೆ ಇಲ್ಲಿ ಅಣ್ಣಾ ಹಜಾರೆ ನಡೆಸಿದ ಆಂದೋಲನವು ಆರು ಯಾರ ವಿರುದ್ಧ ನಡೆಸಿದ ಸಂಗ್ರಾಮ ಎಂದೇ ಅರ್ಥವಾಗುವಂತಿರಲಿಲ್ಲ. ದೇಶದ ಅತ್ಯುನ್ನತ ಹುದ್ದೆಯಾದ ಪ್ರಧಾನಮಂತ್ರಿ ಮತ್ತು ಅತ್ಯುನ್ನತ ಪ್ರಜಾತಾಂತ್ರಿಕ ಸಂಸ್ಥೆಯಾದ ಸಂಸತ್ತಿನಲ್ಲಿ ನಡೆಯುವ ಭ್ರಷ್ಟಾಚಾರವನ್ನು ಹತ್ತಿಕ್ಕಲು ರೂಪಿಸಲಾದ ಲೋಕ್‌ಪಾಲ್ ಮಸೂದೆಗೆ ಜನಪರ ತಿದ್ದುಪಡಿ ತರಬೇಕೆಂದು ಪ್ರಾರಂಭವಾದ ಈ ಚಳವಳಿಯನ್ನು ವಾಸ್ತವವಾಗಿ ಯಾರೂ ವಿರೋಧಿಸಲೇ ಇಲ್ಲ ! ಏಕೆಂದರೆ ಪರಮ ಭ್ರಷ್ಟಾಚಾರಿಗಳು ಮತ್ತು ಕೊನೆಗೆ ಸರಕಾರ ಕೂಡ ಭ್ರಷ್ಟಾಚಾರ ನಿಗ್ರಹದ ಬಗ್ಗೆ ಬದ್ಧತೆಯ ಮಾತುಗಳನ್ನಾಡಲು ಪ್ರಾರಂಭಿಸಿದವು.

ತನ್ನ ರಾಜಿರಹಿತ ಹೋರಾಟದ ಮೂಲಕ ಈ ಆಂದೋಲನಕ್ಕೆ ನೈತಿಕ ಶಕ್ತಿ ಮತ್ತು ಸಾಕ್ಷಿಪ್ರಜ್ಞೆಯಾಗಿದ್ದ ಅಣ್ಣಾ ಹಜಾರೆಯವರ ಕುದುರೆಯನ್ನೇರಿ ದೆಹಲಿ ತಲುಪಲು ಬಿಜೆಪಿ ಪ್ರಯತ್ನಿಸಿದ್ದು ಒಂದೆಡೆಯಾದರೆ, ಮತ್ತೊಂದು ಕಡೆ ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಯಾವತ್ತೂ ನಂಬಿಕೆಯಿಲ್ಲದ, ಹಿಟ್ಲರ್ ಆದರೂ ಸರಿ, ಗಾಂಧಿಯಾದರೂ ಸರಿ ಯಾರಾದರೂ ಅತಿಮಾನವ ಬಂದರೆ ಮಾತ್ರ ಈ ದೇಶ ಸರಿಹೋಗುತ್ತದೆ ಎಂಬ ಫ್ಯಾಷಿಸ್ಟ್ ಮನೋಭಾವವನ್ನು ಹೊಂದಿರುವ ಮೇಲ್‌ಮಧ್ಯಮ ವರ್ಗವಿತ್ತು.

ಈ ಆಂದೋಲನದಲ್ಲಿ ಕೇವಲ ಮೇಲ್ಮಧ್ಯಮ ವರ್ಗದ ಜನರು, ಉದ್ದಿಮೆಪತಿಗಳು, ಎನ್‌ಜಿಒಗಳು ಇರಲಿಲ್ಲ. ಅವರೊಂದಿಗೆ ಭ್ರಷ್ಟಾಚಾರ ತೊಲಗಬೇಕೆಂಬ ನೈಜ ಆಶಯವುಳ್ಳ ಲಕ್ಷಾಂತರ ಜನರೂ, ಪ್ರಗತಿಪರರೂ ದೇಶಾದ್ಯಂತ ಭಾಗವಹಿಸಿದ್ದರು. ಅವರೆಲ್ಲರ ಭಾಗವಹಿಸುವಿಕೆಯು ಅಪ್ರಾಮಾಣಿಕವೆಂದೋ, ಅಪ್ರಯೋಜಕವೆಂದೋ ಹೇಳುವುದು ಅವರ ಪ್ರಾಮಾಣಿಕ ಆಶಯಗಳಿಗೆ ಎಸಗುವ ಅಪಚಾರವಾಗುತ್ತದೆ. ಅದರ ಬಗ್ಗೆ ಗೌರವಿಟ್ಟುಕೊಂಡೇ ಹೇಳಬೇಕಾದ ಎರಡು ಮಾತಿದೆ; ಒಂದು, ಈ ಚಳವಳಿಯೊಳಗೇ ಬೇರೆ ಬೇರೆ ಮಟ್ಟದ ಭ್ರಷ್ಟರು ಮೊದಲಿಂದಲೇ ಸೇರಿಕೊಂಡಿದ್ದು. ಎರಡು, ಇಂತಹದೊಂದು ಸಮೂಹಸನ್ನಿ, ಏಕೆ, ಹೇಗೆ ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸದೇ 'ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೋ ಅಷ್ಟೂ ಪ್ರಯೋಜನ ಆಗಲಿ' ಎಂದು ಅದರೊಳಗೆ ಸೇರಿಕೊಂಡಿದ್ದು.

ಈ ಆಂದೋಲನದಲ್ಲಿ ಕೇವಲ ಮೇಲ್ಮಧ್ಯಮ ವರ್ಗದ ಜನರು, ಉದ್ದಿಮೆಪತಿಗಳು, ಎನ್‌ಜಿಒಗಳು ಇರಲಿಲ್ಲ. ಅವರೊಂದಿಗೆ ಭ್ರಷ್ಟಾಚಾರ ತೊಲಗಬೇಕೆಂಬ ನೈಜ ಆಶಯವುಳ್ಳ ಲಕ್ಷಾಂತರ ಜನರೂ, ಪ್ರಗತಿಪರರೂ ದೇಶಾದ್ಯಂತ ಭಾಗವಹಿಸಿದ್ದರು. ಅವರೆಲ್ಲರ ಭಾಗವಹಿಸುವಿಕೆಯು ಅಪ್ರಾಮಾಣಿಕವೆಂದೋ, ಅಪ್ರಯೋಜಕವೆಂದೋ ಹೇಳುವುದು ಅವರ ಪ್ರಾಮಾಣಿಕ ಆಶಯಗಳಿಗೆ ಎಸಗುವ ಅಪಚಾರವಾಗುತ್ತದೆ. ಅದರ ಬಗ್ಗೆ ಗೌರವಿಟ್ಟುಕೊಂಡೇ ಹೇಳಬೇಕಾದ ಎರಡು ಮಾತಿದೆ; ಒಂದು, ಈ ಚಳವಳಿಯೊಳಗೇ ಬೇರೆ ಬೇರೆ ಮಟ್ಟದ ಭ್ರಷ್ಟರು ಮೊದಲಿಂದಲೇ ಸೇರಿಕೊಂಡಿದ್ದು. ಎರಡು, ಇಂತಹದೊಂದು ಸಮೂಹಸನ್ನಿ, ಏಕೆ, ಹೇಗೆ ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸದೇ 'ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೋ ಅಷ್ಟೂ ಪ್ರಯೋಜನ ಆಗಲಿ' ಎಂದು ಅದರೊಳಗೆ ಸೇರಿಕೊಂಡಿದ್ದು.

ಇವತ್ತಿನ ಸಂಸದೀಯ ಪ್ರಜಾತಂತ್ರದ ಮೂಲ ರಚನೆಯಲ್ಲೇ ದೊಡ್ಡ ಸಮಸ್ಯೆ ಇರುವುದು ನಿಜ. ಈ ಮಧ್ಯೆ ಕಳೆದೆರಡು ದಶಕಗಳಲ್ಲಿ ಜಾಗತೀಕರಣ ನೀತಿಗಳ ಫಲಾನುಭವಿಯಾದ ಮೇಲ್ಮಧ್ಯಮ ವರ್ಗವೊಂದು ಈ ದೇಶದಲ್ಲಿ ಸೃಷ್ಟಿಯಾಗಿದೆ. ಈ ಜನರಿಗೆ ಯಾವ ರೀತಿಯ ಪ್ರಜಾತಂತ್ರದ ಬಗ್ಗೆಯೂ ವಿಶ್ವಾಸವಿಲ್ಲ. ಬದಲಿಗೆ ಕೇವಲ ಮಾರುಕಟ್ಟೆಯ 'ಬಲವಿದ್ದವರು ಬದುಕಲಿ' ಎಂಬ ಅರಣ್ಯ ನ್ಯಾಯದ ಬಗ್ಗೆ ಈ ವರ್ಗಕ್ಕೆ ದೃಢ ನಂಬಿಕೆ ಇದೆ.

ಈ ವರ್ಗದ ಜನರಿಗೆ ಈ ದೇಶದ ಅತ್ಯಂತ ದೊಡ್ಡ ಸಮಸ್ಯೆಗಳೆಂದರೆ ಭ್ರಷ್ಟಾಚಾರ, ನಗರಗಳಲ್ಲಿನ ಟ್ರಾಫಿಕ್, ಮೀಸಲಾತಿಯಂತಹ ಸಂಗತಿಗಳು. ಭ್ರಷ್ಟಾಚಾರದ ಮೂಲ ಗಂಗೋತ್ರಿ ಯಾವುದು? ಅದರ ನಿವಾರಣೆ ಹೇಗೆ ? ಎಂಬುದರ ಕುರಿತಾಗಲೀ, ಟ್ರಾಫಿಕ್ ಜಾಮ್ ಸಮಸ್ಯೆಗೆ ಹೇಗೆ ತಾವೂ ಭಾಗಿಗಳಾಗಿರುವ ಜಾಗತೀಕರಣ ಅಭಿವೃದ್ಧಿ ನೀತಿಯೇ ಕಾರಣ ಎಂಬುದರ ಬಗ್ಗೆಯಾಗಲೀ ಈ ವರ್ಗಕ್ಕೆ ಚಿಂತನೆ ಮತ್ತು ಕ್ರಿಯೆ ಸಾಧ್ಯವಿಲ್ಲ.

ಆದರೆ ಈ ವರ್ಗದವರಲ್ಲಿ ಹಜಾರೆಯವರ ಸುತ್ತ ನಿರ್ಮಾಣವಾದ ಸನ್ನಿಯು ಇದ್ದಕ್ಕಿದ್ದಂತೆ ದೇಶಪ್ರೇಮವನ್ನು ಉಕ್ಕಿಸಿಬಿಟ್ಟಿತು. ಅವರ ಈ ದೇಶಪ್ರೇಮವು ಎಷ್ಟರಮಟ್ಟಿಗೆ ಮುಂದಿನ ವಾರದವರೆಗೆ ಇರುತ್ತದೆ ಹಾಗೂ ಅದು ಈ ದೇಶದ ಬಡ ಜನರ ಮೇಲಿನ ಪ್ರೇಮವಾಗಿ ಯಾವಾಗ ಬದಲಾಗುತ್ತದೆ ಎಂಬುದನ್ನು ವಿಶ್ಲೇಷಿಸುವ ಅಗತ್ಯವೇ ಇಲ್ಲ. ಯಾಕೆಂದರೆ ಅವರ

ಈ ದೇಶಪ್ರೇಮವು ಶಾಶ್ವತವಲ್ಲ.

**ಭ್ರಷ್ಟರೇ ಬೆಂಬಲಿಸಿದಾಗ**

ಈ ಹಿಂದೆ ಬಿಜೆಪಿಯ ಕೇಂದ್ರ ಸರಕಾರದ ಚುಕ್ಕಾಣಿ ಹಿಡಿದಿದ್ದಾಗ ಲೋಕ್‌ಪಾಲ್ ಮಸೂದೆಯ ಬಗ್ಗೆ ಚಕಾರ ಎತ್ತದ ಎಲ್.ಕೆ.ಅಡ್ವಾಣಿ ಮತ್ತವರ ಪಕ್ಷ ಅಣ್ಣಾ ಹಜಾರೆಯವರ ಬೆಂಬಲಕ್ಕೆ ನಿಂತಿತು. ಅದಕ್ಕಿಂತ ಹಾಸ್ಯಾಸ್ಪದವಾಗಿದ್ದು, ಕರ್ನಾಟಕ ಹಿಂದೆಂದೂ ಕಾಣದಂಥ ಭ್ರಷ್ಟಾಚಾರಿಯಾದ ಮುಖ್ಯಮಂತ್ರಿ ಯಡಿಯೂರಪ್ಪನೂ ಸಹ ಹಜಾರೆಯವರ ಹೋರಾಟವನ್ನು ಬೆಂಬಲಿಸಿದ್ದು. ಇದರ ಬಗ್ಗೆ ಜನರೇ ಎಷ್ಟು ಆಡಿಕೊಂಡರೆಂದರೆ, ಯಡ್ಡಿ ಬೆಂಬಲ ಸೂಚಿಸಿದ ಕೆಲವೇ ಗಂಟೆಗಳಲ್ಲಿ ''ಯಡಿಯೂರಪ್ಪನವರು ಹಜಾರೆಯವರಿಗೆ ಫ್ರೀಡಂ ಪಾರ್ಕಿನಲ್ಲೇ 60/40 ಸೈಟು ಕೊಡುತ್ತಾರಂತೆ'' ಎಂಬ ಎಸ್‌ಎಂಎಸ್ ಜೋಕ್ ಎಲ್ಲೆಡೆ ಹರಿದಾಡಲಾರಂಭಿಸಿತು !

ದೆಹಲಿಯಲ್ಲೂ ಬಾಬಾ ರಾಮ್‌ದೇವ್‌ನಂಥಾ ಗೋಸುಂಬೆ




ಭ್ರಷ್ಟಾಚಾರ ವಿರೋಧಿ ಗುಂಪಿಗೆ ಸೇರಿಕೊಂಡು ಬಿಟ್ಟರು.

ಹೀಗೆ ಎದುರಾಳಿಯಾಗಬೇಕಿದ್ದ ಶತ್ರುವನ್ನೇ ಜೊತೆಗೆ ಸೇರಿಸಿಕೊಂಡು ನಡೆದ ಈ ಯುದ್ಧದಲ್ಲಿ ಗೆದ್ದವರು ಹಜಾರೆಯಾದರೂ ಸೋತದ್ದು ಮಾತ್ರ ಭ್ರಷ್ಟಾಚಾರವೇ ಅಲ್ಲವೇ ಅಲ್ಲ.

ಈ ಹಿಂದೆ ಬಿಜೆಪಿಯ ಕೇಂದ್ರ ಸರಕಾರದ ಚುಕ್ಕಾಣಿ ಹಿಡಿದಿದ್ದಾಗ ಲೋಕ್‌ಪಾಲ್ ಮಸೂದೆಯ ಬಗ್ಗೆ ಚಕಾರ ಎತ್ತದ ಎಲ್.ಕೆ.ಅಡ್ವಾಣಿ ಮತ್ತವರ ಪಕ್ಷ ಅಣ್ಣಾ ಹಜಾರೆಯವರ ಬೆಂಬಲಕ್ಕೆ ನಿಂತಿತು. ಅದಕ್ಕಿಂತ ಹಾಸ್ಯಾಸ್ಪದವಾಗಿದ್ದು, ಕರ್ನಾಟಕ ಹಿಂದೆಂದೂ ಕಾಣದಂಥ ಭ್ರಷ್ಟಾಚಾರಿಯಾದ ಮುಖ್ಯಮಂತ್ರಿ ಯಡಿಯೂರಪ್ಪನೂ ಸಹ ಹಜಾರೆಯವರ ಹೋರಾಟವನ್ನು ಬೆಂಬಲಿಸಿದ್ದು. ಇದರ ಬಗ್ಗೆ ಜನರೇ ಎಷ್ಟು ಆಡಿಕೊಂಡರೆಂದರೆ, ಯಡ್ಡಿ ಬೆಂಬಲ ಸೂಚಿಸಿದ ಕೆಲವೇ ಗಂಟೆಗಳಲ್ಲಿ ''ಯಡಿಯೂರಪ್ಪನವರು ಹಜಾರೆಯವರಿಗೆ ಫ್ರೀಡಂ ಪಾರ್ಕಿನಲ್ಲೇ 60/40 ಸೈಟು ಕೊಡುತ್ತಾರಂತೆ'' ಎಂಬ ಎಸ್‌ಎಂಎಸ್ ಜೋಕ್ ಎಲ್ಲೆಡೆ ಹರಿದಾಡಲಾರಂಭಿಸಿತು !

ಚೆಡ್ಡಿ ಸ್ವಾಮಿ. ರವಿಶಂಕರ್ ತರಹದ ವ್ಯೆಯಾರಿ ಸ್ವಾಮಿ (ಇವರಿಬ್ಬರೂ ಅಯೋಧ್ಯೆಯಲ್ಲಿ ರಾಮದೇವಸ್ಥಾನ ಸ್ಥಾಪಿಸಬೇಕೆಂದು ಹೇಳಿರುವವರು), ರಾಜೀವ್ ಚಂದ್ರಶೇಖರ್‌ನಂಥ ಕಾರ್ಪೊರೇಟ್ ಉದ್ಯಮಪತಿ ಎಲ್ಲರೂ ಹಜಾರೆಯವರಿಗೆ ಬೆಂಬಲ ಸೂಚಿಸಿ ಭ್ರಷ್ಟಾಚಾರದ ವಿರುದ್ಧ ದೊಡ್ಡ ದನಿಯಲ್ಲಿ ಮಾತನಾಡಿದವರೇ. ಅಷ್ಟೇ ಅಲ್ಲದೆ, ಕೊನೆಕೊನೆಗೆ ಕಾಂಗ್ರೆಸ್, ಬಿಜೆಪಿ, ದಳ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳೂ ಸಹ ಭ್ರಷ್ಟಾಚಾರದ ವಿರುದ್ಧ ಸಮೂಹಗಾನಕ್ಕೆ ಕೋರಸ್ ಸೇರಿಸಿದವು.

ಇದೆಲ್ಲ ಯಾವ ಹಂತ ತಲುಪಿತೆಂದರೆ, ಭ್ರಷ್ಟಾಚಾರದ ನೇತಾರನಾದ ಕೇಂದ್ರದ ಕಾಂಗ್ರೆಸ್ ಪಕ್ಷ ತಾನು ಅತ್ಯಂತ ಸಂವೇದನಾಶೀಲ ಸರಕಾರವೆಂಬಂತೆ ಅಣ್ಣಾ ಹಜಾರೆ ಸೂಚಿಸಿದವರನ್ನೇ ಕೂಡಿಸಿ, ಜನಲೋಕಪಾಲ್ ಮಸೂದೆಯನ್ನು ರೂಪಿಸಲು ಒಂದು ಕಮಿಟಿಯನ್ನು ಮಾಡಿ ತಾವೂ ಸಹ

ಯಾವುದೇ ಹೋರಾಟದ ಜಯ ಯಾವುದರ ವಿರುದ್ಧ ಯಾರು ಹೋರಾಡುತ್ತಿದ್ದಾರೆ, ಅಂತಿಮವಾಗಿ ಹೋರಾಟಗಾರರು ಪಡೆದುಕೊಂಡದ್ದು ಶತ್ರುವಿಗೆ ಯಾವ ರೂಪದ ಪೆಟ್ಟನ್ನು ಕೊಡುತ್ತದೆ ಎಂಬುದನ್ನೇ ಆಧರಿಸಿರುತ್ತದೆ.

**ಭ್ರಷ್ಟಾಚಾರ ಕಾನೂನುಬದ್ಧವಾಗಿದೆ !**

ಅಣ್ಣಾ ಹಜಾರೆಯವರ ಹೋರಾಟ ಈ ದೇಶದಲ್ಲಿ ಆಳವಾಗಿ ಬೇರುಬಿಟ್ಟಿರುವ ಭ್ರಷ್ಟಾಚಾರದ ವಿರುದ್ಧ ಎಂದು ಬಣ್ಣಿಸಲಾಗುತ್ತಿದೆ. ಆದರೆ ಲೋಕ್‌ಪಾಲ್ ಮಸೂದೆಯಾಗಲಿ ಅಥವಾ ಅದರ ಜನಲೋಕ್‌ಪಾಲ್ ಸ್ವರೂಪವಾಗಲೀ ಕೇಂದ್ರದ ಅಧಿಕಾರಿ, ಸಂಸದರು ಮತ್ತು ಮಂತ್ರಿಮಂಡಲವನ್ನು ಮಾತ್ರ ತನ್ನ ವಿಚಾರಣಾ ಮತ್ತು ಶಿಕ್ಷೆಯ ವ್ಯಾಪ್ತಿಗೆ ತೆಗೆದುಕೊಳ್ಳುತ್ತದೆ. ಆದರೆ ಜಾಗತೀಕರಣದ ನಂತರದಲ್ಲಿ ಸರಕಾರದ ಪಾತ್ರವೇ ಕಿರಿದಾಗುತ್ತಾ ಖಾಸಗೀ ಕ್ಷೇತ್ರದ ಪಾತ್ರದ ಹಿರಿದಾಗುತ್ತಿದೆ. ಹಾಗೆಯೇ ಭ್ರಷ್ಟಾಚಾರವೂ ಸಹ ಅತ್ಯಂತ ಹೆಚ್ಚಾಗಿ ಲಕ್ಷ ಕೋಟಿ

## ಮೋದಿಯ ಮೋಸ ಕಾಣಲಿಲ್ಲವೇಕೆ?

ಇನ್ನು ಈ ನೊಬೆಲ್ ಮತ್ತು ಜ್ಞಾನಪೀಠ ವಿಜೇತರ ರಾಜಕೀಯ ತಿಳುವಳಿಕೆ ಎಷ್ಟರ ಮಟ್ಟಿಗೆ ಜನಪರವಾಗಿರುತ್ತದೆ ಎಂಬುದು ಇನ್ನೊಂದು ವಿಷಯ. ಸಾಕ್ಷಾತ್ ಅಣ್ಣಾ ಹಜಾರೆಯವರೇ ಈ ಹೋರಾಟದಲ್ಲಿ ಜಯಗಳಿಸಿದ ನಂತರ ಈ ದೇಶದ ಮುಖ್ಯಮಂತ್ರಿಗಳು ನರಹಂತಕ ನರೇಂದ್ರ ಮೋದಿಯ ಗುಜರಾತಿನಿಂದ ಮತ್ತು ಬಿಹಾರದ ನಿತೀಶ್ ಕುಮಾರ್‌ರಿಂದ ಪಾಠ ಕಲಿಯಬೇಕೆಂದು ಕರೆ ಕೊಟ್ಟಿದ್ದರು.

2002ರಲ್ಲಿ ನರೇಂದ್ರ ಮೋದಿ ನಡೆಸಿದ ನರಮೇಧ ಬದಿಗಿರಿಲಿ, ಮೋದಿ ಅಧಿಕಾರಕ್ಕೆ ಬಂದ ಮೇಲೆ ಗುಜರಾತಿನಲ್ಲಿ ಲೋಕಾಯುಕ್ತರ ನೇಮಕವನ್ನೇ ಮಾಡಿಲ್ಲ ಎಂಬುದೂ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿರುವ ಹಜಾರೆಯವರ ಗಮನಕ್ಕೆ ಬಂದಿಲ್ಲ. ಹಾಗೆಯೇ ಮೋದಿ ನೇತೃತ್ವದಲ್ಲಿ ಗುಜರಾತಿಯಲ್ಲಿ ಸುಜಲಾಂ ಯೋಜನೆಯಲ್ಲಿ 1700 ಕೋಟಿ, ರೋಜ್‌ಗಾರ್ ಯೋಜನೆಯಲ್ಲಿ 109 ಕೋಟಿ, ಮೀನುಗಾರಿಕಾ ಇಲಾಖೆಯಲ್ಲಿ 600 ಕೋಟಿ ರೂಪಾಯಿ ಭ್ರಷ್ಟಾಚಾರವಾಗಿರುವುದೂ ಹಜಾರೆ ಅವರ ಕಣ್ಣಿಗೆ ಬಿದ್ದಿಲ್ಲ.

ಜೊತೆಗೆ ಗುಜರಾತಿನ ಗ್ರಾಮಾಂತರ ಪ್ರದೇಶದ ದಲಿತ ಹಾಗೂ ಭೂಹೀನ ಕಾರ್ಮಿಕರಿಗೆ ಸೇರಬೇಕಾಗಿದ್ದ ಲಕ್ಷಾಂತರ ಎಕರೆ ಗೋಮಾಳ ಭೂಮಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಬಿಜೆಪಿ ಪರಿವಾರದ ಉದ್ಯಮಿಗಳ ಸಣ್ಣಗುಂಪಿಗೆ ಮೋದಿ ಪರಭಾರೆ ಮಾಡಿರುವುದು, ಅದರ ವಿರುದ್ಧ ನಡೆಯುತ್ತಿರುವ ಹೋರಾಟಗಳನ್ನು ಮೋದಿ ಸರಕಾರ ಕ್ರೂರವಾಗಿ ದಮನಿಸಿರುವುದೂ ಹಜಾರೆಯವರ ಕಣ್ಣಿಗೆ ಬಿದ್ದಿಲ್ಲ.

ಅಂದರೆ, ಹಜಾರೆಯವರ ಭ್ರಷ್ಟಾಚಾರದ ಪರಿಕಲ್ಪನೆಯಲ್ಲಿ ಸಾಂವಿಧಾನಿಕ ಮೌಲ್ಯಗಳ ಹತ್ಯೆಯ ಪ್ರಶ್ನೆಯೇನು? ಜನರ ಸಂಪನ್ಮೂಲಗಳು ಬಂಡವಾಳಶಾಹಿಗಳ ಅಭಿವೃದ್ಧಿಗೆ ಹರಿದು ಹೋಗುವುದು ಭ್ರಷ್ಟಾಚಾರವಲ್ಲವೇ? ರಾಜ್ ಠಾಕ್ರೆಯ ನೇತೃತ್ವದಲ್ಲಿ ಮರಾಠಿಯರಲ್ಲದವರು ಮಹಾರಾಷ್ಟ್ರದಲ್ಲಿ ಎರಡನೇ ಆದ್ಯತೆಗೆ ತೃಪ್ತಿ ಪಟ್ಟಕೊಳ್ಳಬೇಕೆಂಬ ಚಳವಳಿಯನ್ನು ಹಜಾರೆಯವರು ಬೆಂಬಲಿಸಿದ್ದೇಕೆ? ಇದೆಲ್ಲ ಭ್ರಷ್ಟಾಚಾರದ ಬಗ್ಗೆ ಮತ್ತು ಸಾಂವಿಧಾನಿಕ ಮೌಲ್ಯಗಳಿಗೇ ಕುತ್ತು ತರುತ್ತಿರುವ ಇತರ ರಾಜಕೀಯ ವಿಷಯಗಳ ಬಗ್ಗೆ ಅಣ್ಣಾ ಹಜಾರೆಯವರ ನೆಲೆ ಮತ್ತು ನಿಲುವುಗಳು. ಇನ್ನು ನೊಬೆಲ್ ವಿಜೇತ ಭಾರತೀಯ ಸಂಜಾತ ನೈಪಾಲ್ ಅಂತೂ ಅತ್ಯಂತ ಪ್ರತಿಗಾಮಿ ತಿಳುವಳಿಕೆಯುಳ್ಳವರು. ವಿಖ್ಯಾತ ವಿಜ್ಞಾನಿಗಳು ಮತ್ತು ಸಾಹಿತಿಗಳು ರಾಜಕೀಯ, ಆರ್ಥಿಕತೆಯ ಬಗ್ಗೆ ಸಾಮಾನ್ಯಮಟ್ಟದ ತಿಳುವಳಿಕೆಯನ್ನೂ ಹೊಂದಿರುವುದಿಲ್ಲ. ಅದಕ್ಕೆ ಸಾಕಷ್ಟು ಉದಾಹರಣೆಗಳು ಕರ್ನಾಟಕದಲ್ಲೇ ಇವೆ !

ರೂಪಾಯಿಗಳ ಸ್ವರೂಪ ಪಡೆದುಕೊಳ್ಳುತ್ತಿದೆ. ಇದಕ್ಕೆ ಕಾರಣ, ಖಾಸಗಿ ಕ್ಷೇತ್ರವೂ ಸರಕಾರಿ ವಲಯದಲ್ಲಿ ಪ್ರವೇಶ ಮಾಡಿದ್ದರಿಂದ.

ಉದಾರೀಕರಣ ಎಂದು ಕರೆಯಲ್ಪಡುವ ಈ ಶಾಸನಬದ್ಧ ಭ್ರಷ್ಟಾಚಾರದ ನೇರ ಫಲಾನುಭವಿಗಳಾದ ರಾಜೀವ್ ಚಂದ್ರಶೇಖರ್, ರಾಹುಲ್ ಬಜಾಜ್, ಅಂಬಾನಿ, ಟಾಟಾರಂಥ ಉದ್ಯಮಿಗಳು ಇಂದು ಅಣ್ಣಾ ಹಜಾರೆಯನ್ನು ಬೆಂಬಲಿಸುತ್ತಿದ್ದಾರೆ ಎಂದರೆ ಏನರ್ಥ? ಜನಲೋಕ್‌ಪಾಲ್ ಮಸೂದೆಯಾಗಲೀ, ಈವರೆಗೆ ಅಸ್ತಿತ್ವದಲ್ಲಿರುವ ಯಾವುದೇ ತನಿಖಾ ಸಂಸ್ಥೆ ಅಥವಾ ಕಾನೂನುಗಳಾಗಲೀ ಈ ಫಲಾನುಭವಿಗಳ ಭ್ರಷ್ಟಾಚಾರವನ್ನು ಭ್ರಷ್ಟಾಚಾರ ಎಂದೇ ಪರಿಗಣಿಸುವುದಿಲ್ಲ.

### ಅಪಾಯಕಾರಿ ಪರಿಹಾರ

ಇವತ್ತು ನಿಜಕ್ಕೂ ಈ ದೇಶದಿಂದ ಭ್ರಷ್ಟಾಚಾರವನ್ನು ಹೊಡೆದೋಡಿಸಬೇಕಿದ್ದರೆ, ಈಗ ಜಾರಿಗೆ ಬಂದಿರುವ ಬಂಡವಾಳಶಾಹಿ ವ್ಯವಸ್ಥೆ, 'ಅಭಿವೃದ್ಧಿ ಯೋಜನೆಗಳು', ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಎಂಬ ನೀತಿ, ಈ ದೇಶದ ಸಂಪನ್ಮೂಲಗಳನ್ನು ಖಾಸಗಿಯವರಿಗೆ ಪರಭಾರೆ ಮಾಡುವ ಶಾಸನಗಳೆಲ್ಲ ವಿರೋಧಿಸಬೇಕಿದೆ.

ಅದನ್ನು ಮಾಡುವ ಅಥವಾ ಅವೆಲ್ಲವುಗಳ ಕುರಿತು ಎಚ್ಚರಿಕೆ ಮೂಡಿಸುವ ಬದಲಾಗಿ ಅಣ್ಣಾ ಹಜಾರೆಯವರ ಈ 'ಆಂದೋಲನ' ಭ್ರಷ್ಟಾಚಾರದ ವ್ಯಾಖ್ಯಾನವನ್ನು ಕೇವಲ ರಾಜಕಾರಣಿಗಳಿಗೆ ಮಾತ್ರ ಸೀಮಿತಗೊಳಿಸಿದೆ. ಅದಕ್ಕಿಂತ ಅಪಾಯಕಾರಿಯಾದದ್ದು, ಕೆಲವು ಗಣ್ಯರಿಗೆ ವಿಶೇಷ ಅಧಿಕಾರಗಳನ್ನು ಕೊಡುವುದರ ಮೂಲಕ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಗ್ರಹಿಸಬಹುದೆಂಬ ಅತ್ಯಂತ ಪರಿಹಾರವನ್ನು ಮುಂದಿಟ್ಟಿರುವುದು.

ವಾಸ್ತವವಾಗಿ ಅಣ್ಣಾ ಹಜಾರೆಯವರ ಬೆನ್ನಹಿಂದೆ ಸೇರಿರುವ ರಾಜಕಾರಣಿಗಳಿಗೂ, ಉದ್ಯಮಪತಿಗಳಿಗೂ, ಉದಾರೀಕರಣ




ನೀತಿಗಳ ಫಲಾನುಭವಿಗಳೇ ಆಗಿರುವ ಮೇಲ್ಮಧ್ಯಮ ವರ್ಗಕ್ಕೂ ಭ್ರಷ್ಟಾಚಾರದ ಈ ಬಗೆಯ ವ್ಯಾಖ್ಯಾನ ಹಾಗೂ ಪರಿಹಾರ ಅತ್ಯಂತ ಅನುಕೂಲಕರವಾದದ್ದೇ ಆಗಿದೆ. ಮಣಿಪುರದ ಇರೋಮ್ ಶರ್ಮಿಳಾರ 10 ವರ್ಷದ ಉಪವಾಸವನ್ನು ಕ್ಯಾರೇ ಅನ್ನದ ಸರಕಾರ 97 ಗಂಟೆಗಳ ಹಜಾರೆಯವರ ಉಪವಾಸಕ್ಕೆ ಬಗ್ಗಿದ್ದಕ್ಕೆ ಕಾರಣವಾದರೂ ಏನು?

**ಜನಲೋಕಪಾಲ್ ಮಸೂದೆಯಿಂದ ಏನು ಸಾಧ್ಯ?**

ಈ ಜನಲೋಕಪಾಲ್ ಮಸೂದೆ ಅಣ್ಣಾ ಹಜಾರೆ ಮತ್ತವರ ಮಿತ್ರರು ರೂಪಿಸಿದ ರೀತಿಯಲ್ಲೇ ಜಾರಿಗೆ ಬಂದರೆ ಕೆಲವು ಭ್ರಷ್ಟ ಮಂತ್ರಿಗಳು, ಪ್ರಧಾನಿ, ಇನ್ನಿತರರು ಶಿಕ್ಷೆಗೆ ಗುರಿಯಾಗಬಹುದು. ಆದರೆ ಅದಕ್ಕಾಗಿ ಅವರು ಸೂಚಿಸುತ್ತಿರುವ ಮಾರ್ಗೋಪಾಯಗಳು ಮಾತ್ರ ಪ್ರಜಾತಂತ್ರಕ್ಕೆ ದೊಡ್ಡ ಮಾರಕವಾಗಲಿದೆ. ಹೀಗಾಗಿ ಭ್ರಷ್ಟಾಚಾರದ ವ್ಯಾಖ್ಯಾನವನ್ನೇ ಕುಬ್ಜಗೊಳಿಸಿ, ಅದನ್ನು ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸಿ, ಶಾಸನಬದ್ಧ ಭ್ರಷ್ಟಾಚಾರವನ್ನು ಪ್ರಶ್ನಿಸಲೂ ಹೋಗದ ಈ ಆಂದೋಲನದ ಭೂಮಿಕೆಯೇ ಅತ್ಯಂತ ಪ್ರಶ್ನಾರ್ಹವಾಗಿದೆ.

ಸಂಸತ್ ಹಾಗೂ ಪ್ರಧಾನಿ ಮಂತ್ರಿಮಂಡಳದಲ್ಲಿ ನಡೆಯುವ ಭ್ರಷ್ಟಾಚಾರವನ್ನು ನಿಗ್ರಹಿಸಲು ಜನಲೋಕಪಾಲ್ ಸೂಚಿಸಿರುವ ಮಸೂದೆಯಲ್ಲಿ ಸರಕಾರ ಪ್ರಸ್ತಾಪಿಸಿದ ಮಸೂದೆಗಳಿಗಿಂತ ಕಠಿಣವಾದ ಕೆಲವು ಅಂಶಗಳಿರುವುದು ನಿಜ. ಆದರೆ ಈ ಮಸೂದೆಯಿಂದ ರಚಿತವಾಗುವ ಜನಲೋಕ್‌ಪಾಲ್ ಸಮಿತಿಯೇ ಅತ್ಯಂತ ಅಪ್ರಜಾತಾಂತ್ರಿಕವಾಗಿ ಆಯ್ಕೆಯಾಗುವ ಪ್ರಕ್ರಿಯೆಯನ್ನು ಹೊಂದಿದೆ. ಉದಾಹರಣೆಗೆ, ಈ ಹೋರಾಟದ ಫಲವಾಗಿ ಜನಲೋಖ್‌ಪಾಲ್ ಮಸೂದೆಯ ಕರಡನ್ನು ರಚಿಸಲು ರೂಪಿಸಲಾದ ಸಮಿತಿಯನ್ನೇ ತೆಗೆದುಕೊಳ್ಳಿ. ಅದರಲ್ಲಿ ಶಾಂತಿಭೂಷಣ್ ಮತ್ತು ಪ್ರಶಾಂತ್ ಭೂಷಣ್‌ರಂತಹ ಜನಪರ ವಕೀಲರು ಇರುವುದು ನಿಜವಾದರೂ ಇದರ ಬಗ್ಗೆ ಸರಕಾರ ಹೊರಡಿಸಿ ಗಜೆಟ್ಟಿನಲ್ಲಿ ''ಅಣ್ಣಾ ಹಜಾರೆಯವರು'' ಸೂಚಿಸುವ ಐದು ಜನರನ್ನು ಒಳಗೊಂಡ ಸಮಿತಿ ಎಂದೇ ಆದೇಶಿಸಲಾಗಿದೆ.

ಇದು ಮತ್ತೆ ವ್ಯಕ್ತಿಗಳನ್ನು- ಅದರಲ್ಲೂ ಜನತೆಗೆ ನೇರವಾಗಿ ಜವಾಬುದಾರರಾಗಿರುವಂತಹ ವ್ಯವಸ್ಥೆಯೊಳಗೆ ಇದರ ವ್ಯಕ್ತಿಗಳನ್ನು- ಈ ದೇಶದ ಒಟ್ಟು ಜನಾಭಿಪ್ರಾಯದ ಸಾಂದ್ರರೂಪವಾಗಿರಬೇಕಾದ ಸರಕಾರಕ್ಕಿಂತಲೂ ದೊಡ್ಡ ಸ್ಥಾನದಲ್ಲಿರಿಸುತ್ತದೆ. ಇದು ತತ್ಕಾಲದಲ್ಲಿ ಆಳುವ ಕಾಂಗ್ರೆಸ್, ವಿರೋಧಿ ಬಿಜೆಪಿಗಳಿಗೆ ಒಂದಷ್ಟು ಲಾಭ ತಂದುಕೊಡಬಹುದಾದರೂ ದೀರ್ಘಕಾಲದಲ್ಲಿ ಇದು ಪ್ರಜಾತಂತ್ರಕ್ಕೆ ಅತ್ಯಂತ ಅಪಾಯಕಾರಿಯಾಗಿರುತ್ತದೆ. ಅಂಬೇಡ್ಕರ್ ಅವರು ಎಚ್ಚರಿಸಿದ್ದೂ ಇಂತಹದ್ದರ ಬಗ್ಗೆಯೇ. ''ಯಾರೊಬ್ಬ ವ್ಯಕ್ತಿಯನ್ನು ಮಹಾತ್ಮ ಮಾಡುವುದು ಜನತೆಯನ್ನು ದೀನರನ್ನಾಗಿಸುವ ಮತ್ತೊಂದು ರೂಪ'' ಎಂದಿದ್ದರು ಅಂಬೇಡ್ಕರ್.

**ಬುದ್ಧಿಜೀವಿಗಳಿಗೇಕೆ ಕಿರೀಟ?**

ಲೋಕ್‌ಪಾಲ್ ಸದಸ್ಯರ ಆಯ್ಕೆಯ ಕುರಿತು ಹಜಾರೆ ಅವರ ತಂಡ ಮಾಡಿರುವ ಪ್ರಸ್ತಾಪಗಳೂ ಅಪಾಯಕಾರಿಯಾಗಿವೆ. ಅವರ ಪ್ರಕಾರ ಈ ದೇಶದ ಬುದ್ಧಿಜೀವಿಗಳು, ಜ್ಞಾನಪೀಠ ಪ್ರಶಸ್ತಿ ವಿಜೇತರು, ಭಾರತೀಯ ಸಂಜಾತ ನೊಬೆಲ್ ಪ್ರಶಸ್ತಿ ವಿಜೇತರೂ ಎಲ್ಲರೂ ಸೇರಿಕೊಂಡು ಲೋಕ್‌ಪಾಲ್ ಸದಸ್ಯರನ್ನು ಆಯ್ಕೆ ಮಾಡಬಹುದು.

ಆದರೆ ನೊಬೆಲ್ ಪ್ರಶಸ್ತಿ ವಿಜೇತರು, ಜ್ಞಾನಪೀಠಿಗಳು ಹಾಗೂ ಯಾವುದೋ ನಿರ್ದಿಷ್ಟ ಕ್ಷೇತ್ರದಲ್ಲಿ ನಿಪುಣರಾದ ಬುದ್ಧಿಜೀವಿಗಳು ಜನರ ಬದುಕನ್ನು ಪ್ರಭಾವಿಸುವ ಭ್ರಷ್ಟಾಚಾರದ ನಿಗ್ರಹದ ಬಗ್ಗೆ ಪರಿಣಿತ ಸಲಹೆ ಕೊಡುತ್ತಾರೆಂಬ ತಿಳುವಳಿಕೆಯೇ ಹಾಸ್ಯಾಸ್ಪದವಾದದ್ದು. ಹಾಗೆಯೇ ಅಪಾಯಕಾರಿಯಾದದ್ದು ಕೂಡ. ಈ ಪ್ರಸ್ತಾಪದ ಹಿಂದಿರುವ ಮನೋಭಾವ ಅತ್ಯಂತ

# ಆಂದೋಲನವನ್ನು ಹೈಜಾಕ್ ಮಾಡಿದ ಚೆಡ್ಡಿಗಳು

ಅಣ್ಣಾ ಹಜಾರೆ ನೇತೃತ್ವದಲ್ಲಿ ನಡೆದ ಭ್ರಷ್ಟಾಚಾರ ವಿರೋಧೀ ಆಂದೋಲನವನ್ನು ಸಂಘಪರಿವಾರ ಹೈಜಾಕ್ ಮಾಡಿದ್ದು ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಸಂಘಪರಿವಾರ ತನಗೆ ಅಂಟಿರುವ ಕೋಮುವಾದಿ ಹಣೆಪಟ್ಟಿಯನ್ನು ಜನರ ಮನಸ್ಸಿನಿಂದ ಮರೆಮಾಚಲು ಇತ್ತೀಚೆಗೆ ಬಹಳಷ್ಟು ಪ್ರಯತ್ನಗಳನ್ನು ಮಾಡುತ್ತಿತ್ತು. ಆ ನಿಟ್ಟಿನಲ್ಲಿಯೇ ಬಿಜೆಪಿಯ ಇತ್ತೀಚಿನ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರದ ವಿರುದ್ಧ ದೊಡ್ಡ ಮಟ್ಟದಲ್ಲಿ ಪ್ರಚಾರಾಂದೋಲನವನ್ನು ಮಾಡಬೇಕೆಂದು ನಿರ್ಣಯ ಮಾಡಲಾಗಿತ್ತು. ಹಾಗೆಯೇ ಬೆಂಗಳೂರಿನಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಎಂಬ ಮರಿಚೆಡ್ಡಿಗಳ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲೂ ಮತ್ತು ಪುತ್ತೂರಿನಲ್ಲಿ ನಡೆದ ದೊಡ್ಡಚೆಡ್ಡಿಗಳ ಆರೆಸ್ಸಿಸಿನ ಕಾರ್ಯಕಾರಿಣಿಯಲ್ಲೂ ಇಂತಹದ್ದೇ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು.

ಅದಕ್ಕೆ ಸರಿಯಾಗಿ ಹಜಾರೆಯವರು ಲೋಕ್‌ಪಾಲ್ ಮಸೂದೆಯ ಬಗ್ಗೆ ಪ್ರಾರಂಭಿಸಿದ ಹೋರಾಟವು ಚೆಡ್ಡಿಗಳಿಗೆ ಒಂದು ದೊಡ್ಡ ಅವಕಾಶವನ್ನು ಕಲ್ಪಿಸಿತು. ಚೆಡ್ಡಿಗಳು ಹಲವಾರು ವೇಶಗಳಲ್ಲಿ ಈ ಆಂದೋಲನದೊಳಗೆ ನುಸುಳಿದರು. ತಮಗೆ ಅಂಟಿರುವ ಕಳಂಕವನ್ನು ಮುಚ್ಚಿಹಾಕಲು ಚೆಡ್ಡಿಗಳು ಹೀಗೆ ದೊಡ್ಡ ಸಂಗ್ರಾಮಗಳನ್ನು ಬಳಸಿಕೊಂಡಿರುವುದು ಇದೇ ಮೊದಲನೆ ಬಾರಿ ಅಲ್ಲ.

1948ರಲ್ಲಿ ಆರೆಸ್ಸೆಸ್ ಸಹಚರ ನಾಥೂರಾಮ್ ಗೋಡ್ಸೆ ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿದ ನಂತರ ನಿಷೇಧಕ್ಕೊಳಪಟ್ಟಿದ್ದ ಆರೆಸ್ಸೆಸ್ ಪ್ರಧಾನಧಾರೆ ರಾಜಕಾರಣದ ಅಂಚಿಗೆ ಸರಿದಿತ್ತು. ಅದು ಮತ್ತೆ ದೊಡ್ಡ ಮಟ್ಟದಲ್ಲಿ ರಾಜಕಾರಣವನ್ನು ಪ್ರವೇಶ ಮಾಡಿದ್ದು ಜಯಪ್ರಕಾಶ್ ನಾರಾಯಣರ ಕಾಂಗ್ರೆಸ್ ವಿರೋಧೀ- ಭ್ರಷ್ಟಾಚಾರ ವಿರೋಧೀ ಹೋರಾಟದ ಮೂಲಕ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಂದೂ ಭಾಗವಹಿಸದಿದ್ದ ಚೆಡ್ಡಿಗಳು ತಾವು ಮಹಾನ್ ದೇಶಭಕ್ತರು, ದೇಶರಕ್ಷಕರು ಎಂದು ತೋರಿಸಲು ಆಗ ದೊಡ್ಡ ಸಂಖ್ಯೆಯಲ್ಲಿ 1975ರ ಜಯಪ್ರಕಾಶ್‌ರ ಆಂದೋಲನದಲ್ಲಿ ಸೇರಿಕೊಂಡಿದ್ದರು. ಇದರ ವಿರುದ್ಧ ಹಲವರು ಪ್ರತಿಭಟಿಸಿದಾಗ ಖುದ್ದು ಜೆಪಿಯವರೇ ''ನೀವು ಆರೆಸ್ಸೆಸ್ಸನ್ನು ಫ್ಯಾಷಿಸ್ಟ್ ಎನ್ನುವುದಾದರೆ ನಾನೂ ಸಹ ಫ್ಯಾಷಿಸ್ಟೇ'' ಎಂದು ಘೋಷಿಸುವಷ್ಟು ಅಜ್ಞಾನವನ್ನು ಮೆರೆದಿದ್ದರು. ಆ ಮೂಲಕ ಕೋಮುವಾದಿ, ನರಹಂತಕ, ದೇಶ ವಿಭಜಕ ಸಂಘಪರಿವಾರಿಗಳ ಕುತಂತ್ರಕ್ಕೆ ಜೆಪಿಯವರು 'ಭ್ರಷ್ಟಚಾರ ವಿರೋಧೀ ಮಖಮಲ್ ಮುಸುಕ'ನ್ನು ಹೊದಿಸಿಬಿಟ್ಟರು.

ಹಾಗೆ ಮತ್ತೊಮ್ಮೆ ಪ್ರಧಾನಧಾರೆ ರಾಜಕಾರಣವನ್ನು ಪ್ರವೇಶಿಸಿದ ಚೆಡ್ಡಿಗಳು ಆಗಿನ ಜನಸಂಘ ಹಾಗೂ ಈಗಿನ ಭಾರತೀಯ ಜನತಾ ಪಕ್ಷದ ರೂಪದಲ್ಲಿ ಬೆಳೆದು ನಿಂತಿರುವ ಪರಿ ನಮ್ಮ ಮುಂದಿದೆ. ವಾಸ್ತವವಾಗಿ ಬಿಜೆಪಿ ಯಾವ ರೀತಿಯಲ್ಲೂ ಕಾಂಗ್ರೆಸ್‌ಗಿಂತ ಕಮ್ಮಿ ಭ್ರಷ್ಟವೇನಲ್ಲ ಎಂಬುದನ್ನೂ ಜನ ಕಂಡಿದ್ದಾರೆ.

ತಮ್ಮ ಆಂದೋಲನದಿಂದ ಚೆಡ್ಡಿಗಳು ಹೀಗೆ ಲಾಭ ಪಡೆದುಕೊಳ್ಳಬಾರದೆಂದು ಹಜಾರೆಯವರಿಗೆ ವಿಶೇಷ ವಿರೋಧವೇನೂ ಇರಲಿಲ್ಲ. ಇದಕ್ಕೆ ಕಾರಣ ಹಜಾರೆಯವರು ಬಿಜೆಪಿ ಪರ ಎಂಬುದಲ್ಲದೇ ಇರಬಹುದು. ಕಾಂಗ್ರೆಸ್ ಪಕ್ಷ ಅಸಹನೀಯವಾಗುವಷ್ಟು ಭ್ರಷ್ಟಚಾರ ನಡೆಸುತ್ತಿದೆ ಎಂಬುದೇ ಆಗಿರಬಹುದು. ಆದರೆ ಇದೆಲ್ಲದರ ಪ್ರತಿಫಲವಾಗಿ ಬಿಜೆಪಿ ತಾನೂ ಸಹ ಅಷ್ಟೇ ಭ್ರಷ್ಟ ಎಂಬುದನ್ನು ಯಶಸ್ವಿಯಾಗಿ ಮರೆಮಾಚಿದೆ!

ಚೆಡ್ಡಿಗಳ ಇಂತಹ ಕುತಂತ್ರವನ್ನು ಕಾಣಬಲ್ಲಷ್ಟು ರಾಜಕೀಯ ಗ್ರಹಿಕೆ ಈ ಚಳವಳಿಗೆ ಇರಲೇ ಇಲ್ಲ. ಅಲ್ಲದೇ, ಕಾಂಗ್ರೆಸ್‌ನ ಭ್ರಷ್ಟಾಚಾರದಿಂದ ಬೇಸತ್ತ ಜನತೆಗೆ ಒಂದು ವೇದಿಕೆಯೂ ಬೇಕಿತ್ತು. ಹೀಗೆ ಒಂದೇ ಕಲ್ಲಿನಲ್ಲಿ ಹಲವು ಹಕ್ಕಿಗಳನ್ನು ಹೊಡೆದ ಬಿಜೆಪಿ ಮತ್ತು ಸಂಘಪರಿವಾರ ಭ್ರಷ್ಟಾಚಾರದ ವ್ಯಾಖ್ಯಾನವು ಸಂಪೂರ್ಣವಾಗಿ ಕೇವಲ ಕಾಂಗ್ರೆಸ್ ವಿರೋಧಿಯಾಗುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಭ್ರಷ್ಟಾಚಾರ ವಿರೋಧಿ ಹೋರಾಟದ ಪ್ರಮುಖ ದಾಳಿ ಕಾಂಗ್ರೆಸ್ ಆಗಲೇಬೇಕು. ಆದರೆ ಬಿಜೆಪಿ ಅದಕ್ಕೆ ಕಮ್ಮಿಯೇನಲ್ಲ.

'ಇತಿಹಾಸ ಮತ್ತೊಮ್ಮೆ ಮರುಕಳಿಸಿದಾಗ ಅದು ಮೋಸದಿಂದ ಕೂಡಿರುತ್ತದೆ' ಎಂಬ ಹೇಳಿಕೆ ಇದೆ. ಅದನ್ನು ಬಿಜೆಪಿಯ ವಿಷಯದಲ್ಲಿ 'ಮೊದಲ ಬಾರಿ ಮೋಸ, ಎರಡನೇ ಬಾರಿ ಮರುಕಳಿಸಿದರೆ ದ್ರೋಹ' ಎಂದು ಬದಲಿಸಿಕೊಳ್ಳಬಹುದೇನೋ?'

## 10ವರ್ಷಗಳ ಸತ್ಯಾಗ್ರಹವೂ, ನಾಲ್ಕು ದಿನಗಳ ಪೊಳ್ಳು ಕ್ರಾಂತಿಯೂ

ಇದೇ ಭಾರತದಲ್ಲಿ ಇರೋಮ್ ಶರ್ಮಿಳಾ ಎಂಬ ಮಣಿಪುರದ ಧೀರೋದಾತ್ತ ಮಹಿಳೆ ತನ್ನ ಜನರ ಮೇಲೆ ಭಾರತದ ಸೈನಿಕರು ಯಾರೂ ಕಂಡು ಕೇಳರಿದಂತಹ ಹಿಂಸಾತ್ಮಕ ಅತ್ಯಾಚಾರ ನಡೆಸಲು ಅನುವು ಮಾಡಿಕೊಡುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆಯನ್ನು ರದ್ದುಗೊಳಿಸಬೇಕೆಂದು ಕಳೆದ 10 ವರ್ಷಗಳಿಂದ ಅತ್ಯಂತ ಕರುಣಾಜನಕವಾದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಆದರೆ ಆಕೆಯ ಈ ಒಂದು ದಶಕದ ಉಪವಾಸ ಸತ್ಯಾಗ್ರಹಕ್ಕೆ ಸರಕಾರವಾಗಲೀ, ನಾಗರಿಕ ಸಮಾಜವಾಗಲೀ ಸ್ಪಂದಿಸಿಲ್ಲ. ಈಗಲೂ ಆಕೆಯ ಹೋರಾಟ ಮುಂದುವರಿದೇ ಇದೆ. ಆದರೆ 10 ವರ್ಷವಿರಲಿ, 10 ದಿನಗಳ ಕಾಲವೂ ನಡೆಯದ ಭ್ರಷ್ಟಚಾರ ವಿರೋಧಿ ಉಪವಾಸ ಸತ್ಯಾಗ್ರಹಕ್ಕೆ ಈ ದೇಶದ ಮೇಲ್‌ಮಧ್ಯಮ ವರ್ಗ ಸ್ಪಂದಿಸಿತು. ತನ್ನ ಬೆಂಬಲವನ್ನು ನೀಡಿತು. ಅಷ್ಟು ಸಾಲದೆಂಬಂತೆ ಭ್ರಷ್ಟ ವ್ಯವಸ್ಥೆಯ ಭಾಗವಾಗಿರುವ ದೊಡ್ಡ ಉದ್ದಿಮೆಪತಿಗಳೂ ಸಹ ಈ ಸತ್ಯಾಗ್ರಹದೊಂದಿಗೆ ಕೈಜೋಡಿಸಿದರು. ಕೊನೆಗೆ ಕೇಂದ್ರ ಸರಕಾರ ಕೂಡ 'ಹೋರಾಟಗಾರರ ಆಗ್ರಹಕ್ಕೆ ಮಣಿದುಬಿಟ್ಟಿತು'.

ಇತ್ತ ಹಜಾರೆ ಅವರು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದ ಕೂಡಲೇ ಜನ ವಿಜಯೋತ್ಸವವನ್ನು ಆಚರಿಸಲಾರಂಭಿಸಿದರು. ಅತ್ತ ದೂರದ ಮಣಿಪುರದಲ್ಲಿ ಇರೋಮ್ ಶರ್ಮಿಳಾ ಇವತ್ತಿಗೂ ತನ್ನ ಉಪವಾಸವನ್ನು ಮುಂದುವರಿಸಿದ್ದಾಳೆ. ಇದೆಂತಹ ವ್ಯಂಗ್ಯ? ಇದೆಂತಹ ದೇಶ?

ಶತ್ರುಗಳೇ ಈ ಹೋರಾಟದ ಭಾಗವಾದ್ದರಿಂದ ಇದೊಂದು ಹುಸಿ ಸಮರವೆಂದೇ ಹೇಳಬೇಕು! ಹಾಗೆಯೇ ಜನರದ್ದೂ ಒಂದು ಹುಸಿ ವಿಜಯ !

ಆಕ್ಷೇಪಣೀಯವಾದದ್ದು. ಯಾಕೆಂದರೆ ಇದು ಒಂದು ರೀತಿಯಲ್ಲಿ ಸಾಮಾನ್ಯ ಜನರ ವಿವೇಕವನ್ನೂ, ಜನತಂತ್ರವನ್ನೂ ಮತ್ತು ದೇಶದ ಆಗುಹೋಗುಗಳಲ್ಲಿ ಅವಿದ್ಯಾವಂತರ ಪಾತ್ರವನ್ನು ಅನುಮಾನದಿಂದಲೇ ನೋಡುತ್ತದೆ. ಮಾತ್ರವಲ್ಲ, ಇದು ಆಳದಲ್ಲಿ ಪ್ರಜಾತಂತ್ರ ವಿರೋಧಿ ಶೋಷಕ ವರ್ಗಗಳ ತಿಳುವಳಿಕೆಯೇ ಆಗಿದೆ.

### ಪ್ರಾಮಾಣಿಕ ಕುದುರೆ ಮೇಲೆ ಭ್ರಷ್ಟರ ಸವಾರಿ

ಹಜಾರೆಯವರ ನೈತಿಕತೆಯನ್ನಾಗಲೀ, ಬದ್ಧತೆಯನ್ನಾಗಲೀ ಅನುಮಾನಿಸುವ ಪ್ರಯತ್ನವಲ್ಲ. ಬದಲಾಗಿ ನೈತಿಕತೆಯ ಜೊತೆ ಜೊತೆಗೆ ಜನಪರ ರಾಜಕೀಯ ಮತ್ತು ಆರ್ಥಿಕ ಚಿಂತನೆಗಳಿಲ್ಲದಿದ್ದರೆ ಹೇಗೆ ಅತ್ಯಂತ ಪ್ರಾಮಾಣಿಕರನ್ನೂ ಮೋದಿ, ರಾಜೀವ್ ಚಂದ್ರಶೇಖರ್, ಬಜಾಜ್ ತರಹದವರು ಸವಾರಿ ಮಾಡುವ ಕುದುರೆಗಳನ್ನಾಗಿಸಿಬಿಡುತ್ತಾರೆ ಎಂಬುದಕ್ಕೆ ಒಂದು ಉದಾಹರಣೆಯಷ್ಟೇ. ಇನ್ನು ಬಿಜೆಪಿಯಂತೂ ಅಣ್ಣಾ ಹಜಾರೆಯವರ ಆಂದೋಲದಿಂದ ಅತಿ ಹೆಚ್ಚು ರಾಜಕೀಯ ಲಾಭ ಪಡೆದಿದೆ. 1999ರಲ್ಲಿ ಕೇಂದ್ರದಲ್ಲಿ ಅಧಿಕಾರ ಪಡೆದ ಬಿಜೆಪಿ ತಾನೂ ಸಹ ಕಾಂಗ್ರೆಸ್‌ನಷ್ಟೇ ಭ್ರಷ್ಟ ಮಾತ್ರವಲ್ಲ, ಜನವಿರೋಧಿ ಸಹ ಎಂದು ಸಾಬೀತು ಮಾಡಿದ ನಂತರ ಕಳೆದ ಎರಡು ಚುನಾವಣೆಗಳಿಂದ ಅಧಿಕಾರದಿಂದ ದೂರ ಉಳಿದಿದೆ. ಹೀಗಾಗಿ ಮತ್ತೆ ತನ್ನ ರಾಜಕೀಯ ಮೆರುಗನ್ನು ಪಡೆದುಕೊಳ್ಳಲು ಈ ಕಾಂಗ್ರೆಸ್‌ನ ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಸೇರಿಕೊಂಡಿದೆ. ತಮಗೆ ಅರಿವಿಲ್ಲದಂತೆ ಬಿಜೆಪಿಗಳ ಕುತಂತ್ರಕ್ಕೆ ಹಜಾರೆಯವರು ಕುದುರೆಯಾಗಿ ಪರಿವರ್ತಿರಾಗಿದ್ದಾರೆ.

ಔಷಧಿಯೇ ರೋಗಕ್ಕಿಂತ ಅಪಾಯಕಾರಿಯಾಗಿ ಬಿಡುವ ಸನ್ನಿವೇಶ ಇದೀಗ ಪ್ರಜಾತಂತ್ರದ್ದು. ಅಭಿವೃದ್ಧಿಯ ಹೆಸರಲ್ಲಿ ಈ ದೇಶದಲ್ಲಿ ಗಟ್ಟಿಗೊಳ್ಳುತ್ತಿರುವ ಪರಾವಲಂಬಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೇ ಭ್ರಷ್ಟಾಚಾರದ ಮೂಲ ಅಡಗಿದೆ. ಈ ಪಾಪದಲ್ಲಿ ಕಾಂಗ್ರೆಸ್, ಬಿಜೆಪಿ ಎಲ್ಲ ಪಕ್ಷಗಳಿಗೂ ಸರಿಸಮಾನ ಪಾಲಿದೆ. ಭ್ರಷ್ಟಾಚಾರ ವ್ಯವಸ್ಥಾಗತವಾಗಿರುವಾಗ ಅದನ್ನು ವೈಯಕ್ತಿಕ ನೆಲೆಯಲ್ಲಿ ಹುಡುಕುವುದು, ವ್ಯಕ್ತಿಗತ ನೆಲೆಯಲ್ಲಿ ಪರಿಹಾರ ಹುಡುಕುವುದು, ಭ್ರಷ್ಟಾಚಾರವನ್ನು ಹುಟ್ಟುಹಾಕುವ ಬುನಾದಿಯನ್ನು ಭದ್ರಪಡಿಸಿಕೊಂಡು ಅದರ ಅಭಿವ್ಯಕ್ತಿಯನ್ನು ಮಾತ್ರ ಕಠಿಣವಾಗಿ ದಂಡಿಸುವುದು, ಅದನ್ನೇ ಸಾಧನೆಯೆಂದು ಭ್ರಮಿಸುವುದು, ಎಲ್ಲವೂ ಪ್ರಜಾತಂತ್ರದ ಕ್ರೂರ ಪ್ರಹಸನದಂತೆ ಕಾಣುತ್ತದೆ.

ಭ್ರಷ್ಟಾಚಾರದ ಗಂಗೋತ್ರಿಯಾಗಿರುವ ನಮ್ಮ ವ್ಯವಸ್ಥೆಯನ್ನು ಜನರ ಪ್ರಜ್ಞಾಪೂರ್ವಕ ಭಾಗವಹಿಸುವಿಕೆ ಮತ್ತು ಸಮರಶೀಲ ಚಳವಳಿಯ ಮೂಲಕ ಬದಲಿಸಿದರೆ ಮಾತ್ರ ಭ್ರಷ್ಟಾಚಾರ ನಿಲ್ಲುತ್ತದೆ. ಈ ಅರಿವು ಜನರಲ್ಲಿ ಮೊದಲು ಮೂಡಬೇಕಿದೆ.

# ಅಲ್ಪಸಂಖ್ಯಾತರ ಮುಸ್ಲಿಂ ಮಹಿಳಾ ಮತ್ತು ಹೆಣ್ಣು ಮಕ್ಕಳಿಗೆ
# ಆರೋಗ್ಯ ಪರಿಹಾರ ನಿಧಿ ಯೋಜನೆ
# ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದ ವತಿಯಿಂದ

ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ ಎಮ್.ಎಸ್.ಡಬ್ಲ್ಯು 59 ಡಬ್ಲ್ಯು.ಎಫ್.ಡಬ್ಲ್ಯು 2009 ಬೆಂಗಳೂರು, 1-8-2009ರ ಅನ್ವಯ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಕಿಡ್ನಿ, ಹೃದಯ, ಕ್ಯಾನ್ಸರ್, ಮೆದುಳು ಜ್ವರ, ಟಿ.ಬಿ ಮುಂತಾದ ಕಾಯಿಲೆಗಳಿಗೆ ರೂ 5,000/-ದಿಂದ ರೂ 1,00,000/- ದವರೆಗೆ ಚಿಕಿತ್ಸಾ ಪರಿಹಾರನಿಧಿ ನೀಡಲಾಗುತ್ತದೆ. ಅರ್ಜಿದಾರರುಗಳ ವಾರ್ಷಿಕ ವರಮಾನ ರೂ 1 ಲಕ್ಷದ 20 ಸಾವಿರದ ಒಳಗಿರತಕ್ಕದ್ದು. ಚಿಕಿತ್ಸಾ ಪರಿಹಾರದ ಮೊತ್ತವನ್ನು ನೇರವಾಗಿ ಸಂಬಂಧಿಸಿದ ಆಸ್ಪತ್ರೆಗಳಿಗೆ ಕಳುಹಿಸುವ ವ್ಯವಸ್ಥೆಯಿದೆ. ಪ್ರಕರಣದ ಮೂರು ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು. ವಿಶೇಷ ಸಂದರ್ಭಗಳಲ್ಲಿ ಅರ್ಜಿದಾರರಿಗೆ ನೇರವಾಗಿ ಚೆಕ್ ಮುಖೇನ ಹಣ ಕಳುಹಿಸುವ ವ್ಯವಸ್ಥೆಯಿದೆ.

**ಸಲ್ಲಿಸಬೇಕಾದ ದಾಖಲೆಗಳು :**

- ಆದಾಯ ಪ್ರಮಾಣ ಪತ್ರದ ಮೂಲ ಪ್ರತಿ
- ಡಾಕ್ಟರ್ ಸರ್ಟಿಫಿಕೇಟ್‌ನ ಮೂಲ ಪ್ರತಿ
- ಆಸ್ಪತ್ರೆಯಿಂದ ಅಂದಾಜು ವೆಚ್ಚ (ಎಸ್ಟಿಮೇಟ್)
- ಪಾವತಿಸಿದ ಬಿಲ್‌ನ ಮೂಲ ಪ್ರತಿ
- ರೇಶನ್ ಕಾರ್ಡ್ ಜೆರಾಕ್ಸ್

---

## ಸರಕಾರಿ ಹುದ್ದೆ ಪಡೆಯಲು ಸುವರ್ಣಾವಕಾಶ
## ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ

3091 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (Armed Police Constable)
ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದರಲ್ಲಿ 122 ಹುದ್ದೆಗಳು ಮುಸ್ಲಿಮರಿಗೆ ಮೀಸಲು.

## ಜಿಲ್ಲಾವಾರು ನೇಮಕಾತಿ ವಿವರ

ದ.ಕ -56, ಉಡುಪಿ-56, ಕೊಡಗು-62, ಮೈಸೂರು-83, ಬೆಂಗಳೂರು ನಗರ-960, ಮೈಸೂರು ನಗರ-36, ಚಿಕ್ಕಮಂಗಳೂರು-59, ಶಿವಮೊಗ್ಗ-70, ಉತ್ತರ ಕನ್ನಡ-138

ಅರ್ಹತೆ: ಕನಿಷ್ಠ ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ, ಎತ್ತರ-168 ಸೆಂ.ಮೀ, ಎದೆ ಸುತ್ತಳತೆ-86 ಸೆಂ.ಮೀ,
ವಯಸ್ಸು: ಕನಿಷ್ಠ 18 ವರ್ಷ, ಗರಿಷ್ಠ: SC,ST,CAT-1,2A,2B,3A,3B- 27 ವರ್ಷ, ಇತರೆ: 25 ವರ್ಷ
ಅರ್ಜಿಯನ್ನು ಆನ್‌ಲೈನ್ ಮುಖಾಂತರ ಅಥವಾ ಮುದ್ರಿತ ಅರ್ಜಿಯನ್ನು ಎಸ್.ಪಿ ಕಛೇರಿಯಲ್ಲಿ ಪಡೆದು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05.05.2011

ಹೆಚ್ಚಿನ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿರಿ

## ಟ್ಯಾಲೆಂಟ್ ರಿಸರ್ಚ್ & ಫೌಂಡೇಶನ್ (ರಿ) ಮಂಗಳೂರು

ವಿಶ್ವಾಸ್ ಕ್ರೌನ್, ಮಿನ್ನ ಆಸ್ಪತ್ರೆ ಎದುರು, ಕಂಕನಾಡಿ ಫೋನ್-0824-4267883, 9844773906, 9972283365

# ತಮ್ಮನ ಆದರ್ಶ

ಇಬ್ಬರು ಅಣ್ಣ ತಮ್ಮಂದರಿಗೆ ಚಿಲ್ಲರೆ ಖರ್ಚಿಗಾಗಿ ದಿನಾ ಮನೆಯಲ್ಲಿ ಹಣವು ದೊರೆಯುತ್ತಿತ್ತು. ತಮ್ಮ ಆ ಹಣವನ್ನು ಒಂದು ದಿನ ಖರ್ಚು ಮಾಡುತ್ತಿದ್ದ. ಮತ್ತೊಂದು ದಿನ ಮದ್ರಸದಲ್ಲಿ ಬಡ ಮಕ್ಕಳ ಸಹಾಯಾರ್ಥವಾಗಿ ಇಡಲಾಗಿದ್ದ ಡಬ್ಬಿಯೊಂದಕ್ಕೆ ಹಾಕುತ್ತಿದ್ದ.



ಆದರೆ ಅಣ್ಣ ತರಗತಿಯ ವಿರಾಮದ ಸಂದರ್ಭದಲ್ಲಿ ಮದ್ರಸದ ಸಮೀಪದಲ್ಲಿದ್ದ ಅಂಗಡಿಯೊಂದಕ್ಕೆ ಹಾಜರಾಗುತ್ತಿದ್ದ. ಆ ಅಂಗಡಿಯಲ್ಲಿ ರಂಗು ರಂಗಿನ ತಿನಿಸುಗಳು ದೊರೆಯುತ್ತಿದ್ದವು. ಕೆಲವು ದಿನ ಈತ ಹೀಗೆ ದಿನ ದೂಡಿದ. ಒಂದು ದಿನ ಲಡ್ಡು ತಂದರೆ, ಮರುದಿನ ಪೇಡಾ, ಇಂದು ಜಿಲೇಬಿ ತಂದರೆ ನಾಳೆ ಪೇಡಾ ಹೀಗೆ ದಿನಾ ಒಂದೊಂದು ತಿನಿಸುಗಳನ್ನು ಕೊಂಡುಕೊಳ್ಳುತ್ತಿದ್ದ. ಹೀಗೆ ಈ ಚಟ ಹತ್ತಿಸಿಕೊಂಡ ಈತ ತನ್ನಲ್ಲಿರುವ ಹಣ ಖಾಲಿಯಾದಾಗ ಅಂಗಡಿಯವನಲ್ಲಿ ಸಾಲ ಮಾಡಲು ಪ್ರಾರಂಭಿಸಿದ.

ಇದರಿಂದಾಗಿ ದಿನವೂ 2 ರೂ. ಸಾಲ ಆತನ ಹೆಗಲಿಗೆ ಹತ್ತಿಸಿಕೊಳ್ಳುತ್ತಿದ್ದ. ಕೊನೆಗೊಮ್ಮೆ ಅಂಗಡಿಯಾತ ಹಣ ಕೇಳಲು ಪ್ರಾರಂಭಿಸಿದಾಗ ಆತ ಹೆದರಿದ. ಏಕೆಂದರೆ ಆತನ ಹೆತ್ತವರ ಆದಾಯ ಕಡಿಮೆಯಾಗಿತ್ತು. ಸಾಲ ಮಾಡಿದ ವಿಷಯ ಅವರಿಗೆ ತಿಳಿದರೆ ನಾಳೆಯಿಂದ ಖರ್ಚಿಗೆ ಹಣವೂ ಸಿಗುವುದಿಲ್ಲ. ಮಾತ್ರವಲ್ಲ ಏಟು ತಿನ್ನಬೇಕಾಗಬಹುದು ಎಂಬ ಭಯ ಆತನಲ್ಲಿತ್ತು.

ಅಂಗಡಿಯಾತ ಈತನ ಪುಸ್ತಕದ ಚೀಲವನ್ನು ತೆಗೆದಿಟ್ಟ. ಸಾಲ ಪಾವತಿಸಿದರೆ ಮಾತ್ರ ಈ ಚೀಲವನ್ನು ಹಿಂದಿರುಗಿಸುವುದಾಗಿ ಬೆದರಿಸಿದ. ಪುಸ್ತಕವಿಲ್ಲದೆ ಈತ ತರಗತಿಗೂ ಚಕ್ಕರ್ ಹಾಕಬೇಕಾಯಿತು.

ಈ ವಿಷಯ ತಮ್ಮನಿಗೆ ತಿಳಿಯಿತು. ಮೊದಲು ಆತ ಅಣ್ಣನಿಗೆ ಬುದ್ಧಿ ಹೇಳಿದ. ಬಳಿಕ ಅಂಗಡಿಗೆ ಹೋಗಿ ಅಂಗಡಿಯವನಲ್ಲಿ ಅಣ್ಣನ ಚೀಲವನ್ನು ಹಿಂದಿರುಗಿಸು. ತಾನು ದಿನಾ 2 ರೂ. ಗಳನ್ನು ನೀಡಿ ಸಾಲವನ್ನು ತೀರಿಸುತ್ತೇನೆ ಎಂದು ವಿನಂತಿಸಿದ.

ಹೀಗೆ ಅಂಗಡಿಯವ ಚೀಲವನ್ನು ಹಿಂದಿರುಗಿಸಿದ. ಮರುದಿನದಿಂದ ಅಣ್ಣ ತಮ್ಮಂದಿರಿಬ್ಬರು ತಮಗೆ ಮನೆಯಲ್ಲಿ ಸಿಗುತ್ತಿದ್ದ ಹಣದಿಂದ ಕೆಲವೇ ದಿನಗಳಲ್ಲಿ ಅಂಗಡಿಯವನ ಸಾಲ ತೀರಿಸಿದರು. ಅಣ್ಣನು ತಮ್ಮನಲ್ಲಿರುವ ಒಳ್ಳೆಯ ಗುಣಗಳನ್ನು ತನ್ನಲ್ಲೂ ಅಳವಡಿಸಿಕೊಂಡ.

## ಕ್ವಿಝ್ ಟೈಮ್-6: ಇತಿಹಾಸ, ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡಾಲೋಕ

1.ಯಾರ ಆಸ್ಥಾನಕ್ಕೆ ಚೀನಾದ ಯಾತ್ರಿಕ ಹ್ಯೂಯನ್‌ತ್ಸಾಂಗನು ಬಂದಿದ್ದನು?
2.ಯಾವ ವಾಸ್ತುವನ್ನು 'ಅಮೃತ ಶಿಲೆಯಲ್ಲಿ ಅರಳಿದ ಕಾವ್ಯ' ಎಂದು ಹೇಳುತ್ತಾರೆ?
3.ನೊಬೆಲ್ ಗಳಿಸಿದ 'ಗೀತಾಂಜಲಿ' ಕೃತಿ ಬರೆದವರಾರು?
4.ಅರಿಸ್ಟಾಟಲ್ ಒಬ್ಬ ಮಹಾನ್ ಆಡಳಿತಗಾರನ ಅಧ್ಯಾಪಕನಾಗಿದ್ದನು, ಆತ ಯಾರು?
5.ಭಾರತದ ಕೋಗಿಲೆ ಎಂದು ಯಾರಿಗೆ ಹೇಳುವರು?
6.ಹನ್ನೊಂದು ಆಸ್ಕರ್ ಪ್ರಶಸ್ತಿಗಳನ್ನು ಗಳಿಸಿದ ಟೈಟಾನಿಕ್ ಚಿತ್ರದ ನಿರ್ದೇಶಕ ಯಾರು?
7. ಮುದ್ರಣ ಯಂತ್ರ ಯಾರ ಶೋಧವಾಗಿದೆ?
8.ಹೊಲಿಗೆ ಯಂತ್ರವನ್ನು ಕಂಡು ಹಿಡಿದವರು ಯಾರು?
9.ಭಾರತದ ಯಾವ ಕ್ರಿಕೆಟ್ ಸ್ಟೇಡಿಯಂ ಅತಿ ಹೆಚ್ಚು ಕೂರುವ ಸಾಮರ್ಥ್ಯ ಉಳ್ಳದ್ದಾಗಿದೆ?
10.ಒಲಂಪಿಕ್ ಚಿನ್ನದ ಪದಕದಲ್ಲಿರುವ ಚಿನ್ನದ ಪ್ರಮಾಣ ಎಷ್ಟು?

ಉತ್ತರಗಳು: ಪುಟ ಸಂಖ್ಯೆ - 58ರಲ್ಲಿ

### ಫ್ರೆಂಡ್‌ಶಿಪ್

ಯಾರೊಬ್ಬರಿಗಾಗಿ ನೀ ಅಳಬೇಡ
ಅವರು ಯಾರೂ ನಿನ್ನ ಕಣ್ಣೀರಿಗೆ
ಯೋಗ್ಯರಲ್ಲ
ಯಾರು ನಿನ್ನ ಕಣ್ಣೀರಿಗೆ ಯೋಗ್ಯರೋ
ಅವರು ಖಂಡಿತ ನಿನ್ನನ್ನು ಅಳಲು ಬಿಡಲ್ಲ
ಇದುವೇ ಫ್ರೆಂಡ್‌ಶಿಪ್

ಅಬ್ದುಲ್ ನಾಸಿರ್, ಆಲಡ್ಕ

# ಬುದ್ಧಿ ಮತ್ತು ಬಲ

ಒಮ್ಮೆ ಒಬ್ಬ ಪೈಲ್ವಾನ ಮುಲ್ಲಾ ನಾಸಿರುದ್ದೀನರ ಮುಂದೆ ''500 ಕೆ.ಜಿ. ಭಾರದ ವಸ್ತುವನ್ನು ನಾನು ಒಂದು ಕೈಯಿಂದ ಸುಲಭವಾಗಿ ಎತ್ತಿಕೊಳ್ಳಬಲ್ಲೆ ಮತ್ತು ನಗರದ ಗೋಡೆಯ ಹೊರಗೆ ಎಸೆಯಬಲ್ಲೆ. ಬೇಕಾದರೆ ನೀವು ಪರೀಕ್ಷೆ ಮಾಡಬಹುದು'' ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದ.



ನಾಸಿರುದ್ದೀನರು ಮೆಲ್ಲನೆ ತನ್ನ ಜೇಬಿನಿಂದ ಕರವಸ್ತ್ರವನ್ನು ಹೊರತೆಗೆದು ಆತನ ಕೈಗೆ ತುರುಕಿಸುತ್ತಾ ''ನೋಡು ಇದರ ಭಾರ 5ಗ್ರಾಂ. ಕೂಡ ಇಲ್ಲ. ಮೊದಲು ನೀನು ಇದನ್ನು ಈ ಅಂಗಳದ ಗೋಡೆಯಿದೆಯಲ್ಲ. ಅದಾರಾಚೆ ಎಸೆದು ತೋರಿಸು''.

ಪೈಲ್ವಾನ ದರ್ಪದಿಂದ ಕರವಸ್ತ್ರವನ್ನು ತೆಗೆದುಕೊಂಡು ರಭಸದಿಂದ ಎಸೆದ. ಆದರೆ ಅದು ಕಾಲ ಬುಡದಲ್ಲೇ ಬಿತ್ತು. ಆತ ಹಲವು ಬಾರಿ ಹೊರಗೆಸೆಯುವ ಪ್ರಯತ್ನ ಮಾಡಿದ. ಆದರೆ ಅದು ಅಲ್ಲೇ ಬೀಳುತ್ತಿತ್ತು.

ಹೀಗೆ ಪ್ರಯತ್ನ ಮಾಡುತ್ತಾ ಸುಸ್ತಾಗಿ ಹೋದ. ಈಗ ನಗುವ ಸರದಿ ಮುಲ್ಲಾಜಿಯವರದಾಯಿತು. ''ಈಗ ನನ್ನ ಶಕ್ತಿ ನೋಡು. ನಾನು ಈ ಕರವಸ್ತ್ರದೊಡನೆ ಒಂದು ಕಲ್ಲನ್ನು ಕೂಡ ಅಂಗಳದ ಆ ಗೋಡೆಯ ಹೊರಗೆ ಎಸೆಯುತ್ತೇನೆ'' ಎಂದವರೇ ನೆಲದಿಂದ ಒಂದು ಕಲ್ಲನ್ನೆತ್ತಿಕೊಂಡು ಕರವಸ್ತ್ರದಲ್ಲಿ ಎತ್ತಿ ಗೋಡೆಯ ಹೊರಗೆಸೆದರು.

ಅಹಂಕಾರಿ ಪೈಲ್ವಾನ ನಾಚಿ ತಲೆತಗ್ಗಿಸಿದ.

ನಸೀರಾ, ಬನ್ನೂರು

## ಬರಿಗಣ್ಣಿಗೆ ಎಷ್ಟು ನಕ್ಷತ್ರಗಳು ಕಾಣಬಲ್ಲವು?

ಶುಭ್ರ ಆಕಾಶದ ಕತ್ತಲೆಯಲ್ಲಿ, ಬರಿಗಣ್ಣಿಗೆ ಸುಮಾರು ಎರಡು ಸಾವಿರ ನಕ್ಷತ್ರಗಳು ಕಾಣಿಸುತ್ತವೆ ಎಂದು ವಿಜ್ಞಾನಿಗಳು ಲೆಕ್ಕ ಹಾಕಿದ್ದಾರೆ.

ಆದರೆ ದೂರದರ್ಶಕಗಳ ಸಹಾಯದಿಂದ ಅನತಿ ದೂರದಲ್ಲಿರುವ ನಕ್ಷತ್ರಗಳ ಸಹಸ್ರಾರು ಪುಂಜಗಳನ್ನೇ ಕಾಣಬಹುದು. ಬರಿಗಣ್ಣಿಗೆ ಕಾಣಿಸದ ಕೋಟ್ಯಾವಧಿ ನಕ್ಷತ್ರಗಳನ್ನು ಇದರಿಂದ ಅಧ್ಯಯನ ಮಾಡಲು ಸಾಧ್ಯವಾಗಿದೆ.

ಬರಿಗಣ್ಣಿಗೆ ಕಾಣುವ ಅನೇಕ ನಕ್ಷತ್ರಗಳನ್ನು ನಮ್ಮ ಪೂರ್ವಜರು ಗುರುತಿಸದ್ದರಲ್ಲದೆ ಭೂಮಿಯ ಗಿರಕಿಗೆ ಸಂಬಂಧಿಸಿದಂತೆ ಅವುಗಳ ಬದಲಾಗುತ್ತಿರುವ ಸ್ಥಾನಗಳನ್ನೂ ಕಂಡುಕೊಂಡಿದ್ದಾರೆ. ಅನೇಕ ನಕ್ಷತ್ರಗಳು ಅನತಿ ದೂರದಲ್ಲಿದ್ದರೂ ಸ್ಥಿರವಾದ ಗುಂಪುಗಳಾಗಿ ಸರಿಯುವುದನ್ನು ಕಂಡು ಈ ನಕ್ಷತ್ರ ಪುಂಜಗಳಿಗೆ ಕಾಲ್ಪನಿಕ ಹೆಸರು ಕೊಟ್ಟರು. ಗುಂಪುಗಳಲ್ಲಿರುವ ಈ ನಕ್ಷತ್ರಗಳನ್ನು ಕಾಲ್ಪನಿಕ ರೇಖೆಗಳಿಂದ ಒಂದಕ್ಕೊಂದನ್ನು ಕೂಡಿಸಿದಾಗ ಮೂಡುವ ಚಿತ್ರವನ್ನು ಗಮನಿಸಿ ಇಂಥ ಹೆಸರುಗಳು ಬಂದಿವೆ.

ಎರಡು ಸಾವಿರ ವರ್ಷಕ್ಕೂ ಹಿಂದೆಯೇ ನಮ್ಮ ಪೂರ್ವಜರು ಇಂಥ 48 ನಕ್ಷತ್ರ ಪುಂಜಗಳನ್ನು ಗುರುತಿಸಿದ್ದರು. ಹದಿನಾರು, ಹದಿನೇಳನೆಯ ಶತಮಾನದಿಂದೀಚೆಗೆ ವಿಜ್ಞಾನಿಗಳು ಭೂಮಿಯ ಎಲ್ಲಾ ಭಾಗಗಳಿಂದ ಕಾಣುವ ನಕ್ಷತ್ರ ಪುಂಜಗಳನ್ನು ಗುರುತಿಸಿದ್ದು, ಜ್ಞಾನಿಕ ಒಮ್ಮತದಿಂದ 88 ನಕ್ಷತ್ರ ಪುಂಜಗಳನ್ನು ಗುರುತಿಸಲಾಗಿದೆ.

ವಿವಿಧ ದೇಶಗಳಲ್ಲಿ, ವಿವಿಧ ಜನಾಂಗಗಳು ನಕ್ಷತ್ರಗಳಿಗೆ, ನಕ್ಷತ್ರ ಪುಂಜಗಳಿಗೆ ತಮ್ಮ ಪರಂಪರೆ, ನಂಬಿಕೆಗಳನ್ನು ಬಿಂಬಿಸುವ ತಮ್ಮದೇ ಆದ ಹೆಸರುಗಳನ್ನು ಕೊಟ್ಟಿವೆ. ಪಶು, ಪಕ್ಷಿ, ದೇವರುಗಳ ಹೆಸರುಗಳನ್ನು ಅವುಗಳಿಗೆ ಕೊಟ್ಟಿದ್ದಾರೆ. ವೈಜ್ಞಾನಿಕವಾಗಿ ಬಳಸುವ ಹೆಸರುಗಳು ಬಹುತೇಕವಾಗಿ ಗ್ರೀಕ್ ಭಾಷೆಯಲ್ಲಿನ ಹೆಸರುಗಳಾಗಿದ್ದು, ನಮ್ಮ ಪೂರ್ಜಜರು ನೀಡಿದ ಹೆಸರುಗಳನ್ನು ಅನವಶ್ಯಕವಾಗಿ ಬದಲಿಸ ಬಾರದೆಂದು ರೂಢಿಗತವಾಗಿ ಅವೇ ಹೆಸರುಗಳನ್ನು ಬಳಸುತ್ತೇವೆ.

ನಕ್ಷತ್ರಪುಂಜಗಳಲ್ಲಿನ ನಕ್ಷತ್ರಗಳಿಗೆ ಅವುಗಳ ಪ್ರಖರತೆಯನ್ನು ಗಮನಿಸಿ ಅಕ್ಷರ, ಅಂಕೆಗಳಿಂದಲೂ ಕರೆಯುವುದರಿಂದ ವೈಜ್ಞಾನಿಕವಾಗಿ ಖಗೋಳ ಅಭ್ಯಾಸಿಗಳು ಚರ್ಚಿಸಲು, ವಿಚಾರ ವಿನಿಮಯ ಮಾಡಲು ಸುಲಭವಾಗಿದೆ.

ಪ್ರಾಣಿಪಕ್ಷಿಗಳ ಹೆಸರುಗಳನ್ನು ಪಡೆದ ಅನೇಕ ನಕ್ಷತ್ರ ಪುಂಜಗಳು ನಿಜವಾಗಿಯೂ ಅಂಥ ಪಕ್ಷಿ, ಪ್ರಾಣಿಗಳನ್ನು ಹೋಲುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಅವು ಕೇವಲ ಊಹೆ.

ಸೂರ್ಯನು ಪೂರ್ವದಿಂದ ಪಶ್ಚಿಮಕ್ಕೆ ಹಗಲಿನಲ್ಲಿ ಸರಿಯುತ್ತಿರುವಂತೆ ಭಾಸವಾಗುವುದಿಲ್ಲವೇ, ಹಾಗೆ ನಕ್ಷತ್ರಗಳೂ ರಾತ್ರಿ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಸಾಗುವಂತೆ ತೋರುತ್ತದೆ.

(ಸಂಗ್ರಹ) ಹುದಾ ಫಾತಿಮಾ ಎಚ್.

# ಸ್ವಾಮೀ ರಾಮ್‌ದೇವ್:

# ಖೊಟ್ಟಿ ವಾದದ ಬಿಟ್ಟಿ ಪ್ರದರ್ಶನ

● ಇಲ್ಯಾಸ್ ಮುಹಮ್ಮದ್



ಬಾಬಾ-ಸಾಧುಗಳು ಯಾವತ್ತೂ ವಿವಾದಾತೀತರಾಗಿರಬೇಕೆಂದು ಜನರು ಬಯಸುವುದಾದರೆ, ವಿವಾದಗಳನ್ನೇ ಮೈಗೆ ಮೆತ್ತಿಕೊಂಡು ವಿಜೃಂಭಿಸುವ ಸಾಧುಗಳ ಕಾರುಬಾರು ಅದೆಂಥಾ ಪರಿ! ಬಾಬಾ ರಾಮದೇವ್ ಎಂಬ ಐಶಾರಾಮಿ, ಬಹುಕೋಟಿ ಸಂಪತ್ತಿನ ಮಾಲಕ ವಿವಿಧ ಭಂಗಿಗಳ-ಆಸನಗಳ ಯೋಗ ಪ್ರದರ್ಶನದ ಜತೆಯಲ್ಲೇ ವಿವಾದಗಳನ್ನೂ ಪ್ರದರ್ಶಿಸುತ್ತಿದ್ದಾರೆ.

''ಕೋಳಿ ಮೊಟ್ಟೆಯು ಕೋಳಿಯ ತ್ಯಾಜ್ಯ ದ್ವಾರದಿಂದ ಹೊರ ಬರುವುದರಿಂದ ಅದನ್ನು ಸೇವಿಸಬಾರದು'' ಎಂದು ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಯೋಗ ಕಾರ್ಯಕ್ರಮದಲ್ಲಿ ಬೋಧನೆ ಮಾಡಿದ್ದ ಬಾಬಾರಾಮ್‌ದೇವ್‌ರಲ್ಲಿರುವುದು ಬರೀ ಮೌಢ್ಯ ಮಾತ್ರ. ಜೀವಜಗತ್ತಿನ ಸಾಮಾನ್ಯ ಜ್ಞಾನವೂ ಇಲ್ಲದ ಬಾಬಾನ ಬಂಡವಾಳದ ಹಿಂದೆ ಖೊಟ್ಟಿ ಸಸ್ಯಹಾರ ಸಿದ್ಧಾಂತದ ವೈಭವೀಕರಣವಿದೆಯೇ ಅಥವಾ ಅದು ಅಜ್ಞಾನದ ಪರಾಕಾಷ್ಠೆಯೇ?

ಆತನು ಕುಡಿಯುವ ಹಸುವಿನ ಹಾಲು ಹಸುವಿನ ಕೆಚ್ಚಲಿನಿಂದ ಬಂದದ್ದು. ಆತನು ಉಪಯೋಗಿಸುವ ಜೇನು ಸಹ ಜೇನುನೊಣಗಳು ಬಾಯಿ ಸಂಗ್ರಹಿಸಿ ಜೇನುಗೂಡಿನಲ್ಲಿ ಬಾಯಿಯಿಂದ ಹೊರ ಚೆಲ್ಲುತ್ತಾ ಸಂಗ್ರಹಿಸಿಟ್ಟಿರುವ ಮಧುವೇ ಆಗಿರುತ್ತದೆ. ಸಸ್ಯಹಾರ ಮಾತ್ರವೇ ಉತ್ತಮ ಎನ್ನುವ ಸಿದ್ಧಾಂತ ಬಾಬಾ ರಾಮ್‌ದೇವ್‌ರದ್ದಾಗಿದ್ದರೆ ಇವೆಲ್ಲವೂ ಸಸ್ಯಹಾರ ಎಂದು ಹೇಗೆ ಹೇಳಲು ಸಾಧ್ಯ. ಹಾಲು-ಜೇನು ಪ್ರಾಣಿಗಳ ದೇಹದಿಂದ ಉತ್ಪತ್ತಿಯಾದ ಉತ್ಪನ್ನಗಳು ಆಗಿವೆ. ಇನ್ನೂ

‘ತ್ಯಾಜ್ಯ ದ್ವಾರ’ ಎಂಬ ರಾಮ್‌ದೇವ್ ಸಿದ್ಧಾಂತವನ್ನು ಅವಲೋಕಿಸುವುದಾದರೆ ಜೇನುನೊಣದ ಬಾಯಿಯಿಂದ ಹೊರಟ ಜೇನು, ಆಕಳ ಕೆಚ್ಚಲು ಹಾಲು, ಮಾನವ ಜನಿಸಿದ ತಾಯಿಯ ಗರ್ಭದ್ವಾರ, ತಂದೆಯ ದೇಹದಿಂದ ವೀರ್ಯ ಧಾತು ಹೊರ ಬಿದ್ದ ಮಾರ್ಗ ಇವೆಲ್ಲವೂ ‘ತ್ಯಾಜ್ಯಮಾರ್ಗ’ವೆಂದಾಗುತ್ತಾ ಎಲ್ಲವೂ ‘ತ್ಯಾಜ್ಯ’ಗಳಾಗುತ್ತವೆಯೇ?! ಬುದ್ಧಿವಂತ ಜನ ಬಾಬಾರಾಮ್‌ದೇವ್‌ರ ಇಂತಹ ಮೌಢ್ಯಾತಿರೇಕ ಉವಾಚಗಳ ಬಗ್ಗೆ ಚಿಂತಿಸಿಯೇ ಚಿಂಸುತ್ತಾರೆ.




ಹರಿದ್ವಾರದಲ್ಲಿ ಬಾಬಾ ರಾಮ್‌ದೇವ್ ಹೊಂದಿರುವ ಬಹು ಕೋಟಿ ಬೆಲೆಬಾಳುವ ಪತಂಜಲಿ ಯೋಗ ಪೀಠ.

ಅಂದಹಾಗೇ ಬಾಬಾ ರಾಮ್‌ದೇವ್ ಈ ಹಿಂದೆಯೂ ಇಂತಹದ್ದೇ ಮಾತನಾಡಿದ್ದಾರೆ. ಯೋಗದಿಂದ ಕ್ಯಾನ್ಸರ್, ಏಡ್ಸ್ ಮುಂತಾದ ಮಾರಕ ರೋಗಗಳನ್ನು ಯೋಗದಿಂದ ಗುಣಪಡಿಸಲು ಸಾಧ್ಯವೆಂದಿದ್ದರು. ಅವೆಲ್ಲವೂ ಸುಳ್ಳು ಎಂದು ವಿಜ್ಞಾನಿಗಳು, ವೈದ್ಯರು ಜನರನ್ನು ಎಚ್ಚರಿಸಿದ್ದರು. ಜನರನ್ನು ಆಕರ್ಷಿಸಲು ಇಂತಹ ಘೋಷಣೆಗಳು ಬೇಕಾಗುತ್ತವೆ ಎಂದು ರಾಮ್‌ದೇವ್‌ಗೆ ಮಾತ್ರವಲ್ಲ ಸರ್ವ ಸಕಲ ಬಾಬಾಗಳಿಗೂ

ಅಂದಹಾಗೇ ಬಾಬಾ ರಾಮ್‌ದೇವ್ ಈ ಹಿಂದೆಯೂ ಇಂತಹದ್ದೇ ಮಾತನಾಡಿದ್ದಾರೆ. ಯೋಗದಿಂದ ಕ್ಯಾನ್ಸರ್, ಏಡ್ಸ್ ಮುಂತಾದ ಮಾರಕ ರೋಗಗಳನ್ನು ಯೋಗದಿಂದ ಗುಣಪಡಿಸಲು ಸಾಧ್ಯವೆಂದಿದ್ದರು. ಅವೆಲ್ಲವೂ ಸುಳ್ಳು ಎಂದು ವಿಜ್ಞಾನಿಗಳು, ವೈದ್ಯರು ಜನರನ್ನು ಎಚ್ಚರಿಸಿದ್ದರು. ಜನರನ್ನು ಆಕರ್ಷಿಸಲು ಇಂತಹ ಘೋಷಣೆಗಳು ಬೇಕಾಗುತ್ತವೆ ಎಂದು ರಾಮ್‌ದೇವ್‌ಗೆ ಮಾತ್ರವಲ್ಲ ಸರ್ವ ಸಕಲ ಬಾಬಾಗಳಿಗೂ ಸಾಧುಗಳಿಗೂ ಗೊತ್ತು. ಅದಕ್ಕಾಗಿಯೇ ಬಾಬಾ-ಸಾಧುಗಳ ಬಳಿ ರೋಗಿಗಳೇ ಹೆಚ್ಚಾಗಿ ಹೋಗುತ್ತಿದ್ದರು. ಅವರಿಗೆ ಜೀವ ಸಂಕಟ ಇವರಿಗೆ ಮೋಹ-ಲೋಭ ಸಂಕಟ.

ಸಾಧುಗಳಿಗೂ ಗೊತ್ತು. ಅದಕ್ಕಾಗಿಯೇ ಬಾಬಾ-ಸಾಧುಗಳ ಬಳಿ ರೋಗಿಗಳೇ ಹೆಚ್ಚಾಗಿ ಹೋಗುತ್ತಿದ್ದರು. ಅವರಿಗೆ ಜೀವ ಸಂಕಟ ಇವರಿಗೆ ಮೋಹ-ಲೋಭ ಸಂಕಟ.

ಇಂದಿನ ಬಂಡವಾಳಶಾಹಿ, ಜಾಗತೀಕರಣ ಯುಗದಲ್ಲಿ ಎಂತೆಂತಹಾ ವಸ್ತುಗಳನ್ನು ಬಂಡವಾಳಶಾಹಿ ಸರಕಾಗಿ ಉಪಯೋಗಿಸಬಹುದು ಎಂದು ಕೇಳಿದರೆ ನಾವು ಬೆಚ್ಚಿಬೀಳಬಲ್ಲೆವು. ನಾವು ಕುಡಿಯುವ ನೀರು, ನಮ್ಮ ಮಕ್ಕಳು, ಕಲಿಯುವ ಶಿಕ್ಷಣ, ರೋಗ ಚಿಕಿತ್ಸೆಗಾಗಿ ಪಡೆಯುವ ವೈದ್ಯಕೀಯ ಸೌಲಭ್ಯಗಳು, ರಸ್ತೆ, ವಿದ್ಯುತ್ ಇತ್ಯಾದಿಗಳೆಲ್ಲವೂ ಇದೀಗ ಬಂಡವಾಳಶಾಹಿಗಳ ತೆಕ್ಕೆಗೆ ಬಿದ್ದು ಹಣ, ಹೆಸರು ಗಳಿಸುವ ಬಿಕರಿ ವಸ್ತುಗಳಾಗಿ ಹೋದವು. ಆದರೆ, ಮಾಮೂಲಿ ‘ಯೋಗ ವಿದ್ಯೆ’ಯೂ ಬಂಡವಾಳ ಸಂಗ್ರಹಿಸಲು, ಕೋಟ್ಯಂತರ ಹಣ ಬಾಚಲು ಸಾಧ್ಯವಾಗಬಲ್ಲ ವಿಷಯವಾಗಿದೆ ಎಂದು ಬಾಬಾ ರಾಮ್‌ದೇವ್ ಸಾಬೀತುಪಡಿಸಿದ್ದಾರೆ.

ಹತ್ತು ವರ್ಷಗಳ ಹಿಂದೆ, ಇದೇ ರಾಮ್‌ದೇವ್ ಅವರು ಸೈಕಲ್‌ನಲ್ಲಿ ಸಂಚರಿಸುತ್ತಿದ್ದರಂತೆ. ಪಂಕ್ಚರ್ ಆಗಿರುವ ಸೈಕಲ್‌ನ ಟೈರನ್ನು ಸರಿಪಡಿಸಲು ಆಗ ರಾಮ್‌ದೇವ್ ಕಿಸೆಯಲ್ಲಿ ದುಡ್ಡಿರಲಿಲ್ಲವಂತೆ. ಅಂಥಹಾ ಮನುಷ್ಯನ ಸೊತ್ತಿನ ಇಂದಿನ ಮೌಲ್ಯವೆಷ್ಟು ಗೊತ್ತೇ? 1000 ಕೋಟಿಗಿಂತಲೂ ಹೆಚ್ಚು! ಹರಿದ್ವಾರದಲ್ಲಿ ಪತಂಜಲಿ ಯೋಗಪೀಠ ಟ್ರಸ್ಟ್ ಹೆಸರಿನಲ್ಲಿ ಬಾಬಾ ರಾಮ್‌ದೇವ್‌ರ ಸೊತ್ತಿನ ಮೌಲ್ಯ ರೂ.1000 ಕೋಟಿಗೂ ಅಧಿಕ. 300 ಬೆಡ್‌ಗಳಿರುವ ಆಸ್ಪತ್ರೆ, ಒಂದು ಯೋಗ ಸಂಶೋಧನಾ ಕೇಂದ್ರ, ಒಂದು ವಿಶ್ವವಿದ್ಯಾನಿಲಯ, ಆಯುರ್ವೇದಿಕ್ ಫಾರ್ಮಸಿ, ಫುಡ್‌ಪಾರ್ಕ್ ಹಾಗೂ ಕಾಸ್ಮೆಟಿಕ್ಸ್ ತಯಾರಿಕಾ ಕಾರ್ಖಾನೆ ಇವುಗಳೆಲ್ಲವೂ ಅದರಲ್ಲಿ ಒಳಗೊಂಡಿದೆ. ಸ್ಕಾಟ್ಲೆಂಡ್‌ನಲ್ಲಿ ದ್ವೀಪವೊಂದನ್ನು ಖರೀದಿಸಿ ಅಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದ್ದಾರೆಂಬ ವರದಿ ಇದೆ. ಈ ಸೊತ್ತಿನ ಮೌಲ್ಯ ಏನಿಲ್ಲವೆಂದರೂ ಅಂದಾಜು 20 ಲಕ್ಷ ಪೌಂಡ್ ಬೆಲೆಬಾಳುತ್ತದೆ. ಇದೂ ಅಲ್ಲದೆ ‘ಆಸ್ಥಾ ಟಿವಿ ಚಾನೆಲ್’ನಲ್ಲಿ ಬಾಬಾ ರಾಮ್‌ದೇವ್‌ರ ಪತಂಜಲಿ ಯೋಗ ಪೀಠ ಬಹುದೊಡ್ಡ ಪಾಲು ಹೊಂದಿದೆ ಎನ್ನುವ ವರದಿಯೂ ಇದೆ.

ರಾಮ್‌ದೇವ್‌ರ ಒಡೆತನದಲ್ಲಿರುವ 'ದಿವ್ಯಯೋಗ ಮಂದಿರ'ದಲ್ಲಿರುವ 115 ಮಂದಿ ಕೆಲಸಗಾರರು 2005ರಲ್ಲಿ ನ್ಯಾಯಬದ್ಧ ವೇತನ ನೀಡಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು. ಈ ಕೆಲಸಗಾರರು ಅತ್ಯಂತ ಬಡ ಹಿನ್ನೆಲೆಯಿಂದ ಬಂದವರಾಗಿದ್ದರು. ಕನಿಷ್ಠ ವೇತನ, ಪ್ರಾವಿಡೆಂಟ್ ಫಂಡ್ ಹಾಗೂ ವಿಮೆ ನೀಡಬೇಕೆಂದು ಆಗ್ರಹಿಸಿ ಈ ಕಾರ್ಮಿಕರು ಮುಷ್ಕರ ಹೂಡಿದ್ದರು. ಸತತ ಮುಷ್ಕರದ ನಂತರ ಕೆಲವು ಮಂದಿ ಕೆಲಸಗಾರರ ಬೇಡಿಕೆ ಪೂರೈಸಿ ಕೆಲಸಕ್ಕೆ ಮರು ನೇಮಕಗೊಳಿಸಲಾಯಿತಾದರೂ ಹಲವು ಕೆಲಸಗಾರರನ್ನು ವಜಾಗೊಳಿಸಲಾಗಿತ್ತು. ಭ್ರಷ್ಟಾಚಾರದ ವಿರುದ್ಧ ಹೋರಾಟ ಎನ್ನುತ್ತಾ ಬಹಿರಂಗಕ್ಕೆ ಬರುವ ಮೊದಲು ಬಾಬಾ ರಾಮ್‌ದೇವ್‌ರವರ ಆಶ್ರಮದಲ್ಲಿರುವ ಈ ದಯನೀಯ ಸ್ಥಿತಿಯನ್ನು ಅವರು ಸರಿಪಡಿಸಲಿ.

ಇವೆಲ್ಲವೂ 2 ಕೋಟಿ ಭಕ್ತರು ನೀಡಿದ ಹಣದಿಂದ ನಡೆಯುತ್ತಿದೆ ಎನ್ನುವ ರಾಮ್‌ದೇವ್‌ರಿಗೆ ಇದೀಗ ಭ್ರಷ್ಟಾಚಾರದ ವಿರುದ್ಧ ಹೋರಾಟ ಎಂದು ಗೀಳು ಹಚ್ಚಿದೆ.

ಭ್ರಷ್ಟಾಚಾರ ವಿರುದ್ಧ ಹೋರಾಟ ನಡೆಯಬೇಕಾದದ್ದೇ. ಆದರೆ ಅದು ಎಲ್ಲ ಭ್ರಷ್ಟಾಚಾರದ ವಿರುದ್ಧವಾಗಿರಬೇಕು ಮತ್ತು ನಿಷ್ಪಕ್ಷಪಾತವಾಗಿರಬೇಕು. ಕರ್ನಾಟಕ ರಾಜ್ಯವೇ ದೇಶದಲ್ಲಿ ಅತ್ಯಂತ ಭ್ರಷ್ಟ ರಾಜ್ಯ ಸರಕಾರ ಎನ್ನುವ ವಾಸ್ತವಾಂಶಗಳನ್ನು ಒಪ್ಪಲು ತಯಾರಿರದ ಸ್ವಾಮೀ ರಾಮ್‌ದೇವ್ ಮನಸ್ಸಿನಲ್ಲಿ ಯಾವ ತರಹದ ಭ್ರಷ್ಟತೆಯ ವಿರುದ್ಧ ಹೋರಾಟ ಎನ್ನುವುದು ಸ್ಪಷ್ಟ.

ರಾಮ್‌ದೇವ್‌ರ ಒಡೆತನದಲ್ಲಿರುವ 'ದಿವ್ಯಯೋಗ ಮಂದಿರ'ದಲ್ಲಿರುವ 115 ಮಂದಿ ಕೆಲಸಗಾರರು 2005ರಲ್ಲಿ ನ್ಯಾಯಬದ್ಧ ವೇತನ ನೀಡಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು. ಈ ಕೆಲಸಗಾರರು ಅತ್ಯಂತ ಬಡ ಹಿನ್ನೆಲೆಯಿಂದ ಬಂದವರಾಗಿದ್ದರು. ಕನಿಷ್ಠ ವೇತನ, ಪ್ರಾವಿಡೆಂಟ್ ಫಂಡ್ ಹಾಗೂ ವಿಮೆ ನೀಡಬೇಕೆಂದು ಆಗ್ರಹಿಸಿ ಈ ಕಾರ್ಮಿಕರು ಮುಷ್ಕರ ಹೂಡಿದ್ದರು. ಸತತ ಮುಷ್ಕರದ ನಂತರ ಕೆಲವು ಮಂದಿ ಕೆಲಸಗಾರರ ಬೇಡಿಕೆ ಪೂರೈಸಿ ಕೆಲಸಕ್ಕೆ ಮರು ನೇಮಕಗೊಳಿಸಲಾಯಿತಾದರೂ ಹಲವು ಕೆಲಸಗಾರರನ್ನು ವಜಾಗೊಳಿಸಲಾಗಿತ್ತು. ಭ್ರಷ್ಟಾಚಾರದ ವಿರುದ್ಧ ಹೋರಾಟ ಎನ್ನುತ್ತಾ ಬಹಿರಂಗಕ್ಕೆ ಬರುವ ಮೊದಲು ಬಾಬಾ ರಾಮ್‌ದೇವ್‌ರವರ ಆಶ್ರಮದಲ್ಲಿರುವ ಈ ದಯನೀಯ ಸ್ಥಿತಿಯನ್ನು ಅವರು ಸರಿಪಡಿಸಲಿ. 1.25 ಚ.ಕಿ.ಮೀ. ವಿಸ್ತೀರ್ಣ


ದೆಹಲಿಯಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಬಾಬಾ ರಾಮ್‌ದೇವ್

ವಿರುವ ಸ್ವೀಡನ್ ದ್ವೀಪವನ್ನು ಖರೀದಿಸಿದ ಬಾಬಾರಿಗೆ ಹಣ ಎಲ್ಲಿಂದ ಬಂತು ಮತ್ತು ರಾಷ್ಟ್ರದ ಕಾನೂನಿಗೆ ಅನ್ವಯವಾಗುವಂತೆ ಅದನ್ನು ಖರೀದಿ ಮಾಡಲಾಗಿತ್ತೇ'?

ಹರಿದ್ವಾರದ 1000 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಆಸ್ತಿಗೆ ಹರಿದು ಬಂದ ಹಣ ಯಾವ ಮೂಲದ್ದು ಹಾಗೂ ಅದರಿಂದ ಉತ್ಪತ್ತಿಯಾದ ಆದಾಯ ಜನರಿಗೆ ಸಲ್ಲುತ್ತಿದೆಯೇ? ಎನ್ನುವ ಹಲವು ಗಂಭೀರ ರಹಸ್ಯಗಳ ಬಗ್ಗೆ ತನಿಖೆಯಾದರೆ ಮಾತ್ರವೇ ಭ್ರಷ್ಟಾಚಾರದ ವಿರುದ್ಧ ನಡೆಸುವ ಹೋರಾಟಕ್ಕೆ ಅರ್ಥವಿದೆ.

''ಕೋಳಿ ಮೊಟ್ಟೆ ತ್ಯಾಜ್ಯ ದ್ವಾರದಿಂದ ಬಂದಿದೆ'' ಎಂದು ಬೋಧಿಸಿದ ಬಾಬಾರಿಗೆ ಒಂದು ಕೋಳಿಮೊಟ್ಟೆಯನ್ನೂ ಖರೀದಿಸಲು ಸಾಧ್ಯವಾಗದ ಜನ ಈ ದೇಶದಲ್ಲಿದ್ದಾರೆ ಎನ್ನುವುದು ತಿಳಿದಿಲ್ಲ ಎಂದು ಅನಿಸುತ್ತದೆ. ಕೇವಲ 'ಯೋಗ ಪ್ರದರ್ಶನ'ದಿಂದ ಒಬ್ಬ ವ್ಯಕ್ತಿಗೆ ಈ ದೇಶದ ಬಡಜನತೆಯ ಬವಣೆಯಾಗಲೀ ಅಥವಾ 'ಮೊಟ್ಟೆ ತಿನ್ನಬೇಕೇ, ಬೇಡವೇ? ಎಂಬ ಸಾಮಾನ್ಯ ಜ್ಞಾನವಾಗಲೀ ಇರಬಹುದೆಂಬ ಭ್ರಮೆ ಬೇಡ. ತಾನು ಅತ್ಯಂತ ಸರಳ ಜೀವನ ನಡೆಸುತ್ತೇನೆ ಎನ್ನುವ ಸ್ವಾಮೀ ರಾಮ್‌ದೇವ್ 'ನಾನು ಸ್ಕೋಡಾ ಅಥವಾ ಅಂಬಾಸಿಡರ್ ಕಾರ್‌ನಲ್ಲಿ ಮಾತ್ರವೇ ಪ್ರಯಾಣಿಸುತ್ತೇನೆ. ನಾನು ದಿನಕ್ಕೆ ಎರಡು ಗ್ಲಾಸ್ ಹಾಲು ಹಾಗೂ ಒಂದು ತಟ್ಟೆ ತರಕಾರಿ ಮಾತ್ರ ತಿನ್ನುತ್ತೇನೆ. ಆಕಾಶ ಪ್ರಯಾಣಕ್ಕಾಗಿ ಮಾತ್ರ ವಿಮಾನವನ್ನು ಉಪಯೋಗಿಸುತ್ತೇನೆ. ಮರದಿಂದ ತಯಾರಿಸಿದ ಚಪ್ಪಲಿಯನ್ನು ಮಾತ್ರವೇ ಧರಿಸುತ್ತೇನೆ. ಜನಸಾಮಾನ್ಯನ ಜೀವನ ಶೈಲಿಯೇ ನನ್ನ ಶೈಲಿ' ಎನ್ನುತ್ತಿರುವ ಸ್ವಾಮಿ ರಾಮ್‌ದೇವ್ ವಾಸ್ತವ್ಯ ಮಾತ್ರ ಐಶಾರಾಮಿ ಬಂಗಲೆಯಲ್ಲಿ. ಜನಸಾಮಾನ್ಯನೊಬ್ಬ ಇಂತಹ ಜೀವನ ನಡೆಸಲು ಸಾಧ್ಯವೇ ಇಲ್ಲ ಎನ್ನುವ ಮಾತಂತೂ ನೂರಕ್ಕೆ ನೂರರಷ್ಟು ನಿಜ.

# ಮುಸ್ಲಿಮ್ ಪ್ರಾಬಲ್ಯದ ಸೀಟುಗಳು ಯಾಕೆ ಇತರರ ಪಾಲಾಗುತ್ತಿವೆ?

ಸಿರಾಜುದ್ದೀನ್, ಕುವೈಟ್



ಇದು 'ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆದುರುಳಿಸಿದಂತೆ'. ಒಂದು ಸಮುದಾಯದ ಅಗತ್ಯತೆಗಾಗಿ ರೂಪಿಸಲಾಗಿರುವ ಸಾಂವಿಧಾನಿಕ ಅವಕಾಶಗಳು ಇನ್ನೊಂದು ವರ್ಗಕ್ಕೆ ಲಾಭ ತಂದುಕೊಡುತ್ತಿದೆ. ಸಂವಿಧಾನದ ಕರಾರಿನ ಪ್ರಕಾರ ಈ ದೇಶದ ಶಾಸಕಾಂಗಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಸೀಟು ಮೀಸಲಿಸಿರಿಸಲಾಗಿದೆ. ಆದರೆ ಇದನ್ನು ಕಾರ್ಯರೂಪಕ್ಕೆ ತರುತ್ತಿರುವುದು ಶಾಸಕಾಂಗಗಳಲ್ಲಿ ಮುಸ್ಲಿಮ್ ಪ್ರಾತಿನಿಧ್ಯವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆಗೊಳಿಸುವ ಮೂಲಕ! ವಿಪರ್ಯಾಸವೆಂದರೆ, ಪರಿಶಿಷ್ಟ ಜಾತಿಗಳಂತೆಯೇ ಒಂದು ಹಿಂದುಳಿದ ವರ್ಗಕ್ಕೆ ಸೇರಿರುವ ಮುಸ್ಲಿಮ್ ಸಮುದಾಯಕ್ಕೆ ಅದರ ಸಾಂವಿಧಾನಿಕ ಅವಕಾಶಗಳು ನಿಷೇಧಿಸಲ್ಪಟ್ಟಿವೆ.

ವಿಧಾನಸಭೆ ಮತ್ತು ಸಂಸತ್ತಿನಲ್ಲಿರುವ ಪ್ರತಿನಿಧಿಗಳ ಅಂಕಿಅಂಶ ಗಮನಿಸಿದಾಗ ದೇಶಾದ್ಯಂತ ಮುಸ್ಲಿಮ್ ಜನಸಂಖ್ಯೆ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗಳು ಮೀಸಲಾತಿ ಆಧಾರದಲ್ಲಿ ಸೀಟುಗಳಿಸಿಕೊಂಡಿದ್ದಾರೆ. ಹೀಗೆ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ಹೊರಡಿಸಿರುವ ಕ್ಷೇತ್ರಗಳಲ್ಲಿ ಮುಸ್ಲಿಮರು ಪರಿಶಿಷ್ಟ ಜಾತಿಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದೇ ವೇಳೆ ಪರಿಶಿಷ್ಟ ಜಾತಿಗೆ ಸೇರಿದವರು ಅತಿಹೆಚ್ಚು ದೊಡ್ಡ ಸಮುದಾಯವಾಗಿರುವ ಕ್ಷೇತ್ರಗಳಲ್ಲಿ ಸಾಮಾನ್ಯ ಅಭ್ಯರ್ಥಿಯು ಸ್ಪರ್ಧಿಸಬಹುದಾಗಿದ್ದು, ಅಲ್ಲಿ ಮೀಸಲಾತಿ ಇರುವುದಿಲ್ಲ. ಇಂತಹ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಮುಸ್ಲಿಮ್ ಅಭ್ಯರ್ಥಿಯು ಹಲವು ಮಂದಿಯನ್ನು ಎದುರಿಸಬೇಕಾಗುತ್ತದೆ.

ಆರು ವರ್ಷಗಳ ಹಿಂದೆ ಸಾಚಾರ್ ಸಮಿತಿಯು ಬೊಟ್ಟು ಮಾಡಿ ತೋರಿಸಿದ ಅಂಶವೊಂದರ ಬಗ್ಗೆ ನಾವು ಗಮನಹರಿಸೋಣ...

''ಸಮಿತಿಯು ಕಂಡುಕೊಂಡ ಮುಖ್ಯ ಸಂಗತಿಯೇನೆಂದರೆ,

ಮುಸ್ಲಿಮ್ ಮತದಾರರು ಅತಿಹೆಚ್ಚು ಇರುವ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳು ಪರಿಶಿಷ್ಟ ಜಾತಿಗಳ ಪಾಲಾಗುತ್ತಿವೆ. ಅಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದಿಲ್ಲ. ಇದಕ್ಕೆ ವಿರುದ್ಧವಾಗಿ ಮುಸ್ಲಿಮ್ ಮತದಾರರು ಕಡಿಮೆ ಇರುವ ಕ್ಷೇತ್ರಗಳಲ್ಲಿ ಯಾವುದೇ ಮೀಸಲಾತಿ ಇರುವುದಿಲ್ಲ. ಅಲ್ಲಿ ಮುಸ್ಲಿಮರು ಪರಿಶಿಷ್ಟ ಜಾತಿಯಷ್ಟೇ ಅತಿಸಣ್ಣ ಸಮುದಾಯವಾಗಿರುತ್ತಾರೆ''

ಸಾಚಾರ್ ಈ ವಿಚಾರವಾಗಿ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, ಮುಸ್ಲಿಮ್ ಬಾಹುಳ್ಯ ಕ್ಷೇತ್ರಗಳು 'ಮೀಸಲಾತಿ' ಕ್ಷೇತ್ರಗಳಾಗಿ ಘೋಷಿಸಲ್ಪಟ್ಟಿವೆ. ಆ ಕ್ಷೇತ್ರದಿಂದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಮಾತ್ರ ಸ್ಪರ್ಧಿಸಲು ಅವಕಾಶ. ಇಂತಹ ಕ್ರಮಗಳಿಂದಾಗಿ ಮುಸ್ಲಿಮರು ರಾಜಕೀಯ ಪ್ರಾತಿನಿಧ್ಯದಿಂದ ವಂಚಿತರಾಗಿದ್ದಾರೆ.

ಇದೇ ವಿಚಾರವಾಗಿ ಸಮಿತಿಯು ಮತ್ತಷ್ಟು ಅಧ್ಯಯನ ನಡೆಸಿದೆ. ಆದರೆ ಈ ರೀತಿಯಾಗಿ ಮೀಸಲಾತಿ ಕ್ಷೇತ್ರಗಳನ್ನು ಘೋಷಿಸುವಲ್ಲಿ ಮುಖ್ಯ ಕಾರಣವೆನಿಸಿರುವ ಮತದಾರರ ಪಟ್ಟಿ ತಯಾರಿಕೆಯ ಬಗ್ಗೆ ಸಮಿತಿಯು ಸರಿಯಾಗಿ ಕಣ್ಣಾಡಿಸಿಲ್ಲ. ''ಮೀಸಲಾತಿ ಕ್ಷೇತ್ರಗಳಿಗೆ ಸಂಬಂಧಿಸಿದ ನಮ್ಮ ಅಧ್ಯಯನವು ಮೂರು ರಾಜ್ಯಗಳಾದ ಉತ್ತರಪ್ರದೇಶ, ಬಿಹಾರ ಮತ್ತು ಪಶ್ಚಿಮಬಂಗಾಳವನ್ನು ಕೇಂದ್ರೀಕರಿಸಿಯಾಗಿತ್ತು. ನಾವು ಕಂಡುಕೊಂಡ ಅಂಶವು ವಾಸ್ತವವಾಗಿದೆ ಎಂಬುದು ಅಲ್ಲಿ ಸಾಬೀತಾಗಿದೆ'' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉತ್ತರಪ್ರದೇಶ, ಬಿಹಾರ ಮತ್ತು ಪಶ್ಚಿಮಬಂಗಾಳ ಎಂಬೀ ರಾಜ್ಯಗಳಲ್ಲಿನ ಮೀಸಲಾತಿ ಕ್ಷೇತ್ರಗಳಲ್ಲಿನ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಪಟ್ಟಿಯನ್ನು ಸಾಚಾರ್ ಸಮಿತಿಯು ವರದಿ ಮಾಡಿತ್ತು. ಈ ಮೂರು ರಾಜ್ಯಗಳಲ್ಲಿ ಮುಸ್ಲಿಮರ ಜನಸಂಖ್ಯೆ ಅಪಾರ ಸಂಖ್ಯೆಯಲ್ಲಿದೆ. ಅಂಕಿಅಂಶಗಳು ತಿಳಿಸುತ್ತಿರುವುದೇನೆಂದರೆ, ಕ್ಷೇತ್ರ ಗಡಿ ನಿರ್ಧರಿಸುವ ಆಯೋಗವು ಘೋಷಿಸಿರುವ ಪರಿಶಿಷ್ಟ ಜಾತಿ ಮೀಸಲಾತಿ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಮುಸ್ಲಿಮರು ನೆಲೆಸಿದ್ದು, ಶೇ.50ಕ್ಕಿಂತಲೂ ಹೆಚ್ಚು ಜನಸಂಖ್ಯಾ ಬಲ ಹೊಂದಿದ ಸಮುದಾಯವಾಗಿದ್ದಾರೆ. ಅಲ್ಲೆಲ್ಲಾ ಪರಿಶಿಷ್ಟ ಜಾತಿಯವರಿಗಿಂತ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇತರ ರಾಜ್ಯಗಳಿಗಿಂತಲೂ ಹೆಚ್ಚಿನ ಮುಸ್ಲಿಮರು ಇಲ್ಲಿನ ಮೀಸಲಾತಿ ಕ್ಷೇತ್ರಗಳಲ್ಲಿ ನೆಲೆಸಿದ್ದಾರೆ ಎಂಬುದು ಗಮನಾರ್ಹ. ಇದೇ ವೇಳೆ ಪರಿಶಿಷ್ಟ ಜಾತಿ ಸಮುದಾಯದವರು ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಯಾವುದೇ ಮೀಸಲಾತಿ ಘೋಷಣೆ ಇಲ್ಲ. ಅದು ಮೀಸಲಾತಿ ರಹಿತವಾಗಿದ್ದು, ಸಾಮಾನ್ಯ ಕ್ಷೇತ್ರವೆಂದು ಘೋಷಿಸಲ್ಪಟ್ಟಿದೆ. ಇದರ ಪರಿಣಾಮವಾಗಿ ಮುಸ್ಲಿಮರು ರಾಜಕೀಯವಾಗಿ ಮೂಲೆಗುಂಪಾಗುತ್ತಿದ್ದು, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಸಮುದಾಯದ ಅವಕಾಶವು ನಿರಾಕರಿಸಲ್ಪಡುತ್ತಿದೆ.

**ಮುಸ್ಲಿಮ್ ಬಾಹುಳ್ಯದ ಕ್ಷೇತ್ರಗಳು ಇತರರ ಪಾಲಾಗುತ್ತಿರುವುದನ್ನು ಸ್ಪಷ್ಟಪಡಿಸುವ ಈ ಕೆಳಗಿನ ಅಂಕಿಅಂಶವನ್ನು ಗಮನಿಸಿ.**

**ಉತ್ತರಪ್ರದೇಶ ಮೀಸಲಾತಿ ವಿಧಾನಸಭಾ ಕ್ಷೇತ್ರಗಳು**

| ವಿಧಾನಸಭಾ ಕ್ಷೇತ್ರ | ಒಟ್ಟು ಜನಸಂಖ್ಯೆ | ಮುಸ್ಲಿಮರು | ಎಸ್‌ಸಿ | ಎಸ್‌ಟಿ | ಎಸ್.ಸಿ. (ಶೇ.) | ಮುಸ್ಲಿಮರು(ಶೇ.) |
|---|---|---|---|---|---|---|
| ಹಪ್ಪರ್ | 773899 | 220996 | 181026 | 11 | 23.4 | 28.6 |
| ನಜಿಬಾಬಾದ್ | 605199 | 297892 | 139227 | 418 | 23.0 | 49.2 |
| ನಗಿನ | 625366 | 264523 | 134807 | 2004 | 21.6 | 42.3 |
| ಕೊಯಿಲ್ | 1373814 | 368210 | 283384 | 203 | 20.6 | 26.8 |
| ಖಲೀಲಾಬಾದ್ | 605777 | 194538 | 123577 | 192 | 20.4 | 32.1 |
| ಮಂಕಾಪುರ್ | 530697 | 95791 | 87701 | 9 | 16.5 | 18.1 |
| ಜನ್‌ಶತ್ | 767827 | 280764 | 125816 | 0 | 16.4 | 36.6 |
| ಫರೀದಾಪುರ್ | 383771 | 88280 | 61607 | 0 | 16.1 | 23.0 |

### ಉತ್ತರಪ್ರದೇಶ ಮೀಸಲಾತಿ ರಹಿತ ವಿಧಾನಸಭಾ ಕ್ಷೇತ್ರಗಳು

| ವಿಧಾನಸಭಾ ಕ್ಷೇತ್ರ | ಒಟ್ಟು ಜನಸಂಖ್ಯೆ | ಮುಸ್ಲಿಮರು | ಎಸ್‌ಸಿ | ಎಸ್‌ಟಿ | ಎಸ್.ಸಿ. (ಶೇ.) | ಮುಸ್ಲಿಮರು(ಶೇ.) |
|---|---|---|---|---|---|---|
| ಮರಿಹನ್ | 189950 | 6167 | 93575 | 617 | 49.3 | 3.2 |
| ಘೋರವಾಲ್ | 225824 | 10198 | 100869 | 8 | 44.7 | 4.5 |
| ಲಾಲ್‌ಗಂಜ್ | 287983 | 17125 | 122031 | 189 | 42.4 | 5.9 |
| ಹರ್ದೋಯಿ | 975970 | 85110 | 391950 | 98 | 40.2 | 8.7 |
| ಮಿಸ್ರಿಕ್ | 764302 | 65750 | 289823 | 19 | 37.9 | 8.6 |
| ಸಂದಿಲ | 828047 | 120541 | 309395 | 75 | 37.4 | 14.6 |
| ಹೈದರ್‌ಘರ್ | 507962 | 72085 | 182517 | 61 | 35.9 | 14.2 |
| ಬಕ್ಷಿ ಕ ತಲಬ್ | 276134 | 33062 | 98476 | 93 | 35.7 | 12.0 |
| ತಹ್ರೌಲಿ | 151202 | 4688 | 53302 | 57 | 35.3 | 3.1 |

### ಬಿಹಾರ: ಮೀಸಲಾತಿ ವಿಧಾನಸಭಾ ಕ್ಷೇತ್ರಗಳು

| | | | | | | |
|---|---|---|---|---|---|---|
| ರಾಣಿಗಂಜ್ | 302261 | 86655 | 64383 | 13708 | 21.3 | 28.7 |
| ಪುಲ್ವಾರಿ | 191005 | 41698 | 35844 | 212 | 18.8 | 21.8 |
| ಸಕ್ರ | 242815 | 50630 | 44809 | 26 | 18.5 | 20.9 |
| ಚತ್ತಾಪುರ್ | 215493 | 39568 | 36445 | 2264 | 16.9 | 18.4 |
| ಬಾಘ | 314874 | 53235 | 45190 | 947 | 14.4 | 16.9 |
| ಕೊರ್ಹ | 210656 | 78482 | 29961 | 19209 | 14.2 | 37.3 |
| ದರ್ಭಂಗ | 496486 | 131287 | 65236 | 280 | 13.1 | 26.4 |
| ಮೈರ್ವ | 93497 | 11713 | 10310 | 1617 | 11.0 | 12.5 |
| ಧುರೈಯಾ | 186270 | 55960 | 18899 | 1474 | 10.1 | 30.0 |

### ಬಿಹಾರ: ಮೀಸಲಾತಿ ರಹಿತ ವಿಧಾನಸಭಾ ಕ್ಷೇತ್ರಗಳು

| | | | | | | |
|---|---|---|---|---|---|---|
| ದುಮಾರಿಯ | 100411 | 13420 | 39474 | 29 | 39.3 | 13.4 |
| ಬಂಕೆ ಬಝಾರ್ | 100354 | 11903 | 39220 | 263 | 39.1 | 11.9 |
| ದೋಭಿ | 117763 | 9620 | 43803 | 129 | 37.2 | 8.2 |
| ಮನ್‌ಪುರ್ | 108516 | 9368 | 40169 | 3 | 37.0 | 8.6 |
| ಅಮಸ್ | 81640 | 12190 | 29668 | 164 | 36.3 | 14.9 |

| ವಿಧಾನಸಭಾ ಕ್ಷೇತ್ರ | ಒಟ್ಟು ಜನಸಂಖ್ಯೆ | ಮುಸ್ಲಿಮರು | ಎಸ್‌ಸಿ | ಎಸ್‌ಟಿ | ಎಸ್.ಸಿ. (ಶೇ.) | ಮುಸ್ಲಿಮರು(ಶೇ.) |
|---|---|---|---|---|---|---|
| ತನ್ ಕುಪ್ಪ | 93175 | 3721 | 33606 | 4 | 36.1 | 4.0 |
| ಮೋಹನ್‌ಪುರ್ | 161817 | 15796 | 58185 | 214 | 36.0 | 9.8 |
| ಗುರವ | 142853 | 19924 | 49980 | 2 | 35.0 | 13.9 |
| ಸಿರ್ದಾಲ | 136369 | 10431 | 46468 | 61 | 34.1 | 7.6 |
| **ಪಶ್ಚಿಮಬಂಗಾಳ: ಮೀಸಲಾತಿ ವಿಧಾನಸಭಾ ಕ್ಷೇತ್ರಗಳು** | | | | | | |
| ಬಸಂತಿ | 278592 | 114736 | 107602 | 17462 | 38.6 | 41.2 |
| ರಜರ್‌ಹತ್ | 145381 | 60108 | 52233 | 938 | 35.9 | 41.3 |
| ನನೂರ್ | 193775 | 64827 | 61803 | 3834 | 31.9 | 33.5 |
| ಕುಲ್ಪಿ | 242752 | 88230 | 77380 | 141 | 31.9 | 36.3 |
| ಕೆತುಗ್ರಾಮ್-1 | 145859 | 64975 | 39011 | 582 | 26.7 | 44.5 |
| ಸಂಕ್ರೇಲ್ | 290924 | 92942 | 73191 | 1761 | 25.2 | 31.9 |
| ಕೇಶ್‌ಪುರ್ | 288489 | 76866 | 72536 | 17012 | 25.1 | 26.6 |
| ಖರ್‌ಗ್ರಾಮ್ | 234780 | 120557 | 55320 | 1918 | 23.6 | 51.3 |
| ಸಗರ್ದಿಗಿ | 252293 | 156870 | 44992 | 16882 | 17.8 | 62.2 |
| ಕಲಿಗಂಜ್ | 290957 | 161705 | 49349 | 1447 | 17.0 | 55.6 |
| **ಪಶ್ಚಿಮಬಂಗಾಳ: ಮೀಸಲಾತಿ ರಹಿತ ವಿಧಾನಸಭಾ ಕ್ಷೇತ್ರಗಳು** | | | | | | |
| ಸಿತಾಯಿ | 96347 | 26491 | 64869 | 8 | 67.3 | 27.5 |
| ಹಲ್ದಿಬರಿ | 93867 | 30036 | 58070 | 254 | 61.9 | 32.0 |
| ಜಲ್ಪೈಗುರಿ | 280927 | 40519 | 170394 | 16774 | 60.7 | 14.4 |
| ಕಲಿಯಗಂಜ್ | 190019 | 39334 | 114922 | 8656 | 60.5 | 20.7 |
| ಖೆಜುರಿ-2 | 117438 | 8306 | 66658 | 819 | 56.8 | 7.1 |
| ಖರಿಬರಿ | 88230 | 4128 | 44863 | 17099 | 50.8 | 4.7 |
| ತುಫನ್‌ಗಂಜ್-2 | 167455 | 22083 | 84790 | 3176 | 50.6 | 13.2 |
| ಬಮಂಗೊಲ | 127252 | 11287 | 63459 | 25083 | 49.9 | 8.9 |
| ಗೈಘಾಟ | 300588 | 18841 | 144293 | 4401 | 48.0 | 6.3 |
| ಬಂಗಾಂವ್ | 344044 | 69777 | 161918 | 10245 | 47.1 | 20.3 |

ಚುನಾವಣಾ ಆಯೋಗದ ಅಂಕಿಅಂಶ 2004 ಮತ್ತು 2001ರ ಭಾರತ ಜನಗಣತಿಯ ಆಧಾರದಲ್ಲಿ ಸಾಚಾರ್ ಸಮಿತಿಯು ಈ ಪಟ್ಟಿಯನ್ನು ತಯಾರಿಸಿತ್ತು. ಈ ಹಿನ್ನೆಲೆಯಲ್ಲಿ ಸಾಚಾರ್ ಸಮಿತಿಯು ಸಲಹೆ ಮಾಡಿದ್ದು, ಮತದಾರರ ಪಟ್ಟಿಯನ್ನು ಆಧರಿಸಿ ಆ ಕ್ಷೇತ್ರದಲ್ಲಿ ಮೀಸಲಾತಿ ಘೋಷಣೆ ಮಾಡಬೇಕು. ಒಂದು ಸಮುದಾಯದ ಸಾಂವಿಧಾನಕ ಅವಕಾಶಗಳನ್ನು ತಡೆಹಿಡಿಯುವಂತಹ ಇಂತಹ ವ್ಯವಸ್ಥೆಯನ್ನು ನೀಗಿಸಬೇಕು ಎಂಬುದು ಸಮಿತಿಯ ಶಿಫಾರಸ್ಸಾಗಿತ್ತು.

ಮುಸ್ಲಿಮ್ ಸಮುದಾಯದ ಸಬಲೀಕರಣಕ್ಕೆ ರಾಜಕೀಯ ಅಧಿಕಾರ, ಪ್ರಾತಿನಿಧ್ಯ ಅತ್ಯಗತ್ಯ ಎಂಬುದು ಇತ್ತೀಚಿನ ದಿನಗಳಲ್ಲಿ ಮುಸ್ಲಿಮರ ನಡುವೆ ಚರ್ಚೆಯಾಗತೊಡಗಿದೆ. ಈ ನಿಟ್ಟಿನಲ್ಲಿ ರಾಜಕೀಯ ಪಕ್ಷವು ಹುಟ್ಟಿಕೊಳ್ಳುತ್ತಿದ್ದು, ಅದನ್ನು ಆರಂಭದಲ್ಲೇ ಚಿವುಟಿ ಹಾಕುವ ಪ್ರಯತ್ನವೂ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಸಮುದಾಯವು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳುತ್ತಿದ್ದು, ಈವರೆಗೆ ಇತರ ರಾಜಕೀಯ ಪಕ್ಷಗಳನ್ನೇ ಹಿಂಬಾಲಿಸುತ್ತಿದ್ದ ಮುಸ್ಲಿಮ್ ಸಮುದಾಯವು ಹೊಸ ರಾಜಕೀಯ ಬದಲಾವಣೆಯೆಡೆಗೆ ಸಾಗುತ್ತಿರುವುದು ಆಶಾದಾಯಕ.

# ತಾಯಿಫ್ ಜೈಲಿನಿಂದ ಸುಲೈಮಾನ್ ಬಿಡುಗಡೆ

## ಐಎಫ್‌ಎಫ್‌ನ ಕಾನೂನು ಹೋರಾಟಕ್ಕೆ ಸಂದ ಜಯ



ಸೌದಿ ಅರೇಬಿಯಾ: ಕಳೆದ ಎರಡು ವರ್ಷಗಳಿಂದ ತಾಯಿಫ್‌ನ ಜೈಲಿನಲ್ಲಿ ಬಂಧಿತರಾಗಿದ್ದ ಸುಲೈಮಾನ್ ಅಬೂಬಕರ್ ನೆಲ್ಯಾಡಿ ಬಿಡುಗಡೆಗೊಂಡಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಇಂಡಿಯಾ ಫ್ರೆಟರ್ನಿಟಿ ಫಾರಂನ ಮುಖಂಡರು, ಸುಲೈಮಾನ್(53) ರವರು ಶೀಘ್ರವೇ ತವರಿಗೆ ಮರಳಲಿದ್ದಾರೆ ಎಂದು ತಿಳಿಸಿದ್ದಾರೆ.

ಸುಲೈಮಾನ್‌ರವರು ತಾಯಿಫ್‌ನಲ್ಲಿ ಟ್ರಕ್ ಡ್ರೈವರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಸಂದರ್ಭ ಅವರು ಚಲಾಯಿಸುತ್ತಿದ್ದ ಕಾರೊಂದಕ್ಕೆ ಢಿಕ್ಕಿ ಹೊಡೆದು ಆರು ಮಂದಿ ಸೌದಿ ಪ್ರಜೆಗಳು ಅಸುನೀಗಿದ್ದರು. ಈ ಹಿನ್ನೆಲೆಯಲ್ಲಿ ಸುಲೈಮಾನರನ್ನು ತಾಯಿಫ್‌ನ ಜೈಲಿನಲ್ಲಿ ಬಂಧಿಸಿಡಲಾಗಿತ್ತು.

ಸುಲೈಮಾನ್‌ರವರ ಬಿಡುಗಡೆಗಾಗಿ ಅಲ್ಲಿನ ಕೋರ್ಟ್ ಸೌದಿ ರಿಯಾಲ್ 6 ಲಕ್ಷ(75ಲಕ್ಷ ರೂ.)ವನ್ನು ಮೃತರ ಕುಟುಂಬಗಳಿಗೆ ನೀಡುವಂತೆ ಆದೇಶಿಸಿತ್ತು. ಆದರೆ ಸುಲೈಮಾನ್‌ರವರು ಈ ದಂಡವನ್ನು ಭರಿಸಲು ಅಶಕ್ತರಾಗಿ ಜೈಲಿನಲ್ಲಿಯೇ ಕಾಲ ಕಳೆಯುಂತಾಗಿತ್ತು.

ಸುಲೈಮಾನ್‌ರಿಗೆ ಯಾವುದೇ ನೆರವು ದೊರೆಯದ ಸಂದರ್ಭದಲ್ಲಿ ಇಂಡಿಯಾ ಫ್ರೆಟರ್ನಿಟಿ(ಐಎಫ್‌ಎಫ್)ನ ಕಾರ್ಯಕರ್ತರು ಮಾನವೀಯ ನೆಲೆಯಲ್ಲಿ ಸಹಕಾರ ನೀಡಲು ಮುಂದಾದರು. ಆ ಬಳಿಕ ಈ ವಿಷಯವನ್ನು ಐಎಫ್‌ಎಫ್ ಜಿದ್ದಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯ ಗಮನಕ್ಕೆ ತಂದು ನಿರಂತರ ಸಂಪರ್ಕ ಹೊಂದಿತ್ತು.

ಕಾನೂನು ಹೋರಾಟದ ಮೂಲಕ ತಾಯಿಫ್ ಜೈಲಿನಿಂದ ಸುಲೈಮಾನ್‌ರವರು ಇದೀಗ ಬಿಡುಗಡೆಗೊಂಡಿದ್ದಾರೆ. ಇದು ಕಾನೂನು ಹೋರಾಟಕ್ಕೆ ಸಂದ ಜಯ ಎಂದು ಐಎಫ್‌ಎಫ್ ತಾಯಿಫ್‌ನ ಮುಖಂಡರು ಪ್ರತಿಕ್ರಿಯಿಸಿದ್ದಾರೆ.

# ನೌಶಾದ್ ಖಾಸಿಂಜಿ ಹತ್ಯೆ: ನ್ಯಾಯವಾದಿಗೆ ನ್ಯಾಯ ದೊರಕಲಿ

● ಶೌಕತ್ ಅಲಿ ಎಸ್.




ಮಾನವ ಹಕ್ಕುಗಳ ಉಲ್ಲಂಘನೆಯ ಧ್ವನಿಯೊಂದು ಅಡಗಿ 2 ವರ್ಷಗಳು ಸಂದಿವೆ. ತನ್ನ ನ್ಯಾಯಯುತವಾದ ಮಾತುಗಳಿಂದಲೇ ಸದಾ ನ್ಯಾಯ ದೀಪವನ್ನು ಬೆಳಗಿಸುತ್ತಿದ್ದ ಧೀರ ನ್ಯಾಯವಾದಿಯೊಬ್ಬರು ಇಂದು ನಮ್ಮೆದುರಿಗಿಲ್ಲ. ಆದರೆ ಅವರು ಬಿಟ್ಟು ಹೋದ ಆದರ್ಶಗಳು ಎಂದೆಂದಿಗೂ ನಮಗೆ ಮಾದರಿಯಾಗಿದೆ.

ಅಮಾಯಕರ ಮೇಲೆ ನಡೆಯುತ್ತಿರುವ ಪೊಲೀಸ್ ದೌರ್ಜನ್ಯ, ಶ್ರೀರಾಮ ಸೇನೆಯ ಕಾರ್ಯಕರ್ತರಿಂದ ನಡೆದ ಪಬ್ ದಾಳಿ, ರೌಡಿಗಳು ಎಂದು ಪ್ರಚಾರ ಪಡಿಸಿ ನಡೆದ ನಕಲಿ ಎನ್‌ಕೌಂಟರ್, ಜಿಹಾದ್, ಮತಾಂತರ ಎಂದು ಆರೋಪಿಸಿ ಮಸ್ಜಿದ್, ಚರ್ಚ್‌ಗಳ ಮೇಲೆ ದಾಳಿ ಹೀಗೆ ಕರಾವಳಿಯಲ್ಲಿ ನಡೆಯುತ್ತಿದ್ದ ಹತ್ತು ಹಲವು ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಧ್ವನಿ ಎತ್ತುತ್ತಿದ್ದ ಮಾನವ ಹಕ್ಕುಗಳ ಹೋರಾಟಗಾರ, ಖ್ಯಾತ ನ್ಯಾಯವಾದಿ ನೌಶಾದ್ ಖಾಸಿಂಜಿಯವರು ದೇಶದ್ರೋಹಿಗಳ ಗುಂಡೇಟಿಗೆ ಎದೆಯೊಡ್ಡಿ ಹುತಾತ್ಮರಾಗಿ ಇಂದಿಗೆ 2 ವರ್ಷಗಳು ಸಂದಿವೆ.

ನೌಶಾದ್ ಖಾಸಿಂಜಿ ಎಂದೂ ತನ್ನ ವೃತ್ತಿಯನ್ನು ಲಾಭದಾಯಕ ವೃತ್ತಿಯನ್ನಾಗಿ ದುರುಪಯೋಗಪಡಿಸಲಿಲ್ಲ. ಶಹೀದ್ ನೌಶಾದ್ ಖಾಸಿಂಜಿ ಶ್ರೀಮಂತ ಕುಟುಂಬದಿಂದಲೇ ಬಂದವರಾಗಿದ್ದರು. ಅವರಿಗೆ ಎಂದೂ ಹಣದ ಅಮಲೇರಿರಲಿಲ್ಲ. ತನ್ನ ವೃತ್ತಿ ಜೀವನದ ಬಹುತೇಕ ಭಾಗವನ್ನು ಅವರು ಅಮಾಯಕರ ಪರವಾಗಿ, ದೌರ್ಜನ್ಯಕ್ಕೊಳಗಾದವರ ಪರವಾಗಿ, ಮರ್ದಿತರ ಪರವಾಗಿ ಕಳೆದಿದ್ದಾರೆ.

ದೇಶಾದ್ಯಂತ ವ್ಯಾಪಕ ಚರ್ಚೆಗೊಳಗಾಗಿದ್ದ ಉಡುಪಿ ಶಾಸಕ ರಘುಪತಿ ಭಟ್‌ರ ಪತ್ನಿ ಪದ್ಮಪ್ರಿಯರ ಅಸಹಜ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಅತುಲ್ ರಾವ್ ಎನ್ನುವ ಅಮಾಯಕನ ಪರವಾಗಿ ನೌಶಾದ್ ಖಾಸಿಂಜಿ ನ್ಯಾಯಾಲಯದಲ್ಲಿ ಹೋರಾಟ ನಡೆಸಿದ್ದರು. ಈ ಸಂದರ್ಭ ಸರಕಾರ, ಪೊಲೀಸ್ ವ್ಯವಸ್ಥೆ,

ಸಂಘಪರಿವಾರದ ವಕ್ರದೃಷ್ಟಿಯೂ ಇವರ ಮೇಲೆ ಬಿದ್ದಿತ್ತು.

ಶಂಕಿತ ಎನ್‌ಕೌಂಟರ್‌ಗೆ ಬಲಿಯಾದ ಬುಲೆಟ್ ಸುಧೀರ್‌ನ ಪ್ರಕರಣವನ್ನು ಅವರು ಕೈಗೆತ್ತಿಕೊಂಡಿದ್ದರು. ಈ ಸಂದರ್ಭ ಸುಧೀರ್‌ನ ತಾಯಿಂದ ಯಾವುದೇ ಫೀಜನ್ನು ಪಡೆದುಕೊಂಡಿರಲಿಲ್ಲ. ಬದಲಾಗಿ ಖಾಸಿಂಜಿಯವರೇ ಆ ಬಡ ತಾಯಿಗೆ ಖರ್ಚಿಗೆ ಹಣವನ್ನು ನೀಡಿದ್ದರು.

ಕರಾವಳಿಯಲ್ಲಿ ನಡೆಯಬೇಕಾಗಿದ್ದ ಹಲವು ಎನ್‌ಕೌಂಟರ್‌ಗಳನ್ನು ಅವರು ತಪ್ಪಿಸಿದ್ದರು. ಉಳ್ಳಾಲದಲ್ಲಿ ಶಾಲಾ ಬಾಲಕನಿಗೆ ಪೊಲೀಸ್ ಅಧಿಕಾರಿ ಥಳಿಸಿದಾಗ ಅದರ ವಿರುದ್ಧ ನ್ಯಾಯಾಲದಲ್ಲಿ ವಾದಿಸಿದ್ದರು. ನೌಶಾದ್ ಖಾಸಿಂಜಿ ಕೈಗೆತ್ತಿಕೊಂಡಿದ್ದ ಹೆಚ್ಚಿನೆಲ್ಲಾ ಪ್ರಕರಣಗಳಲ್ಲಿ ಪ್ರಭಾವಿ ರಾಜಕಾರಣಿಗಳು, ಪೊಲೀಸರು, ಬಂಜರಂಗದಳ ಸೇರಿದಂತೆ ಸಂಘಪರಿವಾರದ ಕಾರ್ಯಕರ್ತರೇ ಆರೋಪಿಗಳಾದ್ದರು. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೊಲೆಯು ಪೂರ್ವಯೋಜಿತವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ನ್ಯಾಯವಾದಿ ನೌಶಾದ್‌ರ ಗುರು ಹಿರಿಯ ನ್ಯಾಯವಾದಿ ಪುರುಷೋತ್ತಮ ಪೂಜಾರಿ ನಾಲ್ಕು ಮಂದಿ ಪೊಲೀಸ್ ಅಧಿಕಾರಿಗಳ ವಿರುದ್ಧ ಕೇಸು ದಾಖಲಿಸಿದ್ದಾರೆ. ಡಿಸಿಐಬಿ ಇನ್‌ಸ್ಪೆಕ್ಟರ್ ವೆಂಕಟೇಶ್ ಪ್ರಸನ್ನ, ಡಿವೈಎಸ್ಪಿ ಜಯಂತ ಶೆಟ್ಟಿ, ಎಸ್ ಶಿವಪ್ರಕಾಶ್, ಸಿಐ ವೆಲೆಂಟೈನ್ ಡಿಸೋಜಾ ಎಂಬವರು ನೌಶಾದ್ ಕೊಲೆಯ ಪ್ರಧಾನ ಆರೋಪಿಗಳಾಗಿದ್ದಾರೆ ಎಂದು ಪುರೋಷೋತ್ತಮ ಪೂಜಾರಿಯವರು ದೂರು ದಾಖಲಿಸಿದ್ದರು. ಆದರೆ ಆ ಕೇಸು ಹಳ್ಳ ಹಿಡಿದಂತೆ ಕಾಣುತ್ತದೆ. ಮಾತ್ರವಲ್ಲ ಆರೋಪಿತ ಅಧಿಕಾರಿಯೊಬ್ಬನಿಗೇ ಪ್ರಕರಣದ ತನಿಖೆಯನ್ನು ವಹಿಸಿ ನ್ಯಾಯಾಂಗದ ಅಣಕ ಮಾಡಲಾಗಿತ್ತು.

ಆ ಸಂದರ್ಭ ನಡೆದ ವಿವಿಧ ಪ್ರತಿಭಟನೆಗಳಲ್ಲಿ ನೌಶಾದ್ ಕಾಸಿಂಜಿಯವರ ಹತ್ಯೆ ಪ್ರಕರಣದ ತನಿಖೆಯನ್ನು ಸಿಓಡಿಗೆ ಒಪ್ಪಿಸಬೇಕು ಎಂಬ ಆಗ್ರಹಗಳಿದ್ದವು. ಆದರೆ ಅದ್ಯಾವುದೂ ಕೂಡ ಇಲ್ಲಿನ ಭ್ರಷ್ಟ, ಕೋಮುವಾದಿ ವ್ಯವಸ್ಥೆಗೆ ಕೇಳಿಸಲೇ ಇಲ್ಲ. ಬದಲಾಗಿ ಆರೋಪಿಗಳಿಗೆ ರಕ್ಷಣೆ ನೀಡುವ ಕಾಯಕವನ್ನೇ ಇಲ್ಲಿನ ವ್ಯವಸ್ಥೆ ಮುಂದುವರಿಸಿತು.

ಈ ದೇಶದ ನ್ಯಾಯಾಂಗ ವ್ಯವಸ್ಥೆಯೇ ದುರ್ಬಲವಾಗಿದೆ. ಸಂಘಪರಿವಾರ ಪ್ರೇರಿತವಾದಂತಹ ಪ್ರತಿಯೊಂದು ಅನ್ಯಾಯ, ಅಕ್ರಮಗಳಿಗೆ ನ್ಯಾಯಾಂಗವು ಕುರುಡಾಗಿಯೇ ವರ್ತಿಸುತ್ತಿದೆ. ಈ ದೇಶದಲ್ಲಿ ಸ್ವತಃ ನ್ಯಾಯವಾದಿಯೊಬ್ಬನಿಗೆ ನ್ಯಾಯ ದೊರೆತಿಲ್ಲವೆಂದಾದರೆ ಜನ ಸಾಮಾನ್ಯನಿಗೆ ಎಷ್ಟರ ಮಟ್ಟಿಗೆ ನ್ಯಾಯಾ ದೊರೆಯಬಹುದು.

ಶಹೀದ್ ನೌಶಾದ್ ಖಾಸಿಂಜಿಯವರ ಹತ್ಯೆಯ ಬಗ್ಗೆ ಜನಸಾಮಾನ್ಯರಲ್ಲಿ ಇನ್ನು ಕೂಡ ಗೊಂದಲಗಳಿವೆ. ನಿಜವಾದ ಆರೋಪಿಗಳು ಕಾನೂನು ಕಟಕಟೆಗೆ ಬಂದರೆ ಮಾತ್ರ ಆ ಗೊಂದಲಗಳು ನಿವಾರಣೆಯಾಗಬಹುದು. ಅನ್ಯಾಯದ ವಿರುದ್ಧ ಹೋರಾಡಿ ಸ್ವತಃ ತನ್ನನ್ನು ತಾನು ಸಮರ್ಪಿಸಿಕೊಂಡ ಆ ಧೀರ ಹೋರಾಟಗಾರ ಶಹೀದ್ ನೌಶಾದ್ ಖಾಸಿಂಜಿಯವರ ನೆನಪು ಚಿರಸ್ಮರಣೀಯ.

## ಸೂರ್ಯ ಮತ್ತು ಚಂದ್ರ ಒಂದೇ ಗಾತ್ರದಲ್ಲಿ ಗೋಚರಿಸುವುದೇಕೆ?

ಸೂರ್ಯ ನಮಗೆ ಸನಿಹದಲ್ಲಿರುವ ನಕ್ಷತ್ರ. ಚಂದ್ರ ಭೂಮಿಯನ್ನು ಸುತ್ತುತ್ತಿರುವ ಉಪಗ್ರಹ. ಸೂರ್ಯನ ಗಾತ್ರವು ಚಂದ್ರನ ಗಾತ್ರಕ್ಕಿಂತ ಸಹಸ್ರಾರು ಪಟ್ಟು ದೊಡ್ಡದು. ಸೂರ್ಯನ ವ್ಯಾಸವು ಚಂದ್ರನ ವ್ಯಾಸದ 400 ಪಟ್ಟು ಇದೆ. ಇಷ್ಟೇ ಅಲ್ಲದೆ ವೈಚಿತ್ರ್ಯವ ಎಂದರೆ ಭೂಮಿಯಿಂದ ಸೂರ್ಯನಿಗಿರುವ ಅಂತರವೂ ಭೂಮಿ-ಚಂದ್ರನ ಅಂತರದ 400 ಪಟ್ಟು ಇದೆ.

ಹೀಗಾಗಿ ದೂರದಲ್ಲಿರುವ ಸೂರ್ಯ ಚಂದ್ರನಷ್ಟೇ ಇರುವಂತೆ ನಮಗೆ ಭಾಸವಾಗುತ್ತದೆ. ಉದಾಃ ಖಗ್ರಾಸ ಗ್ರಹಣವಾದಾಗ ಸೂರ್ಯನನ್ನು ಸಂಪೂರ್ಣವಾಗಿ ಚಂದ್ರ ಮರೆ ಮಾಡುತ್ತಾನೆ.



# ವಿದ್ಯಾರ್ಥಿವೇತನದ ಬಗ್ಗೆ ಕಿರು ಮಾಹಿತಿ

ಶಿಕ್ಷಣ ಪಡೆಯುವುದು ಪ್ರತಿಯೊಬ್ಬನ ಮೂಲಭೂತ ಹಕ್ಕು. ಇಂದು ಬಡತನ ಎಂಬ ಕಾರಣದಿಂದ ಹಲವು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಶಾಲಾ ಕಾಲೇಜಿನಲ್ಲಿ ಶುಲ್ಕವನ್ನು ಪಾವತಿಸಲು ಇಂದು ಅದೆಷ್ಟೋ ಮಕ್ಕಳು ಅರ್ಧದಲ್ಲಿಯೇ ಶಾಲೆಯನ್ನು ತೊರೆಯುತ್ತಿದ್ದಾರೆ. ಇದು ದುರಂತವೂ ಹೌದು.

ಪ್ರತಿಯೋರ್ವನಿಗೂ ಶಿಕ್ಷಣ ದೊರೆಯಬೇಕು ಎಂಬ ನಿಟ್ಟಿನಲ್ಲಿ ಸರಕಾರ ಮತ್ತು ಖಾಸಗಿ ಸಂಘಸಂಸ್ಥೆಗಳು ವಿದ್ಯಾರ್ಥಿವೇತನವನ್ನು ನೀಡುತ್ತಿವೆ. ಸರಕಾರ ಹಾಗೂ ಖಾಸಗಿ ಸಂಘಸಂಸ್ಥೆಗಳು ಕೊಡ ಮಾಡುವ ವಿದ್ಯಾರ್ಥಿವೇತನಗಳ ಕಿರು ಮಾಹಿತಿ ಇಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಮಂಗಳೂರಿನಲ್ಲಿರುವ ''ಇನ್ಫೋರ್ಮೇಷನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್''ನ್ನು ಸಂಪರ್ಕಿಸಬಹುದು.

**1.ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:** (1-10ನೆ ತರಗತಿಯ ಶೇ.50 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ) ಅಗತ್ಯವಿರುವ ದಾಖಲೆಗಳು: ಆದಾಯ ಪ್ರಮಾಣ ಪತ್ರ ಅಥವಾ ಸ್ಟಾಂಪ್ ಪೇಪರ್, ಅಂಕಪಟ್ಟಿ, ವಿದ್ಯಾರ್ಥಿಯ ಬ್ಯಾಂಕ್ ಉಳಿತಾಯ ಖಾತೆ. ಆದಾಯದ ಮಿತಿ: 1 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಜುಲೈ 15

**2. ಮಹಿಳಾ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ವಕ್ಫ್ ಫೌಂಡೇಶನ್:** 8,9,10ನೆ ತರಗತಿಯ ಮುಸ್ಲಿಂ ವಿದ್ಯಾರ್ಥಿನಿಯರಿಗೆ, ಶಾಲಾ ಮುಖ್ಯೋಪಾಧ್ಯಯರ ಸಹಿ ಇರುವ ಅಧಿಕೃತ ಅರ್ಜಿ ಮತ್ತು ಬಿಇಓ ಕೌಂಟರ್ ಸಹಿ ಇರುವ ಅಂಕಪಟ್ಟಿಯ ಪ್ರತಿ. ಆದಾಯ ಮಿತಿ: 2.50 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಆಗಸ್ಟ್ 31

**3.ಮೌಲಾನಾ ಆಝಾದ್ ಫೌಂಡೇಶನ್:** (ಶೇ.55 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪಿಯುಸಿ ವಿದ್ಯಾರ್ಥಿಗಳಿಗಾಗಿ) ಅಗತ್ಯವಿರುವ ದಾಖಲೆಗಳು:ಆದಾಯ ಪ್ರಮಾಣ ಪತ್ರ ಅಥವಾ ಅಫಿದಾವಿತ್, ಪ್ರಾಂಶುಪಾಲರಿಂದ ಲಗತ್ತೀಕರಿಸಿದ ಹತ್ತನೆ ತರಗತಿಯ ಅಂಕಪಟ್ಟಿ. ಆದಾಯ ಮಿತಿ: 1 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಆಗಸ್ಟ್ 31

**4.ಮೆಟ್ರಿಕೋತ್ತರ ವಿದ್ಯಾರ್ಥಿ ವೇತನ:** ಶೇ.50 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪಿಯುಸಿ ಮತ್ತು ಪದವಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು:ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಶುಲ್ಕ ಪಾವತಿಸಿದ ರಶೀದಿ ಆದಾಯ ಮಿತಿ:2 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:ಆಗಸ್ಟ್ 7



**5.ಪುರಸ್ಕಾರ ಹಣ:** ಶೇ.60 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪಿಯುಸಿ ಮತ್ತು ಪದವಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅಂಕಪಟ್ಟಿ ಆದಾಯ ಮಿತಿ: 2 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:31 ಆಗಸ್ಟ್

**6.ಅರ್ಹತೆ ಮತ್ತು ಆದಾಯದ ವರಮಾನ:** ಶೇ.50 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಎಲ್ಲಾ ರೀತಿಯ ವೃತ್ತಿಪರ ಕೋರ್ಸ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಆದಾಯ ಪ್ರಮಾಣ ಪತ್ರ ಅಥವಾ ಅಫಿದಾವಿತ್, ಹಿಂದಿನ ಎಲ್ಲಾ ಅಂಕಪಟ್ಟಿಗಳು, ಮನೆ ವಿಳಾಸದ ಆಧಾರ ಪ್ರತಿ, ಶುಲ್ಕ ಪಾವತಿಸಿದ ರಶೀದಿ. ಆದಾಯ ಮಿತಿ: 2.50 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:ಆಗಸ್ಟ್ 10

**7.ಮಹಿಳಾ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ವಕ್ಫ್ ಫೌಂಡೇಶನ್:** ಶೇ.55 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಎಂಬಿಬಿಎಸ್, ಬಿಡಿಎಸ್, ಬಿಇ, ಬಿಎಎಂಎಸ್, ಎಂಬಿಎ, ಬಿಸಿಎ, ಎಂಸಿಎ, ಡಿಇಡಿ, ಬಿಬಿಎಂ ಪದವಿ ವಿದ್ಯಾರ್ಥಿನಿಯರಿಗಾಗಿ, ಅಗತ್ಯವಿರುವ ದಾಖಲೆಗಳು: ಶುಲ್ಕ ಪಾವತಿಸಿದ ರಶೀದಿ, ಪಿಯುಸಿ ಅಂಕಪಟ್ಟಿ, ಸಿಇಟಿ ದಾಖಲಾತಿ ಸೂಚನೆ, ಕಲಿಕಾ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಮತ್ತು ಹಿಂದಿನ ಎಲ್ಲ ಅಂಕಪಟ್ಟಿಗಳು.

**8.ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ಈಗಿರುವ 2% ಸಾಲ ಯೋಜನೆ):** ಎಂಬಿಬಿಎಸ್, ಎಂಜಿನಿಯರಿಂಗ್, ಬಿಡಿಎಸ್, ಎಂಸಿಎ, ಎಂಎ, ಎಂಎಸ್‌ಸಿ, ಟಿಸಿಎಚ್, ಡಿಪ್ಲೋಮ, ಐಟಿಐ, ಬಿಸಿಎ, ಬಿಬಿಎಂ, ಬಿಇಡಿ, ಡಿಇಡಿ, ಕಾನೂನು, ನರ್ಸಿಂಗ್ ಮತ್ತು ಎಲ್ಲಾ ರೀತಿಯ ವೃತ್ತಿಪರ ಕೋರ್ಸ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ. ಅಗತ್ಯವಿರುವ ದಾಖಲೆಗಳು: ಪಾಸ್‌ಪೋರ್ಟ್ ಸೈಝ್ ಫೋಟೊ 4, ರೇಶನ್ ಕಾರ್ಡ್ ಪ್ರತಿ, ಸಿಇಟಿ ದಾಖಲಾತಿ ಸೂಚನೆ, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಅಂಕಪಟ್ಟಿ, ಕಲಿಕಾ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅಫಿದಾವಿತ್. ಆದಾಯ ಮಿತಿ: 1 ಲಕ್ಷ ರೂ. ಅರ್ಜಿ ಸಲ್ಲಿಕೆ: ಶೈಕ್ಷಣಿಕ ವರ್ಷದ ಯಾವುದೇ ಸಂದರ್ಭದಲ್ಲಿ ಅರ್ಜಿ ಸಲ್ಲಿಸಬಹುದು.

**9.ಕೇಂದ್ರ ವಿಭಾಗ ಯೋಜನೆ:** ಶೇ.80 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪಿಯುಸಿ ವಿದ್ಯಾಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅಫಿದಾವಿತ್, ಬ್ಯಾಂಕ್ ಖಾತೆ, ಪಿಯುಸಿ ಅಂಕಪಟ್ಟಿ. ಮಿತಿ:2 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಸೆಪ್ಟಂಬರ್ 30.

**10.ಬ್ಯಾರೀಸ್ ವೆಲ್ಫೇರ್ ಅಸೋಸಿಯೇಷನ್:** ಶೇ.60 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಎಸ್ಸೆಸ್ಸೆಲ್ಸಿ, ಯಾವುದೇ ಪದವಿ ಮತ್ತು ವೃತ್ತಿಪರ ಕೋರ್ಸ್‌ನ ವಿದ್ಯಾಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಅಂಕಪಟ್ಟಿ, ಆದಾಯ ಪ್ರಮಾಣ ಪತ್ರ, ಶುಲ್ಕ ಪಾವತಿಸಿದ ರಶೀದಿ, ರೇಷನ್ ಕಾರ್ಡ್, ಜಮಾಅತ್‌ನ ಪತ್ರ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಮೇ 30.

**11.ಬ್ಯಾರೀಸ್ ಕಲ್ಚರಲ್ ಫೋರಂ:** ಶೇ.60 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಎಸ್ಸೆಸ್ಸೆಲ್ಸಿ, ಯಾವುದೇ ಪದವಿ ಮತ್ತು ವೃತ್ತಿಪರ ಕೋರ್ಸ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಅಂಕಪಟ್ಟಿ, ಆದಾಯ ಪ್ರಮಾಣ ಪತ್ರ, ಶುಲ್ಕ ಪಾವತಿಸಿದ ರಶೀದಿ, ರೇಷನ್ ಕಾರ್ಡ್, ಜಮಾಅತ್‌ನ ಪತ್ರ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಜೂನ್ 25.



**12.ಸಾದ್ ವಿದ್ಯಾರ್ಥಿವೇತನ:** ಶೇ.60 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಎಸ್ಸೆಸ್ಸೆಲ್ಸಿ, ಯಾವುದೇ ಪದವಿ ಮತ್ತು ವೃತ್ತಿಪರ ಕೋರ್ಸ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಅಂಕಪಟ್ಟಿ, ಶುಲ್ಕ ಪಾವತಿಸಿದ ರಶೀದಿ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಜುಲೈ 31.

**13.ಸುಲ್ತಾನೇಟ್ ಆಫ್ ಓಮನ್-ಮಸ್ಕತ್, ಸೋಷಿಯಲ್ ಎಜುಕೇಷನ್ ವೆಲ್ಫೇರ್ ಅಸೋಸಿಯೇಷನ್:** ಶೇ.70 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಎಸ್ಸೆಸ್ಸೆಲ್ಸಿ, ಯಾವುದೇ ಪದವಿ ಮತ್ತು ವೃತ್ತಿಪರ ಕೋರ್ಸ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಅಂಕಪಟ್ಟಿ, ಆದಾಯ ಪ್ರಮಾಣ ಪತ್ರ, ಶುಲ್ಕ ಪಾವತಿಸಿದ ರಶೀದಿ, ಕಲಿಕಾ ಪ್ರಮಾಣ ಪತ್ರ, ಜಮಾಅತ್‌ನ ಪತ್ರ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಜೂನ್ 12.

**14.ಹಮ್ದರ್ದ್ ವಿದ್ಯಾರ್ಥಿವೇತನ:** ಎಸ್ಸೆಸ್ಸೆಲ್ಸಿಯಲ್ಲಿ ಶೇ.80, ಪಿಯುಸಿಯಲ್ಲಿ ಶೇ.75, ಪದವಿಯಲ್ಲಿ ಶೇ.70 ಅಂಕ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಅಂಕಪಟ್ಟಿ, ಆದಾಯ ಪ್ರಮಾಣ ಪತ್ರ ಅಥವಾ ಅಫಿದಾವಿತ್, ಹಿಂದಿನ ಎಲ್ಲಾ ಅಂಕಪಟ್ಟಿಗಳು, ಮನೆ ವಿಳಾಸದ ಆಧಾರ ಪ್ರತಿ, ಕಲಿಕಾ ಪ್ರಮಾಣ ಪತ್ರ, ಮತ್ತು ಶುಲ್ಕ ಪಾವತಿಸಿದ ರಶೀದಿ. ಆದಾಯ ಮಿತಿ: 1 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಸೆಪ್ಟಂಬರ್ 30.

**15.ಅಲ್-ಅಮೀನ್ ಪ್ರೊಫೆಶನಲ್ ಸ್ಕಾಲರ್‌ಶಿಪ್:** ಸಿಇಟಿಯಡಿ ಬರುವ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ

ದಾಖಲೆಗಳು: ಅಂಕಪಟ್ಟಿ, ಆದಾಯ ಪ್ರಮಾಣ ಪತ್ರ ಅಥವಾ ಅಫಿದಾವಿತ್, ಹಿಂದಿನ ಎಲ್ಲಾ ಅಂಕಪಟ್ಟಿಗಳು, ಮನೆ ವಿಳಾಸದ ಆಧಾರ ಪ್ರತಿ, ಕಲಿಕಾ ಪ್ರಮಾಣ ಪತ್ರ, ಮತ್ತು ಶುಲ್ಕ ಪಾವತಿಸಿದ ರಶೀದಿ. ಆದಾಯ ಮಿತಿ: 1 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಜೂನ್ 6.

**16.ಐಡಿಬಿ ವಿದ್ಯಾರ್ಥಿ ವೇತನ ಬಡ್ಡಿರಹಿತ ಸಾಲದೊಂದಿಗೆ:** ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಎಲ್ಲಾ ವಿವಿಧ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಹಿಂದಿನ ಎಲ್ಲಾ ಅಂಕಪಟ್ಟಿಗಳು, ಮುಂಗಡ ಹಣ ಪಾವತಿಸಿದ ರಶೀದಿ, ಆದಾಯ ಪ್ರಮಾಣ ಪತ್ರ, ವೈದ್ಯಕೀಯ ಪ್ರಮಾಣ ಪತ್ರ, ತಮ್ಮ ವಿಳಾಸ ಹೊಂದಿರುವ ಎರಡು ಲಕೋಟೆ. ಆದಾರ್ಯ ಮಿತಿ: 2 ಲಕ್ಷ ರೂ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಆಗಸ್ಟ್ 25.

**17.ಅಜ್ಮಲ್ ಫೌಂಡೇಶನ್:** ಶೇ.75 ಅಂಕ ಪಡೆದ ಎಲ್ಲಾ ತರಗತಿಯ ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗಾಗಿ. ಅಗತ್ಯವಿರುವ ದಾಖಲೆಗಳು: ಆದಾಯ ಪ್ರಮಾಣ ಪತ್ರ ಅಥವಾ ಅಫಿದಾವಿತ್, ಹಿಂದಿನ ಎಲ್ಲಾ ಅಂಕಪಟ್ಟಿಗಳು, ಮನೆ ವಿಳಾಸ ಆಧಾರ ಪ್ರತಿ, ಕಲಿಕಾ ಪ್ರಮಾಣ ಪತ್ರ, ಶುಲ್ಕ ಪಾವತಿಯ ರಶೀದಿ, ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಆಗಸ್ಟ್ 30.

**18:ಬೀಡಿ ವಿದ್ಯಾರ್ಥಿವೇತನ:** ಎಲ್ಲಾ ವಿದ್ಯಾಥಿ-ವಿದ್ಯಾರ್ಥಿನಿಯರಿಗೆ. ಅಗತ್ಯವಿರುವ ದಾಖಲೆಗಳು: ಪೋಷಕರು ಹೊಂದಿರುವ ಕನಿಷ್ಠ ಆರು ತಿಂಗಳು ಆದ ಬೀಡಿ ನೌಕರರ ಪಾಸ್‌ಬುಕ್, ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಆದಾಯ ಮಿತಿ: 10,000 ರೂ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:ಆಗಸ್ಟ್ 31

**19.ಯೆನೆಪೋಯ ಮ್ಯೊದೀನ್ ಕುಂಞ ಮೆಮೋರಿಯಲ್ ಎಜುಕೇಷನ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್, ದೇರಳಕಟ್ಟೆ:** ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ ವಿದ್ಯಾಥಿ-ವಿದ್ಯಾರ್ಥಿನಿಯರಿಗಾಗಿ. ಅಗತ್ಯವಿರುವ ದಾಖಲೆಗಳು: ಆದಾಯ ಪ್ರಮಾಣ ಪತ್ರ ಅಥವಾ ಅಫಿದಾವಿತ್, ಹಿಂದಿನ ಎಲ್ಲ ಅಂಕಪಟ್ಟಿಗಳು, ಕಲಿಕಾ ಪ್ರಮಾಣ ಪತ್ರ ಮತ್ತು ಶುಲ್ಕ ಪಾವತಿಸಿದ ರಶೀದಿ.


SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

OUR SERVICES:

•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

OUR FREE SERVICES:

SAUDI AIR-TICKET RE-CONFIRMATION
RE-ENTRY VISA DATE CHECKING

CONTACT

HEAD OFFICE:
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

MANGALORE OFFICE
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
Tel: 0091 824 2442020. (4lines)
Telefax: 00918244277690
Mobile: 0091 9448253825
Email:suhanamglr@yahoo.co.in

FOR OUR WAKALA



# ಉತ್ತಮ ಆರೋಗ್ಯಕ್ಕೆ ಕೆಲವು ಸಲಹೆಗಳು...

**ಆಯಾಸ ನಿವಾರಣೆಗೆ ಕೆಲವು ಸಲಹೆಗಳು**

★ಕಲ್ಲಂಗಡಿ ಹಣ್ಣಿನ ಪಾನಕ ಸೇವನೆಯಿಂದ ಆಯಾಸ ಪರಿಹಾರವಾಗುವುದು.

★ಕಿತ್ತಳೆ ಹಣ್ಣಿನ ರಸ ಆರೋಗ್ಯಕ್ಕೆ ಒಳ್ಳೆಯದು. ಅದರ ರಸ ಕುಡಿಯುವುದರಿಂದ ಆಯಾಸ ಪರಿಹಾರವಾಗುವುದರ ಜೊತೆಗೆ ರಕ್ತ ಶುದ್ಧಿಯಾಗುತ್ತದೆ. ರಕ್ತ ಹೆಚ್ಚುತ್ತದೆ.



★ಒಂದು ಬಟ್ಟಲು ಮಾವಿನ ಹಣ್ಣಿ ರಸಕ್ಕೆ ಅಷ್ಟೇ ಪ್ರಮಾಣದ ಹಾಲಿನೊಂದಿಗೆ ಬೆರೆಸಿ ಒಂದು ಟೀ ಚಮಚದಷ್ಟು ಜೇನುತುಪ್ಪದೊಡನೆ ಸೇವಿಸುವುದರಿಂದ ಆಯಾಸ ಪರಿಹಾರವಾಗುವುದು, ಮಾತ್ರವಲ್ಲದೆ ಆರೋಗ್ಯವೂ ವೃದ್ಧಿಯಾಗುವುದು.

★ಕಬ್ಬಿನ ರಸವು ಸಹ ಆರೋಗ್ಯಕ್ಕೆ, ಆಯಾಸ ಪರಿಹಾರಕ್ಕೆ ಉತ್ತಮ ಪರಿಹಾರ. ಇದರಿಂದ ದೇಹದಲ್ಲಿ ಚೈತನ್ಯ ಮೂಡುತ್ತದೆ.

★ನಿಂಬೆಹಣ್ಣಿನ ರಸ ಸೇವಿಸುವುದರಿಂದ ಆಯಾಸ ಪರಿಹಾರವಾಗುವುದು.

★ಕೆಂಪು ಮೂಲಂಗಿ ತುರಿದು, ಕೋಸಂಬರಿ ತಯಾರಿಸಿ ಸೇವಿಸುವುದರಿಂದಲೂ ಆಯಾಸ ಕಡಿಮೆಯಾಗುತ್ತದೆ, ಮಾತ್ರವಲ್ಲದೇ ಚೈತನ್ಯ ಸಿಗುತ್ತದೆ.

**ಆರೋಗ್ಯ ರಕ್ಷಣೆಗೆ ಕೆಲವು ಸಲಹೆಗಳು**

★ಸಮಯಕ್ಕೆ ಸರಿಯಾಗಿ ಆಹಾರ ಸೇವಿಸುವ ಅಭ್ಯಾಸ ಬೆಳೆಸಿಕೊಳ್ಳುವುದು ಉತ್ತಮ. ಇಲ್ಲದಿದ್ದರೆ ಹೊಟ್ಟೆಯಲ್ಲಿ ವಾಯು ತುಂಬಿಕೊಳ್ಳುತ್ತದೆ. ಯಾವಾಗಲೂ ಹಸಿವೆಯಾದ ನಂತರವೇ ಊಟ ಮಾಡುವುದು ಆರೋಗ್ಯಕ್ಕೆ ಉತ್ತಮ.

★ಪ್ರತಿನಿತ್ಯವೂ ಹಣ್ಣಿನ ರಸ ಸೇವಿಸುವ ಅಭ್ಯಾಸ ಬಹಳ ಒಳ್ಳೆಯದು. ಇದರಿಂದ ದೇಹಾರೋಗ್ಯ ಉತ್ತಮಗೊಳ್ಳುತ್ತದೆ.

★ಪ್ರತಿದಿನ ಆಹಾರ ಸೇವಿಸಿದ ನಂತರ ಎರಡೆರಡು ಬಾಳೆಹಣ್ಣು ಸೇವಿಸುವ ಅಭ್ಯಾಸ ಒಳ್ಳೆಯದು. ಇದರಲ್ಲಿ ಪೊಟ್ಯಾಶಿಯಂ ಎಂಬ ಲವಣದಂಶ ವಿರುತ್ತದೆ. ಇದು ರಕ್ತದೊತ್ತಡ ನಿಯಂತ್ರಿಸುವ ಸಾಮರ್ಥ್ಯ ಪಡೆದಿರುತ್ತದೆ.

★ಪ್ರತಿದಿನ ಮುಂಜಾನೆಯ ಸಮಯದಲ್ಲಿ ವ್ಯಾಯಾಮ ಮಾಡುವ ಅಭ್ಯಾಸ ಮಾಡಿಕೊಂಡರೆ ಬಹಳ ಒಳ್ಳೆಯದು. ಇದರಿಂದ ದೇಹದ ಆರೋಗ್ಯ ರಕ್ಷಣೆಯಾಗಿ, ಬೊಜ್ಜು ಬೆಳೆಯುವುದಿಲ್ಲ. ಮಾತ್ರವಲ್ಲದೆ ಜೀವನದಲ್ಲಿ ಲವಲವಿಕೆ ಇರುತ್ತದೆ. ಆತ್ಮವಿಶ್ವಾಸ, ಧೈರ್ಯ ಮೂಡುತ್ತದೆ.

**ಕಣ್ಣುನೋವಿಗೆ ಮನೆಮದ್ದು**

★ಆಹಾರದೊಂದಿಗೆ ಈರುಳ್ಳಿಯನ್ನು ನಂಜಿಕೊಂಡು ಸೇವಿಸುತ್ತಿದ್ದರೆ ಕಣ್ಣುನೋವು ಪರಿಹಾರವಾಗುವುದು.

★ಪ್ರತಿದಿನವೂ ಬಿಸಿ ನೀರಿನಲ್ಲಿ ಸ್ನಾನ ಮಾಡುವುದರಿಂದಲೂ ಕಣ್ಣು ನೋವು ಕಡಿಮೆಯಾಗುತ್ತದೆ.

★ಬಾಳೆಹಣ್ಣನ್ನು ಮೊಸರಿನಲ್ಲಿ ಕಲೆಸಿಕೊಂಡು ಸೇವಿಸಿದರೆ ಕಣ್ಣು ಉರಿ ಪರಿಹಾರವಾಗುತ್ತದೆ.

★ಬದನೆಕಾಯಿ ಪಲ್ಯ ಆಹಾರ ಸೇವಿಸುತ್ತಿದ್ದರೆ ಕಣ್ಣು ನೋವು, ದೃಷ್ಟಿ ಮಾಂದ್ಯತೆ ನಿವಾರಣೆಯಾಗುತ್ತದೆ.

**ಕಿವಿನೋವಿಗೆ ಮನೆಮದ್ದು**

★ಕಿವಿನೋವಿಗೆ ತುಳಸಿ ರಸವು ಉತ್ತಮವಾದದ್ದು.

★ಈರುಳ್ಳಿ ರಸವು ಕಿವಿನೋವಿಗೆ ಉತ್ತಮ ಪರಿಣಾಮಕಾರಿ. ಈರುಳ್ಳಿಯನ್ನು ಕಿವಿಗೆ ಹಿಂಡುವುದರಿಂದ ಕಿವಿ ನೋವು ಕಡಿಮೆಯಾಗುತ್ತದೆ.

★ಕಿವಿಯೊಳಗೆ ಕ್ರಿಮಿ-ಕೀಟ ಸೇರಿಕೊಂಡಿದ್ದರೆ ಒಂದು ಚಮಚ ಬೇವಿನ ಸೊಪ್ಪಿನ ರಸಕ್ಕೆ ಒಂದು ಚಿಟಿಕೆ ಉಪ್ಪು ಬೆರೆಸಿ, ಒಂದೆರಡು ಹನಿಗಳು ಹಾಕುವುದರಿಂದ ಕಿವಿ ನೋವು ನಿವಾರಣೆಯಾಗುವುದು.

★ನೀರಿನಲ್ಲಿ ಉಪ್ಪು ಬೆರೆಸಿ ಅದನ್ನು ಉಗುರು ಬೆಚ್ಚಗೆ ಮಾಡಿ ಒಂದೆರಡು ಹನಿಗಳನ್ನು ಕಿವಿಗೆ ಹಾಕುವುದರಿಂದ ಕಿವಿಗೆ ಸೇರಿಕೊಂಡು ಕ್ರಿಮಿ-ಕೀಟಗಳು ಹೊರ ಬರುತ್ತದೆ.

★ಬೆಳ್ಳುಳ್ಳಿ ತೊಳೆಯನ್ನು ಹರಳೆಣ್ಣೆಯಲ್ಲಿ ಹುರಿದು, ಅದು ತಣ್ಣಗಾದ ತರುವಾಯ ಕಿವಿಗೆ ಒಂದೊಂದೇ ಹನಿ ಹಾಕುತ್ತಿದ್ದರೆ ಕಿವಿ ನೋವು ಪರಿಹಾರವಾಗುತ್ತದೆ.

# ಜೆಡಿಎಸ್ ಕಪಟ ಜಾತ್ಯತೀತ ಪಕ್ಷ: ಮಜೀದ್ ಕೊಡ್ಲಿಪೇಟೆ



ಬೆಂಗಳೂರು: ಜೆಡಿಎಸ್ ಒಂದು ಕಪಟ ಜಾತ್ಯತೀತ ಪಕ್ಷವಾಗಿದೆ. ಇದನ್ನು ಜಾತ್ಯಾತೀತ ಪಕ್ಷವೆಂದು ಕರೆದುಕೊಳ್ಳುವ ಎಚ್.ಡಿ.ದೇವೇಗೌಡ ಮತ್ತು ಕುಮಾರಸ್ವಾಮಿ ಢೋಂಗಿ ಜಾತ್ಯತೀತವಾದಿಗಳು ಎಂದು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ ಕಿಡಿ ಕಾರಿದ್ದಾರೆ.

ಅವರು ಬೆಂಗಳೂರಿನ ಕ್ವೀನ್ಸ್ ರೋಡ್‌ನಲ್ಲಿರುವ ದಾರುಸ್ಸಲಾಮ್ ಸಭಾಂಗಣದಲ್ಲಿ ಪಕ್ಷದ ರಾಜ್ಯ ಮಟ್ಟದ ಸದಸ್ಯತ್ವ ಅಭಿಯಾನವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಜಾತ್ಯತೀತವೆಂದು ಕರೆದುಕೊಳ್ಳುವ ಜೆಡಿಎಸ್ ಪಕ್ಷ ಕೋಮುವಾದಿ ಬಿಜೆಪಿಯೊಂದಿಗೆ ಸೇರಿ ಆಡಳಿತ ನಡೆಸಿದ್ದು ಇವರ ಮೋಸದಾಟಕ್ಕೆ ಸಾಕ್ಷಿಯಾಗಿದೆ. ಬಿಜೆಪಿ ಅಧಿಕಾರಕ್ಕೆ ಬರಲು ನೇರ ಕಾರಣ ಜೆಡಿಎಸ್ ಎಂದು ಅವರು ಹೇಳಿದರು.

ಬಿಜೆಪಿಯೊಂದಿಗೆ ಸಮ್ಮಿಶ್ರ ಸರಕಾರ ಆಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿ ದೆಹಲಿಯಲ್ಲಿ ಪ್ರಧಾನ ಮಂತ್ರಿ ಕರೆದಿದ್ದ ಮುಖ್ಯಮಂತ್ರಿಗಳ ಸಭೆಯಲ್ಲಿ ಕರ್ನಾಟಕದ ಮದರಸಗಳಲ್ಲಿ ಭಯೋತ್ಪಾದನೆ ನಡೆಯುತ್ತಿದೆಯೆಂದು ಹೇಳಿಕೆ ನೀಡುವ ಮೂಲಕ ಕುಮಾರಸ್ವಾಮಿ ಕೋಮುವಾದದಲ್ಲಿ ತಾನೇನು ಕಡಿಮೆಯಿಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ಅವರು ಟೀಕಿಸಿದರು.

ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷೆ ಮತ್ತು ಬಿಬಿಎಂಪಿ ಕಾರ್ಪೊರೇಟರ್ ಪ್ರೊ. ನಾಝ್ನೀನ್ ಬೇಗಂ ಮಾತನಾಡಿ, ರಾಜಕೀಯ ಆಗುಹೋಗುಗಳಲ್ಲಿ ಮಹಿಳೆಯರು ಸಕ್ರಿಯರಾಗಬೇಕು. ಸರಕಾರ ಮಹಿಳೆಯರಿಗಾಗಿ ಮೀಸಲಿಟ್ಟ ಸ್ಥಾನಗಳ ಪ್ರಯೋಜನವನ್ನು ಕೇವಲ ಉನ್ನತ ಜಾತಿಗಳ ಮಹಿಳೆಯರು ಪಡೆಯುವಂತಾಗಿದೆ. ಆದುದರಿಂದ ಬಡ ಜನರ, ಶೋಷಿತ ಗ್ರಾಮೀಣ ಪ್ರದೇಶಗಳ ಮಹಿಳೆಯರ ನೈಜ ಸಮಸ್ಯೆಗಳ ಅರಿವಿರುವ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಮಹಿಳಾ ಪ್ರತಿನಿಧಿಗಳು ರಾಜಕೀಯದಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಹನ್ನಾನ್ ಮತ್ತು ಅಫ್ಸರ್ ಪಾಶ, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಡಾ। ಆವಾಝ್ ಶರೀಫ್, ಕಾರ್ಯದರ್ಶಿಗಳಾದ ಹೇಮಲತಾ ಮತ್ತುಸಿರಾಜ್, ಬೆಂಗಳೂರು ಜಿಲ್ಲಾಧ್ಯಕ್ಷ ಇರ್ಫಾನ್ ಇಬ್ರಾಹೀಂ ಮತ್ತು ಜಿಲ್ಲೆಯ ಇತರ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

## ಎನ್‌ಸಿಎಚ್‌ಆರ್‌ಒ ರಾಜ್ಯಾಧ್ಯಕ್ಷರಾಗಿ ನಗರಗೆರೆ ರಮೇಶ್ ಆಯ್ಕೆ

ಬೆಂಗಳೂರು: ಮಾನವ ಹಕ್ಕು ಸಂಘಟನೆಗಳ ರಾಷ್ಟ್ರೀಯ ಒಕ್ಕೂಟ, ಕರ್ನಾಟಕ ಘಟಕದ ಪದಾಧಿಕಾರಿಗಳ ಆಯ್ಕೆಯು ಇತ್ತೀಚೆಗೆ ಬೆಂಗಳೂರಿನ ಕ್ವೀನ್ಸ್ ರೋಡ್‌ನಲ್ಲಿರುವ ದಾರುಸ್ಸಲಾಮ್ ಹಾಲ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ನಡೆಯಿತು. ಸಂಘಟನೆಯ ನೂತನ ಅಧ್ಯಕ್ಷರಾಗಿ ಬೆಂಗಳೂರು ನ್ಯಾಶನಲ್ ಕಾಲೇಜಿನ ನಿವೃತ್ತ ಶಿಕ್ಷಕ ಪ್ರೊ। ನಗರಗೆರೆ ರಮೇಶ್ ಆಯ್ಕೆಯಾಗಿದ್ದಾರೆ. ಅದೇ ವೇಳೆ ಸಾಮಾಜಿಕ ಕಾರ್ಯಕರ್ತೆ ಇಶ್ರತ್ ನಿಸಾರ್ ಮತ್ತು ಬರಹಗಾರ ಸುರೇಶ್ ಭಟ್ ಬಾಕ್ರಬೈಲು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅಡ್ವೊಕೇಟ್ ಅಶ್ರಫ್ ಅಗ್ನಾಡಿಯವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ದಲಿತ ಜಾಗೃತಿ ಮಹಿಳಾ ಸಂಘದ ಚಂದ್ರಮ್ಮ ಮತ್ತು ದಲಿತ ನಾಯಕ ಚಾಮರಾಜ ನಗರದ ಸಂಘಸೇನಾ ಕಾರ್ಯದರ್ಶಿಗಳಾಗಿ ಆಯ್ಕೆಯಾದರು.

ಅಡ್ವೊಕೇಟ್ ಮುಹಮ್ಮದ್ ಉಸ್ಮಾನ್ ಝಾಕಿರ್ ಕೋಶಾಧಿಕಾರಿಯಾಗಿ ಆಯ್ಕೆಯಾದರು.

**ಕಾರ್ಯಕಾರಿ ಸಮಿತಿ ಸದಸ್ಯರು:** ಪಿಯುಸಿಎಲ್ ರಾಜ್ಯ ಕಾರ್ಯದರ್ಶಿ ಡಾ। ವಿ.ಲಕ್ಷ್ಮಿ ನಾರಾಯಣ್, ಫಾದರ್ ವಿಲಿಯಮ್ ಮಾರ್ಟಿಸ್, ಅಡ್ವೊಕೇಟ್ ಸಾದುದ್ದೀನ್ ಸಾಲಿ ಮಂಗಳೂರು, ಮಾನವ ಹಕ್ಕು ಹೋರಾಟಗಾರ ಡಾ। ವಿ.ಎಸ್.ಶ್ರೀಧರ್ ಉಡುಪಿ, ಹ್ಯೂಮನ್ ರೈಟ್ಸ್ ಫೆಡರೇಶನ್ ಆಫ್ ದಲಿತ್ ಲಿಬರೇಶನ್‌ನ ಗಂಗಣ್ಣ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಕೇಶವ ಮೂರ್ತಿ, ಅಡ್ವೊಕೇಟ್ ಅಬೂಬಕರ್ ಮಡಿಕೇರಿ, ಮುಹಮ್ಮದ್ ಕಕ್ಕಿಂಜೆ, ಝಿಯಾವುಲ್ಲಾ ಚಾಮರಾಜನಗರ, ಸರ್ವೋಜನ ಸೇವಾ ಟ್ರಸ್ಟ್‌ನ ರಾಮಾಂಜನಪ್ಪ ಅಡ್ವೊಕೇಟ್ ಶಾಹ್ ತಾಜ್, ವೆಂಕಟರ ರಾಜು ಚಾಮರಾಜನಗರ, ಅಡ್ವೊಕೇಟ್ ಇರೇಶ್ ಸಿರ್ಶಿ.

ಎನ್‌ಸಿಎಚ್‌ಆರ್‌ಒದ ರಾಷ್ಟ್ರೀಯ ಸಂಯೋಜಕ ರೇಣಿ ಐಲಿನ್ ಮತ್ತು ರಾಜ್ಯ ಸಂಯೋಜಕ ಮುಹಮ್ಮದ್ ಕಕ್ಕಿಂಜೆ ಚುನಾವಣಾ ಮೇಲುಸ್ತುವಾರಿ ವಹಿಸಿಕೊಂಡಿದ್ದರು.

## ಮಂಗಳೂರು: ಎಸ್‌ಡಿಪಿಐ ಸದಸ್ಯತ್ವ ಅಭಿಯಾನದ ಉದ್ಘಾಟನೆ




ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕರ್ನಾಟಕ ರಾಜ್ಯಾದ್ಯಂತ ಹಮ್ಮಿಕೊಂಡ ಸದಸ್ಯತ್ವ ಅಭಿಯಾನಕ್ಕೆ ನಗರದ ಪುರಭವನದಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಪಕ್ಷದ ಜಿಲ್ಲಾಧ್ಯಕ್ಷ ಅಬ್ದುಲ್ ಜಲೀಲ್ ಕೆ. ವಹಿಸಿದ್ದರು. ಪಕ್ಷದ ರಾಜ್ಯ ಉಪಾಧ್ಯಕ್ಷ ಅಬ್ದುಲ್ ಲತೀಫ್ ಪುತ್ತೂರು ಕಾರ್ಯಕ್ರಮ ಉದ್ಘಾಟಿಸಿದರು. ವೇದಿಕೆಯಲ್ಲಿ ಪಕ್ಷದ ಪದಾಧಿಕಾರಿಗಳಾದ ಅನ್ವರ್ ಸಾದಾತ್, ನ್ಯಾಯವಾದಿ ಮಜೀದ್ ಖಾನ್, ಇಸ್ಮಾಯೀಲ್ ಎಂಜಿನಿಯರ್, ಮುಹಮ್ಮದ್ ಶರೀಫ್, ಅಬೂಬಕ್ಕರ್ ಸಿದ್ದೀಕ್, ನವಾಝ್ ಉಳ್ಳಾಲ್, ಹಮೀದ್ ಸಾಲ್ಮರ, ಅಕ್ಬರ್ ಬೆಳ್ತಂಗಡಿ, ಅಕ್ರಂ ಹಸನ್ ಉಳ್ಳಾಲ ಮತ್ತಿತರಿದ್ದರು.

ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ ಸ್ವಾಗತಿಸಿದರು. ಫಝ್‌ಲುದ್ದೀನ್ ಆತೂರು ವಂದಿಸಿದರು. ಸಲೀಂ ಗುರುವಾಯನಕೆರೆ ಕಾರ್ಯಕ್ರಮ ನಿರೂಪಿಸಿದರು.

# ದಲಿತ-ಮುಸ್ಲಿಮರ ಐಕ್ಯತೆಯಿಂದ ಹಿಂದುತ್ವದ ನಾಶ



ಮಂಗಳೂರು: ಈ ದೇಶದಲ್ಲಿ ಮುಸ್ಲಿಮರು 15 ಶೇಕಡವಿದ್ದರೆ, ದಲಿತರು 20% ಜನಸಂಖ್ಯೆಯನ್ನು ಹೊಂದಿದ್ದಾರೆ. ಈ ಎರಡು ವರ್ಗಗಳು ಒಂದಾದರೆ ಬ್ರಾಹ್ಮಣಶಾಹಿಗಳಿಂದ ದೇಶವನ್ನು ರಕ್ಷಿಸುವುದು ಸಾಧ್ಯ ಎಂದು ದಲಿತ್ ವಾಯ್ಸ್ ಪತ್ರಿಕೆಯ ಸಂಪಾದಕ ವಿ.ಟಿ.ರಾಜಶೇಖರ ಹೇಳಿದ್ದಾರೆ.

**ವಿ.ಟಿ.ರಾಜಶೇಖರ್**

ಅವರು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು ಅಂಬೇಡ್ಕರ್ ಜನ್ಮದಿನದ ಪ್ರಯುಕ್ತ ಇಲ್ಲಿನ ಕಚೇರಿಯಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನುದ್ದೇಶಿಸಿ ಮಾತನಾಡಿದರು.

ಮುಸ್ಲಿಮರನ್ನು ಮತ್ತು ದಲಿತರನ್ನು ದೇಶದಲ್ಲಿ ಅಲ್ಪಸಂಖ್ಯಾತರನ್ನಾಗಿ ತೋರಿಸಲು ಬ್ರಾಹ್ಮಣಶಾಹಿಗಳು ಯಶಸ್ವಿಯಾಗಿದ್ದಾರೆ. ಹಿಂದೂ ಎಂಬುದು ಒಂದು ಸಮುದಾಯವಲ್ಲ ಅದೊಂದು ಸಂಸ್ಕೃತಿ ಮಾತ್ರವಾಗಿದೆ. ಈ ದೇಶದಲ್ಲಿ ನಿಜವಾದ ಅಲ್ಪಸಂಖ್ಯಾತರು ಬ್ರಾಹ್ಮಣಶಾಹಿಗಳಾಗಿದ್ದಾರೆ. ಅವರನ್ನು ದೇಶದಿಂದ ಹೊಡೆದೋಡಿಸುವುದಕ್ಕಾಗಿ ದಲಿತರು ಮತ್ತು ಮುಸ್ಲಿಮರು ಒಂದಾಗಬೇಕಾಗಿದೆ ಎಂದು ರಾಜಶೇಖರ್ ಕರೆ ನೀಡಿದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ದಲಿತ ಸಂಘರ್ಷ ಸಮಿತಿ ನಾಯಕ ಪಿ.ಕೇಶವ, ದೇಶದಲ್ಲಿ ಮುಸ್ಲಿಮರು ರಾಜಕೀಯವಾಗಿ ಅಲ್ಪಮಟ್ಟದಲ್ಲಿ ಬೆಳವಣಿಗೆ ಕಂಡಿದ್ದಾರೆ. ಹಲವು ಕಾರಣಗಳಿಂದ ದಲಿತರು ರಾಜಕೀಯವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಅದಕ್ಕೆ ಕೆಲವು ಮುಖಂಡರ ದುರಾಸೆಯೂ ಕಾರಣವಾಗಿತ್ತು. ದಲಿತರು ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬದಿಯಲ್ಲಿಟ್ಟು ಭವಿಷ್ಯದಲ್ಲಿ ರಾಜಕೀಯವಾಗಿ ಮುಂದೆ ಬರಲಿದ್ದಾರೆ. ತಮ್ಮ ಉದ್ದೇಶಗಳು ಒಂದೇ ಆಗಿರುವುದರಿಂದ ಮುಂದೆ ಈ ಎರಡೂ ವರ್ಗಗಳೂ ಒಂದಾಗಿ ಸಾಗಬೇಕಾಗಿದೆ ಎಂದು ಅಭಿಪ್ರಾಯಿಸಿದರು.

ಎಸ್‌ಡಿಪಿಐ ನಡೆಸುವ ಎಲ್ಲಾ ಹೋರಾಟದಲ್ಲೂ ದಲಿತರು ಪಾಲ್ಗೊಳ್ಳಲಿದ್ದಾರೆ ಎಂದೂ ಅವರು ನುಡಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ದುಲ್ ಜಲೀಲ್ ಕೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎನ್‌ಸಿಎಚ್‌ಆರ್‌ಒ ರಾಜ್ಯ ಸಂಯೋಜಕ ಮುಹಮ್ಮದ್ ಕಕ್ಕಿಂಜೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಎಸ್‌ಡಿಪಿಐ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ ಸ್ವಾಗತಿಸಿದರೆ, ಮುಹಮ್ಮದ್ ನಾಸಿರ್ ವಂದಿಸಿದರು ಮತ್ತು ಕಾರ್ಯದರ್ಶಿ ಸಲೀಂ ಗುರುವಾಯನಕೆರೆ ಕಾರ್ಯಕ್ರಮ ನಿರೂಪಿಸಿದರು.

## ■ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ: ವಿದ್ಯಾರ್ಥಿಗಳಿಗೆ ಶಾಕಿರ್ ಕರೆ

ಪುತ್ತೂರು: ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವವನ್ನು ಬೆಳಿಸಿಕೊಳ್ಳಬೇಕು. ಸಮಾಜದಲ್ಲಿರುವ ಅನಿಷ್ಟಗಳ ಬಗ್ಗೆ ಅವರು ಪ್ರಶ್ನಿಸಬೇಕು. ವಿದ್ಯಾರ್ಥಿಗಳು ಕೇವಲ ಪಠ್ಯ ಪುಸ್ತಕಗಳಿಗೆ ಮಾತ್ರ ಸೀಮಿತವಾಗಿರದೆ, ಸಾಮಾಜಿಕ ವಿಷಯಗಳನ್ನು ಕೈಗೆತ್ತಿಕೊಳ್ಳಲು ಮುಂದೆ ಬರಬೇಕು ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಕರ್ನಾಟಕ ರಾಜ್ಯಾಧ್ಯಕ್ಷ ಶಾಕಿರ್ ಹೇಳಿದ್ದಾರೆ.

ಅವರು ಇಲ್ಲಿನ ಟೌನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಕಾರ್ಯಕರ್ತರ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ಕಾಲೇಜಿನಲ್ಲೂ ಕ್ಯಾಂಪಸ್ ಫ್ರಂಟ್‌ನ ಶಾಖೆಯನ್ನು ತೆರೆಯುವುದಕ್ಕಾಗಿ ಸಂಘಟನೆಯ ಸದಸ್ಯರು ನೀಡಿದ ಕೊಡುಗೆಯನ್ನು ಅವರು ಶ್ಲಾಘಿಸಿದರು. ಜಿಲ್ಲಾ ಸಮಿತಿ ಸದಸ್ಯ ತೌಸೀಫ್ ವಿಟ್ಲ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ತುಫೈಲ್ ಪುತ್ತೂರು, ಮಾಲಿಕ್ ಉಪ್ಪಿನಂಗಡಿ, ಇಮ್ತಿಯಾಝ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ ಮಹಾರಾಷ್ಟ್ರ: ಎಸ್‌ಡಿಪಿಐ ರಾಜ್ಯಾಧ್ಯಕ್ಷರಾಗಿ ಲಿಯಾಕತ್ ಖಾನ್ ಆಯ್ಕೆ



ಮಹಾರಾಷ್ಟ್ರ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಮಹಾರಾಷ್ಟ್ರ ಘಟಕದ ನೂತನ ಅಧ್ಯಕ್ಷರಾಗಿ ಲಿಯಾಕತ್ ಖಾನ್ ಪುಣೆ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಫಾರಿಖ಼ ನಾಗ್ಪುರ, ಪ್ರಧಾನ ಕಾರ್ಯದರ್ಶಿಯಾಗಿ ಅಝರ್ ತಂಬೂಲಿ, ಕಾರ್ಯದರ್ಶಿಗಳಾಗಿ ಅಝೀಝ್ ಖಾನ್ ಶೋಲಾಪುರ ಮತ್ತು ಝೀಶಾನ್ ಶೇಖ್ ನಾಗ್ಪುರ, ಕೋಶಾಧಿಕಾರಿಯಾಗಿ ಸಯ್ಯದ್ ಅಮೀನ್ ಸತಾರ್ ಆಯ್ಕೆಯಾದರು.

## ■ ಎಂಡೊಸಲ್ಫಾನ್: ಪವಾರ್ ಹೇಳಿಕೆಗೆ ಖಂಡನೆ

ಬೆಂಗಳೂರು: ಎಂಡೋಸಲ್ಫಾನ್‌ನ್ನು ನಿಷೇಧಿಸಲು ಸಾಧ್ಯವಿಲ್ಲವೆಂಬ ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಹೇಳಿಕೆಯನ್ನು ಎಸ್‌ಡಿಪಿಐ, ಕರ್ನಾಟಕ ಘಟಕ ತೀವ್ರವಾಗಿ ಖಂಡಿಸಿದೆ.

ಎಂಡೋಸಲ್ಫಾನ್ ಬಳಕೆಯಿಂದಾಗಿ ಕೇರಳ ಮತ್ತು ಕರ್ನಾಟಕದಲ್ಲಿ ಮಕ್ಕಳು ಸೇರಿದಂತೆ ಸಾವಿರಾರು ಮಂದಿ ಶಾಶ್ವತ ಅಂಗವಿಕಲತೆಯನ್ನು ಹೊಂದಿದ್ದು, ಇದೀಗ ಜೀವಂತ ಶವವಾಗಿ ಬದುಕುತ್ತಿದ್ದಾರೆ. ಇಷ್ಟೊಂದು ಅನಾಹುತಗಳು ನಡೆದಿದ್ದರೂ ಕೃಷಿ ಮಂತ್ರಿಯ ಹೇಳಿಕೆ ಎಂಡೊಸಲ್ಫಾನ್ ಕಂಪೆನಿಗಳ ವಕ್ತಾರರಂತಿರುವುದು ಇವರ ಜನವಿರೋಧಿ ನೀತಿಯನ್ನು ಸೂಚಿಸುತ್ತದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಕೃಷಿ ಮಂತ್ರಿಗಳು ವಾಸ್ತವ ಸ್ಥಿತಿಯನ್ನು ಅರಿಯಬೇಕು. ತಕ್ಷಣ ಉನ್ನತ ತಜ್ಞರ ಸಮಿತಿಯೊಂದಿಗೆ ಎಂಡೋಸಲ್ಫಾನ್ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಭಾರತದಾದ್ಯಂತ ಎಂಡೋಸಲ್ಫಾನ್ ನಿಷೇಧಿಸಲು ಕ್ರಮಕೈಗೊಳ್ಳಬೇಕೆಂದು ಎಸ್‌ಡಿಪಿಐ ಆಗ್ರಹಿಸುತ್ತದೆಯೆಂದು ಅವರು ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಕೇರಳ ಮತ್ತು ಕರ್ನಾಟಕ ಎಸ್‌ಡಿಪಿಐ ಜಂಟಿಯಾಗಿ ಎಂಡೋಸಲ್ಫಾನ್ ವಿರುದ್ಧ ಹೋರಾಟ ನಡೆಸಲಿರುವುದು ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಸರಕಾರ ಎಂಡೊಸಲ್ಫಾನನ್ನು ನಿಷೇಧಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ■ ಬೆಂಗಳೂರು: ಉಚಿತ ನೇತ್ರ ಚಿಕಿತ್ಸಾ ಶಿಬಿರ




ಬೆಂಗಳೂರು: ಬೆಂಗಳೂರು ವೆಸ್ಟ್ ಲಯನ್ಸ್ ಐ ಹಾಸ್ಪಿಟಲ್‌ನ ಮಾರ್ಗದರ್ಶನದಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಚಿಕ್ಕಪೇಟೆ ಅಸೆಂಬ್ಲಿ ಇತ್ತೀಚೆಗೆ ಇಲ್ಲಿನ ಜಯನಗರದ ಎಸ್.ಕೆ.ಶಾಲೆಯಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವೊಂದನ್ನು ಆಯೋಜಿಸಿತು.

ವೆಸ್ಟ್ ಲಯನ್ಸ್ ಆಸ್ಪತ್ರೆಯ ಅನುಭವಿ ವೈದ್ಯರುಗಳ ತಂಡವೊಂದು ಆಗಮಿಸಿ ರೋಗಿಗಳಿಗೆ ಚಿಕಿತ್ಸೆ ನೀಡಿತು. ಶಸ್ತ್ರಚಿಕಿತ್ಸೆಯ ಅಗತ್ಯವಿರುವ ರೋಗಿಗಳಿಗೆ ಆಸ್ಪತ್ರೆಗೆ ಪ್ರಯಾಣ, ಔಷಧ, ಕನ್ನಡಕ ಹಾಗೂ ವಸತಿ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಲಾಗಿತ್ತು.

## ■ ಮಡಿಕೇರಿಯಲ್ಲಿ ಜಾಗೃತಿ ಸಭೆ



ಮಡಿಕೇರಿ: 'ಅಮಾಯಕರನ್ನು ಬಿಡುಗಡೆಗೊಳಿಸಿ, ಅಪರಾಧಿಗಳನ್ನು ಶಿಕ್ಷಿಸಿ, ಭ್ರಷ್ಟಾಚಾರವನ್ನು ತೊಲಗಿಸಿ' ರಾಷ್ಟ್ರೀಯ ಅಭಿಯಾನದ ಅಂಗವಾಗಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು ಇತ್ತೀಚೆಗೆ ಮಡಿಕೇರಿಯಲ್ಲಿ ಜಾಗೃತಿ ಸಭೆಯೊಂದನ್ನು ನಡೆಸಿತು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಫಝುಲುಲ್ಲಾ, ಪ್ರಧಾನ ಕಾರ್ಯದರ್ಶಿ ಅಮೀನ್ ಮುಹ್ಸಿನ್, ದಲಿತ ನಾಯಕ ನಿರ್ವಾಣಪ್ಪ, ಸಿದ್ದಾಪುರ ಗ್ರಾಮ ಪಂಚಾಯತ್ ಸದಸ್ಯ ಶೌಕತ್ ಅಲಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ ಬೆಂಗಳೂರು: ಎಸ್‌ಡಿಪಿಐಯಿಂದ ಅಂಬೇಡ್ಕರ್ ಜಯಂತಿ ಆಚರಣೆ




ಬೆಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಪುಲಿಕೇಶಿನಗರ ಅಸೆಂಬ್ಲಿ ವತಿಯಿಂದ ಅಂಬೇಡ್ಕರ್ ಜಯಂತಿಯ ಅಂಗವಾಗಿ ಸಾರ್ವಜನಿಕ ಕಾರ್ಯಕ್ರಮವೊಂದು ಇತ್ತೀಚೆಗೆ ತನ್ನೇರಿ ರೋಡ್‌ನಲ್ಲಿ ನಡೆಯಿತು.

ಬಿಬಿಎಂಪಿ ಕಾರ್ಪೊರೇಟರ್ ಹಾಗೂ ಎಸ್‌ಡಿಪಿಐ ಉಪಾಧ್ಯಕ್ಷೆ ನಾಝ್ನೀನ್ ಬೇಗಮ್, ಪ್ರಧಾನ ಕಾರ್ಯದರ್ಶಿ ಅಬ್ದುಲ್ ಹನ್ನಾನ್, ಡಾ। ಆವಾದ್ ಶರೀಫ್, ಕಾರ್ಯದರ್ಶಿ ಹೇಮಲತಾ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ■ ಶಿರಾ: ಎಸ್‌ಡಿಪಿಐ ಸಮಿತಿ ರಚನೆ



ತುಮಕೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು ತುಮಕೂರಿನ ಶಿರಾ ತಾಲೂಕಿನಲ್ಲಿ ತನ್ನ ಹೊಸ ಅಸೆಂಬ್ಲಿ ಕಮಿಟಿಯನ್ನು ಸ್ಥಾಪಿಸಿದೆ.

ಪಕ್ಷವು ಎಪ್ರಿಲ್ 11ರಂದು ಈ ಬಗ್ಗೆ ತಾಲೂಕಿನ ತಹಾಶೀಲ್ದಾರಿಗೆ ಪತ್ರವೊಂದನ್ನು ಸಲ್ಲಿಸಿದೆ.

## ■ ಮೈಸೂರು: ಅಂಬೇಡ್ಕರ್ ಜಯಂತಿ ಪ್ರಯುಕ್ತ ರಕ್ತದಾನ ಶಿಬಿರ




ಮೈಸೂರು: ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಅಂಗವಾಗಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು ಮೈಸೂರಿನಲ್ಲಿ ಇತ್ತೀಚೆಗೆ ರಕ್ತದಾನ ಶಿಬಿರವೊಂದನ್ನು ಆಯೋಜಿಸಿತು.

ಬಹುಜನ ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ ಎನ್.ಮಹೇಶ್, ಪ್ರೊ। ಶಬ್ಬೀರ್ ಮುಸ್ತಫಾ, ಎಸ್‌ಡಿಪಿಐ ನಾಯಕ ಸಯ್ಯದ್ ಸೈಫುಲ್ಲಾ, ಜಿಲ್ಲಾಧ್ಯಕ್ಷ ಮುಹಮ್ಮದ್ ಫೈರುಝ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪಾಧ್ಯಕ್ಷ ಜೆ.ಕಿರಣ್ ಕುಮಾರ್ ವಂದಿಸಿ, ಎಂ.ಮುಹಮ್ಮದ್ ಫಝುಲುಲ್ಲಾ ಕಾರ್ಯಕ್ರಮ ನಿರೂಪಿಸಿದರು.

## ■ ಮೈಸೂರು: ಎಸ್‌ಡಿಪಿಐ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಮೈಸೂರು ಜಿಲ್ಲೆಯ ಸದಸ್ಯತ್ವ ಅಭಿಯಾನಕ್ಕೆ ಇತ್ತೀಚೆಗೆ ಇಲ್ಲಿನ ಎಆರ್‌ಕೆ ಫಂಕ್ಷನ್ ಹಾಲ್‌ನಲ್ಲಿ ಚಾಲನೆ ನೀಡಲಾಯಿತು.

ಮಹಿಳೆಯರನ್ನೊಳಗೊಂಡಂತೆ ಹಲವು ಮಂದಿ ಪಕ್ಷದ ಸದಸ್ಯತ್ವ ಸ್ವೀಕರಿಸಿದರು.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ, ಜಿಲ್ಲಾಧ್ಯಕ್ಷ ಮುಹಮ್ಮದ್ ಫೈರುಝ್, ಉಪಾಧ್ಯಕ್ಷ ಕಿರಣ್ ಕುಮಾರ್, ಕೋಶಾಧಿಕಾರಿ ಜೆ.ಫಝುಲುಲ್ಲಾ, ಸಮಿತಿ ಸದಸ್ಯರಾದ ಸಯ್ಯದ್ ಸೈಫುಲ್ಲಾ, ಫಾತಿಮಾ, ಅಕ್ರಮ್, ಶರೀಫ್ ಮತ್ತು ತಬ್ರೇಝ್ ಸೇಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ನ್ಯಾಯ ನಿರಾಕರಿಸಲ್ಪಟ್ಟ ದಲಿತ ಕುಟುಂಬ

## ಪುಟ್ಟ ಬಾಲಕಿಯನ್ನು ಬೆಂಕಿಗೆ ತಳ್ಳಿದ ಮೇಲ್ಜಾತಿಯ ದುಷ್ಕರ್ಮಿಗಳು

ದೇಶದಲ್ಲಿ ದಲಿತರು, ಮುಸ್ಲಿಮರಿಗೆ ನ್ಯಾಯ ನಿರಾಕರಿಸಲ್ಪಡುವುದು ಸರ್ವೇ ಸಾಮಾನ್ಯವಾಗಿದೆ. ಇದಕ್ಕೆ ಹಲವು ದೃಷ್ಟಾಂತಗಳು ನಮ್ಮ ಮುಂದಿವೆ. ಮೇಲ್ವರ್ಗದಿಂದ ಉರಿಯುತ್ತಿರುವ ಬೆಂಕಿಗೆ ಜೀವಂತವಾಗಿ ಎಸೆಯಲ್ಪಟ್ಟ 6ರ ಹರೆಯದ ಕಮ್ಲೇಶ್ ಎಂಬ ಹುಡುಗಿಯನ್ನು ಇತ್ತೀಚಿನ ಉದಾಹರಣೆಯಾಗಿ ನಾವಿಲ್ಲಿ ತೆಗೆದುಕೊಳ್ಳಬಹುದಾಗಿದೆ.

ಉತ್ತರ ಪ್ರದೇಶದ ದಲಿತ ಹುಡುಗಿ ಕಮ್ಲೇಶ್ ಮಾಡಿದ ತಪ್ಪು ಬೆಳಗ್ಗಿನ ಜಾವ ಮೇಲ್ಜಾತಿಯ ಕುಟುಂಬವೊಂದರ ಅಂಗಳದ ಮೂಲಕ ಹಾದು ಹೋದದ್ದು. ಆಕೆ ಹೋದದ್ದು ಅಲ್ಲೇ ಸಮೀಪವಿದ್ದ ದಲಿತ ಸಮುದಾಯವು ಶೌಚಕ್ಕಾಗಿ ಹೋಗುವ ಗುಡ್ಡವೊಂದಕ್ಕೆ. ಅದಕ್ಕಾಗಿ ಆಕೆಯನ್ನು ಬೆಂಕಿಗೆಸೆಯಲಾಯಿತು! ಆಕೆಗೆ ನ್ಯಾಯವು ನಿರಾಕರಿಸಲ್ಪಟ್ಟಿತು, ಆರೋಪಿಗಳನ್ನು ಬಿಡುಗಡೆಗೊಳಿಸಲಾಯಿತು.

ಬೆಂಕಿಯಲ್ಲಿ ಉರಿಯುತ್ತಿದ್ದ ಪುತ್ರಿಯನ್ನು ರಕ್ಷಿಸಲು ಆಕೆಯ ಗರ್ಭಿಣಿ ತಾಯಿ ಮಂಜು ಪ್ರಯತ್ನಪಟ್ಟಳು. ಆದರೆ ಅಪರಾಧಿಗಳು ಆಕೆಯನ್ನು ತಡೆದರು. ಅವರು ಆಕೆಯನ್ನು ಬಲವಾಗಿ ಥಳಿಸಿದರು. ಬೆಂಕಿಯ ನಡುವೆ ತನ್ನ ಪುತ್ರಿಯನ್ನು ನೋಡುತ್ತಾ ಆಕೆ ಮೂರ್ಛೆ ಹೋದಳು. ಕೆಲವು ನಿಮಿಷಗಳ ನಂತರ ಮತ್ತೆ ಪ್ರಜ್ಞೆ ಮರಳಿದ ನಂತರ ಆಕೆ ತನ್ನ ಪುತ್ರಿಯನ್ನು ಬೆಂಕಿಯಿಂದ ಹೊರಗೆಳೆಯಲು ಯಶಸ್ವಿಯಾದಳು. ಆದರೆ ಅದಾಗಲೇ ಆಕೆಯ ದೇಹದ ಶೇ.80ರಷ್ಟು ಭಾಗವು ಬೆಂಕಿಯಲ್ಲಿ ಸುಟ್ಟು ಹೋಗಿತ್ತು. ಆಕೆ ಸಾವಿನ ಅಂಚಿನಲ್ಲಿದ್ದಳು.

ಬೆಂಕಿಯಲ್ಲಿ ಉರಿಯುತ್ತಿದ್ದ ಪುತ್ರಿಯನ್ನು ರಕ್ಷಿಸಲು ಆಕೆಯ ಗರ್ಭಿಣಿ ತಾಯಿ ಮಂಜು ಪ್ರಯತ್ನಪಟ್ಟಳು. ಆದರೆ ಅಪರಾಧಿಗಳು ಆಕೆಯನ್ನು ತಡೆದರು. ಅವರು ಆಕೆಯನ್ನು ಬಲವಾಗಿ ಥಳಿಸಿದರು. ಬೆಂಕಿಯ ನಡುವೆ ತನ್ನ ಪುತ್ರಿಯನ್ನು ನೋಡುತ್ತಾ ಆಕೆ ಮೂರ್ಛೆ ಹೋದಳು. ಕೆಲವು ನಿಮಿಷಗಳ ನಂತರ ಮತ್ತೆ ಪ್ರಜ್ಞೆ ಮರಳಿದ ನಂತರ ಆಕೆ ತನ್ನ ಪುತ್ರಿಯನ್ನು ಬೆಂಕಿಯಿಂದ ಹೊರಗೆಳೆಯಲು ಯಶಸ್ವಿಯಾದಳು. ಆದರೆ ಅದಾಗಲೇ ಆಕೆಯ ದೇಹದ ಶೇ.80ರಷ್ಟು ಭಾಗವು ಬೆಂಕಿಯಲ್ಲಿ ಸುಟ್ಟು ಹೋಗಿತ್ತು. ಆಕೆ ಸಾವಿನ ಅಂಚಿನಲ್ಲಿದ್ದಳು.

ಪುಟ್ಟ ಕಮ್ಲೇಶ್ ಜೀವನ್ಮರಣದ ಮಧ್ಯೆ ಹೋರಾಡುತ್ತಿರುವಾಗ 5 ತಾಸುಗಳು ಸರಕಾರಿ ಆಸ್ಪತ್ರೆಯಲ್ಲಿ ಪೋಲಾಗಿತ್ತು. 36 ಗಂಟೆಗಳ ನಂತರ ಆಕೆಯನ್ನು ದೊಡ್ಡ ಆಸ್ಪತ್ರೆಯೊಂದಕ್ಕೆ ಸ್ಥಳಾಂತರಿಸಲಾಯಿತು. ಅಂತಿಮವಾಗಿ ಆಕೆಯನ್ನು ದಿಲ್ಲಿಯ ಸಫ್ದರ್ಜುಂಗ್ ಆಸ್ಪತ್ರೆಗೆ ಸಾಗಿಸಲಾಯಿತು. ಗಂಭೀರ ಪರಿಸ್ಥಿತಿಯಲ್ಲಿ ತಕ್ಷಣವೇ ಚಿಕಿತ್ಸೆ ನೀಡದ ಕಾರಣ ಆಕೆ ಸರಿಯಾಗಿ ಚೇತರಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಮೂರು ವರ್ಷಗಳ ನಂತರ ಆಕೆಯ ಬಲಗೈಯು ಕೇವಲ ರಬ್ಬರ್ ತುಂಡಿನಂತಿದ್ದು ಯಾವುದೇ ಉಪಯೋಗಕ್ಕೆ ಬರುವುದಿಲ್ಲ. ಆಕೆಯ ಎಡಗೈ ಹಾಗೂ ಬಲಗಾಲು ಸಂಪೂರ್ಣವಾಗಿ ಸುಟ್ಟ ಗಾಯವನ್ನು

ಹೊಂದಿದೆ ಮತ್ತು ಆಕೆ ನೋವಿನಿಂದ ಚೀರುತ್ತಿರುತ್ತಾಳೆ. ಆಕೆಯ ಮೈಮೇಲಿನ ಗಾಯದ ಕಲೆಗಳು ಶಾಶ್ವತ ಮತ್ತು ಭೀಕರ. ಒಂದು ದುರ್ಬಲ ಅಮಾಯಕ ಜೀವವನ್ನು ತನ್ನ ಹಕ್ಕುಗಳನ್ನು ಅನುಭವಿಸುವುದರಿಂದ ತಡೆಯಲಾಗಿದೆ ಮತ್ತು ಬಾಲ್ಯವನ್ನು ಚಿವುಟಿ ಹಾಕಲಾಗಿದೆ.

ಘಟನೆಯು ಆಕೆಯ ತಾಯಿ ಮಂಜುವಿನಲ್ಲಿ ಯಾವ ರೀತಿಯ ಆಘಾತವನ್ನುಂಟುಮಾಡಿದೆಯೆಂದರೆ ಆಕೆ ಮಾನಸಿಕವಾಗಿ ಅಸ್ವಸ್ಥಳಾಗಿದ್ದಾಳೆ ಮತ್ತು ಕೋರ್ಟ್‌ನಲ್ಲಿ ಅಪರಾಧಿಗಳ ವಿರುದ್ಧ ಸಾಕ್ಷ್ಯ ಹೇಳಲು ಸಾಧ್ಯವಾಗಲಿಲ್ಲ. ತೋಳ್ಬಲ, ಹಣ ಬಲ ಮತ್ತು ಪ್ರಭಾವಿ ವ್ಯಕ್ತಿಗಳ ಸಂಪರ್ಕವನ್ನು ಹೊಂದಿರುವ ಆರೋಪಿಗಳ ವಿರುದ್ಧ ಸಾಕ್ಷ್ಯವನ್ನು ನುಡಿಯಲು ಘಟನೆಯನ್ನು ಕಣ್ಣಾರೆ ಕಂಡ ನೆರೆಯ ಯಾವುದೇ ವ್ಯಕ್ತಿಗಳು ಮುಂದೆಬರಲಿಲ್ಲ. ಹಲವರು ಆರೋಪಿಗಳೊಂದಿಗೆ ರಾಜಿಮಾಡಿಕೊಂಡರೆ, ಇನ್ನು ಕೆಲವರ ಭಯದಿಂದ ಮೌನದ ಮೊರೆ ಹೋದರು. ಕಮ್ಲೇಶ್‌ನ ತಂದೆ ಸೌದನ್ ಹೇಳುವಂತೆ ನಾಲ್ವರು ಆರೋಪಿಗಳ ಹೆಸರನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿತ್ತು. ಆದರೆ ಮೂವರ ಹೆಸರನ್ನು ತೆಗೆಯಲಾಯಿತು ಮತ್ತು ಒಬ್ಬ ವ್ಯಕ್ತಿಯನ್ನು ಮಾತ್ರ ಬಂಧಿಸಲಾಯಿತು.



ಇಲ್ಲಿ ನ್ಯಾಯವು ಕೇವಲ ವಿಳಂಬವಾಗಿರುವುದಲ್ಲ. ನ್ಯಾಯದ ನಿರಾಕರಣೆಯಾಗಿದೆ ಮತ್ತು ನ್ಯಾಯವನ್ನು ಬುಡಮೇಲುಗೊಳಿಸಲಾಗಿದೆ. ಇತ್ತೀಚೆಗೆ ಆ ಗ್ರಾಮವನ್ನು ಸಂದರ್ಶಿಸಿದ್ದ ಡಾ। ಜಾನ್ ದಯಾಳ್ ನೇತೃತ್ವದ ಸತ್ಯಶೋಧನಾ ಸಮಿತಿ ಯು ಸಾಕ್ಷ್ಯವಿಲ್ಲವೆಂದು ಪ್ರಕರಣವನ್ನು ಕೋರ್ಟು ಮುಚ್ಚಿ ಹಾಕಿರುವುದನ್ನು ಕಂಡು ಆಶ್ಚರ್ಯಗೊಂಡಿದೆ. ಆರೋಪಿಗಳ ವಿರುದ್ಧ ಸಾಕ್ಷ್ಯ ಹೇಳಲು ಕಮ್ಲೇಶ್‌ನ ತಾಯಿ ಮಾನಸಿಕವಾಗಿ ಅಸಮರ್ಥಳಾಗಿದ್ದಾರೆ ಮತ್ತು ಆರೋಪಿಗಳು ದೋಷ ಮುಕ್ತರಾಗಿದ್ದಾರೆ. ಇದು ಕಮ್ಲೇಶ್ ಕುಟುಂಬಕ್ಕೆ ಗಾಯದ ಮೇಲೆ ಉಪ್ಪು ಹಾಕಿದ ಅನುಭವವುಂಟುಮಾಡಿದೆ. ಅವರಿಗೆ ನ್ಯಾಯವಿಲ್ಲ, ವೈದ್ಯಕೀಯ ನೆರವಿಲ್ಲ, ಭವಿಷ್ಯವಿಲ್ಲ. ರಾಜ್ಯ ಸರಕಾರದ ನೆರವು ಭ್ರಮೆ ಮಾತ್ರವಾಗಿದೆ. ಘಟನೆಯಿಂದ ಅವರ ಆರ್ಥಿಕ ಪರಿಸ್ಥಿತಿಯು ಇನ್ನೂ ಹದಗೆಟ್ಟಿತು. ಪುತ್ರಿಯ ಚಿಕಿತ್ಸೆಗಾಗಿ ಅವರು ಸ್ನೇಹಿತರಿಂದ ಮತ್ತು ಲೇವಾದೇವಿಗಳಿಂದ ಸಾಲವನ್ನು ಪಡೆದರು. ಇದು ಮುಂದೆ ಅವರನ್ನು ಇನ್ನೂ ಇಕ್ಕಟ್ಟಿಗೆ ಸಿಲುಕಿತು. ಸಂತ್ರಸ್ತರು ಇನ್ನೂ ಸಂತ್ರಸ್ತರಾದರೆ, ಅಪರಾಧಿಗಳು ಸ್ವತಂತ್ರರಾದರು.

ನಮ್ಮ ದೇಶದಲ್ಲಿ ದಲಿತರು ಪ್ರತೀ ದಿನವೂ ದೌರ್ಜನ್ಯಕ್ಕೊಳಗಾಗುವುದಕ್ಕೆ ಇದೊಂದು ಸಣ್ಣ ಉದಾಹರಣೆ ಮಾತ್ರವಾಗಿದೆ. ಅವರು ಮೌನ ಹಾಗೂ ಆಧೀನತೆಯಿಂದ ಕೊರಗುತ್ತಿದ್ದಾರೆ.

ವಾಸ್ತವದಲ್ಲಿ ಅವರು ಹತಾಶರಾಗಬೇಕಾದ ಅಗತ್ಯವಿಲ್ಲ. ಈ ದೇಶದಲ್ಲಿ ದೌರ್ಜನ್ಯಕ್ಕೊಳಗಾಗುತ್ತಿರುವವರು ತುಂಬಾ ಮಂದಿಯಿದ್ದಾರೆ. ಒಂದು ಸಣ್ಣ ವರ್ಗ ಮಾತ್ರವಾಗಿದೆ ಅವರನ್ನು ದೌರ್ಜನ್ಯಕ್ಕೊಳಪಡಿಸುತ್ತಿರುವುದು. ದೌರ್ಜನ್ಯಕ್ಕೊಳಪಡುತ್ತಿರುವವರು ಒಗ್ಗಟ್ಟಾದರೆ, ದೌರ್ಜನ್ಯವನ್ನು ಮಾಡುವವರು ಅತ್ಯಂತ ಅಲ್ಪಸಂಖ್ಯಾತರಾಗಿದ್ದಾರೆ. ಈ ವಾಸ್ತವವನ್ನು ಅರಿಯುವ ಮತ್ತು ಅದನ್ನು ಮನವರಿಕೆ ಮಾಡಿಕೊಡುವ ಅಗತ್ಯ ಆ ವರ್ಗಗಳಲ್ಲಿರುವ ಶಿಕ್ಷಣವಂತರ ಮೇಲಿದೆ.

## ■ ಬಹ್ರೈನ್ ಜನತೆಯೊಂದಿಗೆ ಐಕ್ಯಮತ ತೋರಿದ ಕಾಶ್ಮೀರಿಗಳು

ಶ್ರೀನಗರ: ಅರಬ್ ಮಧ್ಯಪ್ರಾಚ್ಯ ಹಾಗೂ ಉತ್ತರ ಆಫ್ರಿಕದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಎದ್ದಿರುವ ಬಂಡಾಯಕ್ಕೆ ಐಕ್ಯಮತ ತೋರಿ ಮತ್ತು ಬಂಡಾಯವನ್ನು ಹತ್ತಿಕ್ಕಲು ಬಹ್ರೈನ್‌ನ ಪ್ರಯತ್ನವನ್ನು ವಿರೋಧಿಸಿ ಮಧ್ಯ ಕಾಶ್ಮೀರದಲ್ಲಿ ಇತ್ತೀಚೆಗೆ ಪ್ರತಿಭಟನೆಯೊಂದು ನಡೆಯಿತು.

ಶುಕ್ರವಾರದ ಪ್ರಾರ್ಥನೆಯ ಬಳಿಕ ಬುಧ್‌ಗಾಮ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಅವರು ಬಹ್ರೈನ್ ಜನತೆಯ ಪರವಾಗಿ ಮತ್ತು ಅರಬ್ ಸರ್ವಾಧಿಕಾರಿಗಳ ವಿರುದ್ಧವಾಗಿ ಘೋಷಣೆಗಳನ್ನು ಕೂಗುತ್ತಿದ್ದರು.

## ■ ಹಂಗಾಮಿ ಸರಕಾರ ವಜಾಗೊಳಿಸಲು ತುನೀಸಿಯಾದಲ್ಲಿ ಪ್ರತಿಭಟನೆ



ತುನೀಸ್: ಸರ್ವಾಧಿಕಾರಿ ಝೈನ್ ಉಲ್ ಆಬಿದೀನ್ ಬಿನ್ ಅಲಿಯನ್ನು ಉಚ್ಛಾಟಿಸುವ ಮೂಲಕ ತುನೀಸಿಯಾದ ಜನತೆ ತಮ್ಮ ಹೋರಾಟವನ್ನು ನಿಲ್ಲಿಸಿಲ್ಲ. ಹೊಸ ಸರಕಾರವು ಹಳೆಯ ಸರ್ವಾಧಿಕಾರಿಗಳಿಂದ ಸಂಪೂರ್ಣವಾಗಿ ಮುಕ್ತವಾಗಿರಬೇಕು ಎನ್ನುವ ನಿಟ್ಟಿನಲ್ಲಿ ಅವರ ಹೋರಾಟವು ಇನ್ನೂ ಮುಂದುವರಿದಿದೆ.

ಎಪ್ರಿಲ್ 25ರಂದು ಇಲ್ಲಿನ ರಾಜಧಾನಿ ತುನೀಸ್‌ನಲ್ಲಿ ಸಾವಿರಾರು ಮಂದಿ ಬೀದಿಗಿಳಿದ ಹಂಗಾಮಿ ಸರಕಾರ ಮತ್ತು ಅದರ ಪ್ರಧಾನಿ ಬಿಜಿ ಕಾಯ್ದ್ ಎಸೆಬ್ಸಿಯನ್ನು ವಜಾಗೊಳಿಸಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

1988ರಲ್ಲಿ ಝೈನ್ ಉಲ್ ಆಬಿದೀನ್‌ನಿಂದ ಸ್ಥಾಪಿಸಲ್ಪಟ್ಟಿರುವ ಕಾನ್‌ಸ್ಟಿಟ್ಯೂಶನಲ್ ಡೆಮಾಕ್ರಟಿಕ್ ರ್‍ಯಾಲಿ ಪಾರ್ಟಿ (ಆರ್‌ಸಿಡಿ)ಯನ್ನು ವಜಾಗೊಳಿಸಲು ಎಪ್ರಿಲ್ 22ರಂದು ತುನೀಸಿಯಾದ ಕೋರ್ಟ್ ಒಪ್ಪಿತ್ತು.

ಸಂವಿಧಾನವನ್ನು ಮರು ತಿದ್ದುಪಡಿಗೊಳಿಸುವುದಕ್ಕಾಗಿ ಚುನಾಯಿಸಲಾಗುವ ರಾಷ್ಟ್ರೀಯ ಅಸೆಂಬ್ಲಿಯಲ್ಲೂ ಈ ಪಕ್ಷದ ಯಾವುದೇ ಸದಸ್ಯನು ಸ್ಪರ್ಧಿಸಬಾರದು ಎಂದೂ ಅಲ್ಲಿನ ನ್ಯಾಯಾಲಯ ತೀರ್ಮಾನಿಸಿದೆ.

ಜುಲೈ 24ರಂದು ನಡೆಯುವ ಈ ಚುನಾವಣೆಯಲ್ಲಿ ಬಿನ್ ಅಲಿಯ ಬೆಂಬಲಿಗರನ್ನು ದೂರವಿಡುವುದು ದೇಶದ ಸ್ಥಿರತೆಗೆ ಧಕ್ಕೆ ತರಬಹುದೆಂದು ಪ್ರಧಾನಿ ಎಸೆಬ್ಸಿ ನುಡಿದಿರುವುದರಿಂದ ಜನ ಮತ್ತೆ ಪ್ರತಿಭಟನೆಯನ್ನು ಆರಂಭಿಸಿದ್ದಾರೆ.

ವಜಾಗೊಂಡ ನಂತರ ಈಗ ಸೌದಿ ಅರೇಬಿಯಾದಲ್ಲಿ ಆಶ್ರಯ ಪಡೆದಿರುವ ಬೆನ್ ಅಲಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದೂ ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ನ್ಯಾಯಾಂಗ ಸಚಿವಾಲಯದ ಪ್ರಕಾರ, ವಜಾಗೊಂಡಿರುವ ಅಧ್ಯಕ್ಷನ ವಿರುದ್ಧ ಕೊಲೆ ಹಾಗೂ ಮಾದಕ ದ್ರವ್ಯ ಸಾಗಾಟವನ್ನೊಳಗೊಂಡಂತೆ 18 ಕೇಸುಗಳನ್ನು ದಾಖಲಿಸಲು ತುನೀಸಿಯಾದ ನ್ಯಾಯಾಧೀಶರು ನಿರ್ಧರಿಸಿದ್ದಾರೆ. ಅಲ್ಲದೆ ಆತನ ಕುಟುಂಬದ ವಿರುದ್ಧವೂ ಕೇಸುಗಳನ್ನು ದಾಖಲಿಸಲಾಗುವುದು ಎಂದು ಹೇಳಲಾಗಿದೆ.

## ■ ತುನೀಸಿಯಾಗೆ ವಲಸೆ ಹೋಗುತ್ತಿರುವ ಲಿಬಿಯಾ ನಾಗರಿಕರು

ಬೆಂಗಾಝಿ: ಕಳೆದ ಎರಡು ವಾರಗಳಲ್ಲಿ ಲಿಬಿಯಾದಿಂದ ಸುಮಾರು 15,000 ಮಂದಿ ತುನೀಸಿಯಾಗೆ ವಲಸೆ ಹೋಗಿದ್ದಾರೆ ಎಂದು ವಲಸಿಗರಿಗಿರುವ ವಿಶ್ವಸಂಸ್ಥೆಯ ಉನ್ನತ ಆಯೋಗ (ಯುಎನ್‌ಎಚ್‌ಸಿಆರ್)ವು ತಿಳಿಸಿದೆ.

''ಕಳೆದೆರಡು ವಾರಗಳಲ್ಲಿ ಸುಮಾರು 15,000 ಮಂದಿ ಈ ಪ್ರದೇಶವನ್ನು ತೊರೆದಿದ್ದು, ದಹಿಬಾದ ಗಡಿಯನ್ನು ದಾಟಿದ್ದಾರೆ'' ಎಂದು ಯುಎನ್‌ಎಚ್‌ಸಿಆರ್‌ನ ವಕ್ತಾರ ಆ್ಯಂಡ್ರ್ಯೂ ಹಾರ್ಪರ್ಸ್ ತಿಳಿಸಿದ್ದಾರೆ.

ನೆರೆಯ ದೇಶಗಳಿಗೆ ಇನ್ನೂ ಹೆಚ್ಚು ಲಿಬಿಯನ್ನರ ಒಳ ಹರಿವಿನ ಬಗ್ಗೆ ವಿಶ್ವ ಸಂಸ್ಥೆ ಎಚ್ಚರಿಸಿದೆ. ಇದು ಒಂದು ಬೃಹತ್ ವಲಸೆಯ ಆರಂಭವಾಗಿದೆ ಎಂದು ಅದು ಭಯ ವ್ಯಕ್ತಪಡಿಸಿದೆ.



ದೇಶದ ಪಶ್ಚಿಮ ಪರ್ವತ ಪ್ರದೇಶದಲ್ಲಿ ಲಿಬಿಯಾ ಆಡಳಿತಗಾರ ಮುಅಮ್ಮರ್ ಗದ್ದಾಫಿಯ ನಿಷ್ಠರ ವಿರುದ್ಧ ಅಮೆರಿಕ ನೇತೃತ್ವದ ಪಡೆ ದಾಳಿಗಳನ್ನು ಆರಂಭಿಸಿದ ನಂತರ ಈ ಬೆಳವಣಿಗೆಗಳು ನಡೆದಿವೆ.

ಕಳೆದೊಂದು ವಾರದಲ್ಲಿ ಹಲವು ನಾಗರಿಕರು ಈ ದಾಳಿಗಳಲ್ಲಿ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ.

ನಲೂತ್, ಕಲಾ, ಯರ್ಫಾನ್ ಮತ್ತು ಝಿಂತಾನ್ ನಗರಗಳನ್ನೊಳಗೊಂಡ ಈ ಪ್ರದೇಶವು ಅಂತಾರಾಷ್ಟ್ರೀಯವಾಗಿ ಗಮನ ಸೆಳೆದಿದೆ.

ತನ್ಮಧ್ಯೆ, ಲಿಬಿಯಾದಲ್ಲಿ ಮಾನವೀಯ ನೆರವು ಕಾರ್ಯಾಚರಣೆಯು

ಅತ್ಯಂತ ಕಷ್ಟ ಹಾಗೂ ಅಪಾಯಕರವಾಗಿದೆ ಎಂದು ವಿಶ್ವ ಸಂಸ್ಥೆಯ ಮಾನವೀಯ ನೆರವು ವ್ಯವಹಾರಗಳ ಕಾರ್ಯದರ್ಶಿ ವಲೆರೀಸ್ ಅಮೊಸ್ ಹೇಳಿದ್ದಾರೆ.

ಅಮೊಸ್ ಈ ಹಿಂದೆ ಲಿಬಿಯಾದ ರಾಜಧಾನಿ ಟ್ರಿಪೋಲಿ ಹಾಗೂ ಮಿಸ್ರತ್‌ಗೆ ಭೇಟಿ ನೀಡಿದ್ದಾರೆ. ಲಿಬಿಯಾದಲ್ಲಿ ನೆರವು ಕಾರ್ಯಕ್ರಮಗಳನ್ನು ನಡೆಸುವ ಮಾನವ ಹಕ್ಕು ಕಾರ್ಯಕರ್ತರು ಆಗಾಗ್ಗೆ ಅಪಾಯಕ್ಕೊಳಗಾಗುತ್ತಾರೆ.

ಆಡಳಿತದ ನಿಷ್ಠರು ಮತ್ತು ಕ್ರಾಂತಿಕಾರಿಗಳ ನಡುವೆ ಮಿಸ್ರತ್‌ನಲ್ಲಿ ಹೋರಾಟವು ನಡೆಯುತ್ತಿದೆ. ಎರಡೂ ಬಣಗಳಲ್ಲಿ ಸಾವು ನೋವುಗಳ ಸಂಭವಿಸುತ್ತಿವೆ. ಇಲ್ಲಿ ಜನರು ಬೀದಿಯಲ್ಲಿ ಸಂಚರಿಸಲು ಆತಂಕ ಪಡಬೇಕಾದ ಪರಿಸ್ಥಿತಿಯಂಟಾಗಿದೆ.

## ■ ಅಫ್ಘಾನ್‌ನಲ್ಲಿ ನ್ಯಾಟೊ ಹೆಲಿಕಾಪ್ಟರ್ ದುರಂತ

ಕಾಬುಲ್: ಯುದ್ಧ ಜರ್ಝರಿತ ಅಫ್ಘಾನ್‌ನಲ್ಲಿ ಅಮೆರಿಕ ನೇತೃತ್ವದ ನ್ಯಾಟೊ ಪಡೆಯ ಹೆಲಿಕಾಪ್ಟರ್‌ವೊಂದು ಅಪಘಾತಕ್ಕೀಯಾಗಿದೆ.

ಅಫ್ಘಾನಿಸ್ತಾನದ ರಾಜಧಾನಿ ಕಾಬುಲ್‌ನ ಉತ್ತರಕ್ಕೆ 65 ಕಿ.ಮೀ. ದೂರದಲ್ಲಿರುವ ಕಾಪಿಸಾ ಪ್ರಾಂತ್ಯದಲ್ಲಿ ನ್ಯಾಟೊ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದೆ ಎಂದು ನ್ಯಾಟೊ ನೇತೃತ್ವದ ಅಂತಾರಾಷ್ಟ್ರೀಯ ಭದ್ರತಾ ನೆರವು ಪಡೆ (ಐಎಸ್‌ಎಎಫ್) ಹೇಳಿಕೆಯಲ್ಲಿ ತಿಳಿಸಿದೆ.

ಸಾವು ನೋವುಗಳು ಸಂಭವಿಸಿದ ಬಗ್ಗೆ ಯಾವುದೇ ವರದಿಯಾಗಿಲ್ಲ.

## ■ ಸಿರಿಯಾದಲ್ಲಿ ಮುಂದುವರಿದ ಪ್ರತಿಭಟನೆ



ಸಿರಿಯಾ: ಸಿರಿಯಾದಲ್ಲಿ ಸುಧಾರಣೆ ಪರ ಪ್ರತಿಭಟನೆಗಳು ಮುಂದುವರಿದಿದ್ದು, ಎಪ್ರಿಲ್ 22ರಂದು ಶುಕ್ರವಾರ ದಕ್ಷಿಣ ನಗರವಾದ ದರಾದಲ್ಲಿ ಸಾವಿರಾರು ಮಂದಿ ಪ್ರತಿಭಟನೆಗಾಗಿ ಬೀದಿಗಿಳಿದಿದ್ದಾರೆ.

ಸುಧಾರಣೆ ಪರ ಪ್ರತಿಭಟನೆಗಳು ಆರಂಭವಾದ ನಂತರ ಒಟ್ಟು 75 ಮಂದಿ ಸಾವನ್ನಪ್ಪಿದ್ದಾರೆ.

ಡಮಾಸ್ಕಸ್, ಹಾಮ್ಸ್, ಡೌಮಾ ಮತ್ತು ಕಾಮಿಶಿಯಲ್ಲೂ ಪ್ರತಿಭಟನೆಗಳು ನಡೆದಿವೆ. ಮಾರ್ಚ್ ತಿಂಗಳಲ್ಲಿ ಆರಂಭವಾಗಿ ಸಿರಿಯಾ ಹಲವು ಪ್ರತಿಭಟನೆಗಳನ್ನು ಕಂಡಿದೆ. ಶುಕ್ರವಾರ ನಡೆದ ಪ್ರತಿಭಟನೆಯು ಇನ್ನೂ ತೀವ್ರವಾಗಿತ್ತು.

ಮಾನವ ಹಕ್ಕು ಕಾರ್ಯಕರ್ತರು ಹೇಳುವ ಪ್ರಕಾರ ಇದುವರೆಗೆ ಸಿರಿಯಾದಲ್ಲಿ 200 ಮಂದಿ ಸಾವನ್ನಪಿದ್ದಾರೆ.

ಹಿಂಸೆಗೆ ಸರಕಾರವೇ ಹೊಣೆ ಎಂದು ಪ್ರತಿಭಟನಕಾರರು ಹೇಳಿದ್ದಾರೆ. ಆದರೆ ಸಾವು-ನೋವಿಗೆ ಭದ್ರತಾ ಪಡೆಗಳು ಹೊಣೆಯೆಂಬ ಆರೋಪವನ್ನು ಸರಕಾರ ತಿರಸ್ಕರಿಸುತ್ತಲೇ ಬಂದಿದೆ. ನಾಗರಿಕರನ್ನು ಗಾಯಗೊಳಿಸದಂತೆ ಭದ್ರತಾ ಪಡೆಗಳಿಗೆ ಸೂಚನೆ ನೀಡಲಾಗುತ್ತಿದೆ ಎಂದು ಅದು ಹೇಳುತ್ತಾ ಬಂದಿದೆ.

ಈ ಪ್ರತಿಭಟನೆಗಳ ಹಿಂದೆ ಸಶಸ್ತ್ರ ಸಂಘಟನೆಗಳು ಹಾಗೂ ವಿದೇಶಿ ಶಕ್ತಿಗಳಿವೆ ಎಂದು ಸಿರಿಯಾ ಅಧಿಕಾರಿಗಳು ಹೇಳುತ್ತಾ ಬಂದಿದ್ದಾರೆ.

ದಶಕಗಳಿಂದ ವಿಧಿಸಲಾಗಿರುವ ತುರ್ತು ಪರಿಸ್ಥಿತಿಯನ್ನು ಹಿಂದೆಗೆಯುವುದಕ್ಕೆ ಒಪ್ಪಿ ಸಿರಿಯಾ ಅಧ್ಯಕ್ಷ ಬಶರ್ ಅಲ್ ಅಸದ್ ಸಹಿ ನಡೆಸಿದ ಒಂದು ದಿನ ನಂತರ ಈ ಪ್ರತಿಭಟನೆಗಳು ನಡೆದಿವೆ. ಪ್ರತಿಭಟನಕಾರರ ಪ್ರಮುಖ ಬೇಡಿಕೆಗಳಲ್ಲಿ ತುರ್ತು ಪರಿಸ್ಥಿತಿ ಹಿಂದೆಗೆಯುವುದು ಕೂಡ ಒಂದಾಗಿತ್ತು.

| ಕ್ವಿಝ್ ಟೈಮ್-6ರ ಉತ್ತರಗಳು | |
|---|---|
| 1.ಹರ್ಷವರ್ಧನ | 6.ಜೇಮ್ಸ್ ಕ್ಯಾಮರಾನ್ |
| 2.ತಾಜ್‌ಮಹಲ್ | 7.ಜೋಹಾನ್ ಕುಟೆನ್‌ಬರ್ಗ್ |
| 3.ರವೀಂದ್ರನಾಥ ಠಾಗೂರ್ | 8.ಎಲಿಯಾಸ್ ಹೂವೆ |
| 4.ಅಲೆಗ್ಸಾಂಡರ್ | 9.ಈಡನ್‌ಗಾರ್ಡನ್ |
| 5.ಸರೋಜಿನಿ ನಾಯ್ಡು | 10.ಶೇ.5.2 |


ಕರಾವಳಿಯ ಜನತೆಗೊಂದು ನೂತನ ಕೊಡುಗೆ
ಶುಭಾರಂಭಗೊಂಡಿದೆ
MEGA CHOICE
ಗೃಹೋಪಯೋಗಿ ವಸ್ತುಗಳು, ಗೃಹ ಅಲಂಕಾರಿಕ ವಸ್ತುಗಳು, ಆಟಿಕೆಗಳು, ವಿದ್ಯಾರ್ಥಿಗಳ ನಿತ್ಯೋಪಯೋಗಿ ವಸ್ತುಗಳು, ಸುಗಂಧ ದ್ರವ್ಯಗಳು, ಮೊಬೈಲ್ ಫೋನ್‌ಗಳು ಹಾಗೂ ಇನ್ನಿತರ ಅಗತ್ಯ ಸಾಮಾಗ್ರಿಗಳ ಅಪೂರ್ವ ಸಂಗ್ರಹದ ನೂತನ ಮಳಿಗೆ.
GOLDEN SQUARE, SHOP NO.FF2,FF4, FF7,FF8,
MAIDAN 3RD CROSS ROAD, MANGALORE-1

***If Undeliverd, Pls Return to***
Prasthutha Fortnightly
9-9-481/2(2),5th Cross, J.M.Road
Bunder, Mangalore - 575001

"REGISTERED"
R.No.:KA/SK/MNG/994/2010-2012
**Licensed to post without prepayment**
**License SK/MNG/WPP/71**




Posted at H.P.O.Mangalore, Posted on 13th & 28th of Every Month